REPORT REPORT REPORT REPORT

# ಸ್ತ್ರೀಯರ ಮೇಲಿನ ಹಿಂಸೆ

## ಒಂದು ಸಮಾಲೋಚನೆ

ಎನ್. ಶಾಂತಾ ಮೋಹನ್

ಬಿ. ಕೆ. ಅನಿತಾ

ಸಿ. ಶ್ರೀನಾಥ್

ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ

ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ

ಬೆಂಗಳೂರು – ೫೬೦ ೦೧೨

# ಸ್ತ್ರೀಯರ ಮೇಲಿನ ಹಿಂಸೆ

## ಒಂದು ಸಮಾಲೋಚನೆ

ಡಾ|| ಎನ್. ಶಾಂತಾ ಮೋಹನ್
ಡಾ|| ಬಿ. ಕೆ. ಅನಿತಾ
ಶ್ರೀ. ಸಿ. ಶ್ರೀನಾಥ್

**NIAS PUBLICATION R6-00**

ಲಿಂಗಭೇದ ಅಧ್ಯಯನ ಘಟಕ
**ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ**
ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ
ಬೆಂಗಳೂರು - 560 012

©ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
2000

ಪ್ರಕಾಶಕರು
ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
ಭಾರತೀಯ ವಿಜ್ಞಾನ ಸಂಸ್ಥೆ ಆವರಣ
ಬೆಂಗಳೂರು - 560 012

ದರ : ರೂ. 150/-

*ವರದಿ ಪ್ರತಿಗಾಗಿ ಸಂಪರ್ಕಿಸಿ:*
ಕಂಟ್ರೋಲರ್
ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
ಭಾರತೀಯ ವಿಜ್ಞಾನ ಸಂಸ್ಥೆ ಆವರಣ
ಬೆಂಗಳೂರು - 560 012
ದೂರವಾಣಿ: 080-3344351
ಇ-ಮೇಲ್: mgp@nias.iisc.ernet.in

ISBN 81-87663-13-8

ಮುದ್ರಕರು
ವರ್ಬಾ ನೆಟ್‌ವರ್ಕ್ ಸರ್ವೀಸ್
139, ಕೋಜಿ ಅಪಾರ್ಟ್‌ಮೆಂಟ್ಸ್, 8ನೇ ಮುಖ್ಯರಸ್ತೆ
12ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003
ದೂರವಾಣಿ : 3346692

## ಪರಿವಿಡಿ


I. ಕೃತಜ್ಞತೆಗಳು ........ 5

II. ಹಿನ್ನೆಲೆ ........ 7

III. ವಿಚಾರ ಸಂಕಿರಣದ ವಿವರ ........ 8

ಸ್ವಾಗತ ........ 8

ಕ್ಷೇತ್ರ ಅನುಭವ ........ 22

ಅಂಕಣ ಸಭೆ ........ 38

IV. ಗುಂಪು ಚರ್ಚೆಗಳು ........ 46

VI. ಮುಕ್ತಾಯ ........ 55


## ಪುರವಣಿ


I. ಪತ್ರಿಕಾ ಪ್ರಕಟಣೆಗಳು ........ 59

II. ಭಾಗವಹಿಸಿದವರ ಪಟ್ಟಿ ........ 61

# ಕೃತಜ್ಞತೆಗಳು

ಈ ಸಮಾಲೋಚನೆಯಲ್ಲಿ ಭಾಗವಹಿಸಿ, ಇದರ ಯಶಸ್ಸಿಗೆ ಕಾರಣರಾಗಿರುವ ಎಸ್.ಆರ್.ಡಬ್ಲ್ಯೂ.ಕೆ.ಯ ಸಹಭಾಗಿ ಸಂಸ್ಥೆಗಳು ಮತ್ತು ಎಲ್ಲ ಸಮುದಾಯಗಳ ಪ್ರತಿನಿಧಿಗಳಿಗೆ ನಾವು ಕೃತಜ್ಞರಾಗಿದ್ದೇವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ತಮಗಿರುವ ಕಾಳಜಿಯನ್ನು ಹಂಚಿಕೊಂಡ, ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಾನ್ಯಸಚಿವೆ ಮೋಟಮ್ಮನವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಭಾಗವಹಿಸಿದ್ದವರೊಂದಿಗೆ ಅವರು ನಡೆಸಿಕೊಟ್ಟ 'ಮಾತುಕತೆ'ಯಿಂದ ಈ ಸಮಾಲೋಚನೆಗೆ ತುಂಬಾ ಲಾಭವಾಗಿದೆ. ಸಮಾಲೋಚನೆಯಲ್ಲಿ ಉಪಯುಕ್ತ ಸಲಹೆ ಸೂಚನೆ ನೀಡಿ, ಅರ್ಥ ಪೂರ್ಣವಾಗಿ ಭಾಗವಹಿಸಿದ ಎಲ್ಲ ಅಭ್ಯರ್ಥಿಗಳಿಗೂ ಮತ್ತು ಮಾಧ್ಯಮದವರಿಗೂ ನಾವು ತುಂಬಾ ಆಭಾರಿಯಾಗಿದ್ದೇವೆ.

ನಿಯಾಸ್‌ನ ನಿರ್ದೇಶಕ ಪ್ರೊ॥ ರೊದ್ದಂ ನರಸಿಂಹ ಮತ್ತು ಸಂಸ್ಥೆಯ ಇನ್ನಿತರ ಸದಸ್ಯರಿಗೆ ನಮ್ಮ ಅನಂತ ಧನ್ಯವಾದಗಳು. ಇವರೆಲ್ಲ ನಮ್ಮ ಕಾರ್ಯ, ಪ್ರಯತ್ನಗಳನ್ನು ಮೆಚ್ಚಿಕೊಂಡು ಪ್ರೋತ್ಸಾಹ ನೀಡಿ ಆಸಕ್ತಿ ತೋರಿದ್ದಾರೆ. ಹಾಗೆಯೇ, ತಮ್ಮ ಸಮರ್ಥ ಆಡಳಿತಾತ್ಮಕ ಬೆಂಬಲ ನೀಡಿದ ಮೇ॥ ಜ॥ ಎಂ.ಕೆ. ಪಾಲ್, ನಿಯಂತ್ರಕರು ಮತ್ತು ಆಡಳಿತ ಸಿಬ್ಬಂದಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ವಿಭಾಗದಲ್ಲಿನ ನಮ್ಮ ಸಹೋದ್ಯೋಗಿಗಳಾದ ಶ್ರೀಮತಿ. ಆಶಾ ರಮೇಶ, ಶ್ರೀಮತಿ. ಪಿಯೂಶ್ ಆಂಟೋನಿ, ಶ್ರೀಮತಿ. ಎನ್. ಸುಧಾಮಣಿ, ಡಾ॥ ಕೆ.ಜೆ. ಪರಮೇಶ್ವರಪ್ಪ, ಡಾ॥ ಪಿ. ಪುಗಳೇಂದಿ, ಶ್ರೀ ಎಚ್. ಆರ್. ರಾಜೇಂದ್ರ, ಶ್ರೀ ಎಚ್. ವೇಣುಗೋಪಾಲ್ ಮತ್ತು ಶ್ರೀ ಮಹೇಶ್ ಕುಮಾರ್, ಪಿ.ಬಿ. – ಇವರೆಲ್ಲ ಕ್ಷೇತ್ರಕಾರ್ಯ ನಡೆಸುವಲ್ಲಿ, ಈ ವರದಿಯನ್ನು ಸಿದ್ಧಗೊಳಿಸುವಲ್ಲಿ ದಣಿವರಿಯದೇ ಶ್ರಮಿಸಿದ್ದಾರೆ. ಇವರಿಗೆಲ್ಲ ನಾವು ಆಭಾರಿಗಳಾಗಿದ್ದೇವೆ.

ಡಾ॥ ಸಂಗೀತ ಪುರುಷೋತ್ತಮ ಅತ್ಯಂತ ಕಡಿಮೆ ಅವಧಿಯಲ್ಲಿ ರ್‍ಯಾಪೋರ್ಟರ್ಸ್ ವರದಿ ಸಿದ್ಧಗೊಳಿಸಿದ್ದಾರೆ. ಇವರಿಗೂ ನಾವು ಕೃತಜ್ಞರಾಗಿದ್ದೇವೆ.

ವರದಿಯನ್ನು ಸಮರ್ಥವಾಗಿ ಕನ್ನಡಕ್ಕೆ ಅನುವಾದ ಮಾಡಿಕೊಟ್ಟಿರುವ ಶ್ರೀ ಶಿವಾನಂದ ಹೊಂಬಳ ಅವರಿಗೆ ಕೃತಜ್ಞರಾಗಿದ್ದೇವೆ.

ಕೊನೆಯದಾಗಿ, ಫೋರ್ಡ್ ಫೌಂಡೇಷನ್‌ನ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯ, ಕಾರ್ಯಕ್ರಮ ಅಧಿಕಾರಿಗಳಾದ ಶ್ರೀಮತಿ. ಮಲ್ಲಿಕಾ ದತ್ತಾ ಅವರಿಗೂ ನಮ್ಮ ಕೃತಜ್ಞತೆಗಳು.

ಯೋಜನಾ ವರದಿ

ಆಗಸ್ಟ್ 14, 2000
ಬೆಂಗಳೂರು

ಡಾ॥ ಎನ್. ಶಾಂತಾ ಮೋಹನ್
ಡಾ ॥ ಬಿ. ಕೆ. ಅನಿತಾ
ಶ್ರೀ. ಸಿ. ಶ್ರೀನಾಥ್

## ಹಿನ್ನೆಲೆ

ಲಿಂಗ ಭೇದ ಅಧ್ಯಯನ ವಿಭಾಗದಿಂದ ನಡೆಸಲಾದ (NIAS) "ಸ್ತ್ರೀಯರ ಮೇಲಿನ ಹಿಂಸೆ" (VAW)- ಈ ಪ್ರಚಾರ ಯೋಜನೆಯನ್ನು , ನಮ್ಮ ಈ ಮುಂಚಿನ, "ಕರ್ನಾಟಕದಲ್ಲಿ ಗ್ರಾಮೀಣ ಮಹಿಳೆಯರ ಸ್ಥಾನಮಾನ "(SRWK) ಅಧ್ಯಯನದ ಆಧಾರದ ಹಿನ್ನೆಲೆಯಲ್ಲಿ ಪೂರ್ಣವಾಗಿ ವಿವರಿಸಲಾಗಿದೆ. ಈ ಅಧ್ಯಯನವು, ಸ್ತ್ರೀಯರನ್ನು ಅಪ ಮೌಲೀಕರಣಗೊಳಿಸಿದ ಅಂಶಗಳು ಮತ್ತು 'ಖಾಸಗೀ ಜೀವನ' ಎಂದು ಹೇಳಲಾಗುವ ತಮ್ಮ ಮನೆಗಳಲ್ಲಿಯೇ ಮಹಿಳೆಯ ಮೂಲಭೂತ ಹಕ್ಕುಗಳ ಉಲ್ಲಂಘನೆ ಆಗುತ್ತಿರುವ ಅಂಶಗಳ ಮೇಲೆ ಸ್ಪಷ್ಟವಾದ ಬೆಳಕು ಚೆಲ್ಲುತ್ತದೆ. ದಂಡನೆಯ ಹೆಸರಲ್ಲಿ ಸ್ತ್ರೀಯರ ಮೇಲೆ ನಡೆದ ದೌರ್ಜನ್ಯ, ಹಿಂಸೆಯ ಪ್ರಕರಣಗಳಲ್ಲಿ, ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಗಳು ಶೇಕಡಾ 70 ರಷ್ಟು ಅವರ ಗಂಡಂದಿರಿಂದಲೇ ಆಗಿವೆ. ಈ ದೌರ್ಜನ್ಯವನ್ನು ವಿರೋಧಿಸಿದ ಶೇಕಡಾ 30 ರಷ್ಟು ಮಹಿಳೆಯರು, ಸರ್ಕಾರೇತರ ಸಂಸ್ಥೆಗಳು (NGOs) ಕ್ರೀಯಾಶೀಲವಾಗಿರುವ ಕ್ಷೇತ್ರಗಳಲ್ಲಿ, ಅಥವಾ ಮಹಿಳೆಯರ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ತಮ್ಮ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ತೆಗೆದುಕೊಂಡಿರುವ ಸರಕಾರೇತರ ಸಂಸ್ಥೆಗಳು ಕಾರ್ಯಪ್ರವೃತ್ತರಾಗಿರುವ ಸ್ಥಳಗಳಲ್ಲಿ ಇದ್ದಾರೆ.

ಈ ಶೋಧಗಳ ಆಧಾರದ ಮೇಲೆ 'ಸ್ತ್ರೀಯರ ಮೇಲಿನ ಹಿಂಸೆ ' ಪ್ರಚಾರ ಯೋಜನೆಯನ್ನು ಕಾರ್ಯಕ್ರಮದ ಎರಡನೆಯ ಹಂತವಾಗಿ ಕೈಗೆತ್ತಿಕೊಳ್ಳಲಾಯಿತು. ಈ ಅಧ್ಯಯನದಲ್ಲಿ ಈಗಾಗಲೇ ಒಳಗೊಂಡಿದ್ದ ಸಮುದಾಯಗಳಿಗೆ ನಮಗಿದ್ದ ಬದ್ಧತೆಯ ಕಾರಣದಿಂದಾಗಿ, ಕರ್ನಾಟಕದ ವಿವಿಧ ಭೂಗೋಳಿಕ ಭಾಗಗಳನ್ನು ಪ್ರತಿನಿಧಿಸುವ ವಿಜಾಪುರ, ಕೊಪ್ಪಳ, ಚಿತ್ರದುರ್ಗ, ಕೋಲಾರ, ಕೊಡಗು ಮತ್ತು ಉಡುಪಿ ಜಿಲ್ಲೆಗಳಲ್ಲಿನ ಈ ಹಿಂದೆ ಆಯ್ದುಕೊಂಡಿದ್ದ ಹತ್ತು ಹಳ್ಳಿಗಳಲ್ಲಿಯೇ ಈ ಕಾರ್ಯವನ್ನು ಮುಂದುವರೆಸಲು ನಿರ್ಧರಿಸಲಾಯಿತು.

ನಾವು ಆಯ್ದುಕೊಂಡ ಜಿಲ್ಲೆಗಳಲ್ಲಿನ ಸಾಮಾಜಿಕ - ಆರ್ಥಿಕ ಪರಿಸ್ಥಿತಿಗಳು, ಸಾಂಸ್ಕೃತಿಕ ಸನ್ನಿವೇಶಗಳಲ್ಲಿನ ವ್ಯತ್ಯಾಸ ಹಾಗೂ ಮನೆಗಳಲ್ಲಿ ಜರುಗುವ ಹಿಂಸಾಪ್ರಕರಣಗಳಲ್ಲಿ ಇರುವ ಸೂಕ್ಷ್ಮತೆ ಇತ್ಯಾದಿಗಳ ಸಂಪೂರ್ಣ ಅರಿವು ನಮಗಿದ್ದುದರಿಂದ, ಸಮುದಾಯಗಳನ್ನು

ತೊಡಗಿಸಿಕೊಳ್ಳುವಂಥ ಸಹಭಾಗೀ ವಿಧಾನವನ್ನು ಅನುಸರಿಸಿದೆವು. ಹಿಂಸೆಯ ವಿವಿಧ ಮುಖಗಳನ್ನು ಅದು ನಡೆಯುವ ಸಾಮಾಜಿಕ ಹಿನ್ನೆಲೆಯಲ್ಲಿಯೇ ಅರ್ಥ ಮಾಡಿಕೊಳ್ಳಲು ಸಾಧ್ಯ ಎಂಬುದನ್ನು ಮನಗಂಡೆವು. ನಿರ್ದಿಷ್ಟ ಹಿಂಸಾ ಪ್ರಕರಣಗಳನ್ನು ಎದುರಿಸುವಾಗ ಅದರ ಸಾಂಸ್ಕೃತಿಕ ಹಿನ್ನೆಲೆಯನ್ನು ಅರಿಯುವ, ವಿಶ್ಲೇಷಿಸುವ ಮತ್ತು ಆ ಪ್ರಕಾರ ಪ್ರಚಾರಯೋಜನೆಯನ್ನು ರೂಪಿಸುವ ಪ್ರಯತ್ನ ಮಾಡಿದೆವು.

ಸ್ತ್ರೀಯರ ಮೇಲೆ ನಡೆಯುವ ಹಿಂಸೆ ಸಾಮಾಜಿಕವಾಗಿ ಒಪ್ಪಿಕೊಂಡಿರುವಂಥದು. ಇದಕ್ಕೆ ಮೂಲಕಾರಣ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನಮಾನಗಳು ಅಪಮೌಲ್ಯಕ್ಕೆ ಒಳಗಾಗಿರುವುದೇ. ಇದನ್ನು ಧರ್ಮ ಹಾಗೂ ರಾಜ್ಯಾಧಿಕಾರಗಳೂ ಬೆಂಬಲಿಸುತ್ತದೆ. ಇದೇ ದೃಷ್ಟಿಕೋನ, ಪರಿಸ್ಥಿತಿ ಖಾಸಗೀ ಹಾಗೂ ಸಾರ್ವಜನಿಕ ವಲಯಗಳಲ್ಲೂ ಪ್ರತಿಫಲಿತವಾಗುತ್ತಿದೆ. ಆದ್ದರಿಂದ ನಮ್ಮ ಪ್ರಚಾರ ಯೋಜನೆಯಲ್ಲಿ ಈ ಸಮಸ್ಯೆಗೆ ಜವಾಬ್ದಾರರಾಗಿರುವ ಎಲ್ಲಾ ಪ್ರಮುಖರು, ಅದರಲ್ಲೂ ಸಮುದಾಯ, ಸರಕಾರೇತರ ಸಂಸ್ಥೆಗಳು (NGOs), ಸರಕಾರ ಸ್ಥಳೀಯ ಸಂಸ್ಥೆಗಳು, ನ್ಯಾಯಾಂಗ, ಪೋಲಿಸ್ ಇಲಾಖೆ, ಹಾಗೂ ಮಾಧ್ಯಮದವರೂ ಭಾಗವಹಿಸಿರುತ್ತಾರೆ. ಆಯ್ದ ಜಿಲ್ಲೆಗಳಲ್ಲಿ, ಸರ್ಕಾರೇತರ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸಮುದಾಯದೊಂದಿಗೆ ಕೆಲಸ ಮಾಡುತ್ತಿದ್ದರೂ, ಪ್ರಚಾರ ಯೋಜನೆ ಕಾರ್ಯತಂತ್ರದ ರೂಪರೇಷೆಗಳನ್ನು ಯೋಜಿಸುವಲ್ಲಿ ಈ ಎಲ್ಲಾ ಪ್ರಮುಖರ ಭಾಗವಹಿಸುವಿಕೆ ಇರುತ್ತದೆ.

ಆಯ್ದ ಹತ್ತು ಹಳ್ಳಿಗಳಲ್ಲಿನ ಸಮುದಾಯ ಪ್ರತಿನಿಧಿಗಳೊಂದಿಗೆ ಗುಂಪು ಚರ್ಚೆ ನಡೆಸುವುದರೊಂದಿಗೆ ನಮ್ಮ ಪ್ರಚಾರ ಯೋಜನೆಯನ್ನು ಆರಂಭಿಸಿದೆವು. ಸಮುದಾಯಗಳೊಂದಿಗೆ ಕಾರ್ಯತಂತ್ರಗಳು ಹಾಗೂ ತಿಳುವಳಿಕೆಗಳನ್ನು ಹಂಚಿಕೊಳ್ಳಲು ಒಂದು ದಿನದ ಸಮಾಲೋಚನೆಯನ್ನು ನಡೆಸಲಾಯಿತು. ಈ ಸಮಾಲೋಚನೆಯಲ್ಲಿ ನಮ್ಮ ಅಧ್ಯಯನ ಭಾಗೀದಾರರು, ಸರಕಾರದ ಪ್ರತಿನಿಧಿಗಳು, ಪೋಲಿಸ್ ಅಧಿಕಾರಿಗಳು, ಸರಕಾರೇತರ ಸಂಸ್ಥೆಗಳು, ಮಾಧ್ಯಮಗಳು, ಬುದ್ಧಿಜೀವಿಗಳು ಇವರೆಲ್ಲರಿಗಿಂತ ಮುಖ್ಯವಾಗಿ ಆಯಾ ಹಳ್ಳಿಗಳ ಸಮುದಾಯ ಪ್ರತಿನಿಧಿಗಳೆಲ್ಲ ಭಾಗವಹಿಸಿದ್ದರು.

## ಸಮಾಲೋಚನೆಯ ನಡವಳಿಕೆಗಳು

### ಉದ್ಘಾಟನಾ ಸಮಾರಂಭ

ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ (NIAS) ನಿರ್ದೇಶಕರಾಗಿರುವ ಪ್ರೊ॥ ರೊದ್ದಂ ನರಸಿಂಹ ಅವರು, ತಮ್ಮ ಸ್ವಾಗತ ಭಾಷಣದಲ್ಲಿ, ನಿಯಾಸ್ ಉದ್ದೇಶ ಹಾಗೂ ಇತಿಹಾಸ ಕುರಿತು ಸಂಕ್ಷಿಪ್ತವಾಗಿ ತಿಳಿಸಿದರು. 12 ವರ್ಷಗಳ ಹಿಂದೆ ಜೆಆರ್‌ಡಿ ಟಾಟಾ ಅವರಿಂದ ಸ್ಥಾಪಿಸಲ್ಪಟ್ಟು, ಕರ್ನಾಟಕ ಸರಕಾರದ ಉದಾರ ಪ್ರೋತ್ಸಾಹ ಬೆಂಬಲ ಹೊಂದಿರುವ ನಿಯಾಸ್ ಈ ಮುಂದಿನ ಉದ್ದೇಶಗಳನ್ನು ಹೊಂದಿದೆ.


- ವಿಜ್ಞಾನ ಮತ್ತು ತಂತ್ರಜ್ಞಾನ, ಸಾಮಾಜಿಕ ವಿಜ್ಞಾನಗಳು ಕಲೆಗಳು ಮತ್ತು ಮಾನವಿಕ ಶಾಸ್ತ್ರಗಳು - ಹೀಗೆ ವಿವಿಧ ಜ್ಞಾನ ಶಾಖೆಗಳಿಂದ ಬರುವ ಜ್ಞಾನವನ್ನು

ಮುಖ್ಯ ಅತಿಥಿ ಸ್ವಾಗತ



ಡಾ|| ಶಾಂತಾ ಮೋಹನ್, ಫೆಲೋ, GSU, NIAS
ಶ್ರೀಮತಿ ಮೋಟಮ್ಮ, ಮಾನ್ಯ ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಪ್ರೊ. ಆರ್. ನರಸಿಂಹ, ನಿರ್ದೇಶಕರು, NIAS
ಮೇ|| ಜ|| ಎಮ್. ಕೆ. ಪಾಲ್, ಕಂಟ್ರೋಲರ್, NIAS

ಉದ್ಘಾಟನಾ ಭಾಷಣ




ಶ್ರೀಮತಿ ಮೋಟಮ್ಮ, ಮಾನ್ಯ ಮಂತ್ರಿಗಳು, W & CD

ಕ್ರೋಢೀಕರಿಸುವುದು. ಪ್ರತಿಯೊಂದು ಸಂಶೋಧನೆಯೂ ವಿವಿಧ - ಶಿಸ್ತುಗಳನ್ನು ತನ್ನಲ್ಲಿ ಹೊಂದಿರುತ್ತದೆ. ಜ್ಞಾನದ ಪ್ರತಿಯೊಂದು ಶಾಖೆಯಲ್ಲಿನ ಅತ್ಯುತ್ತಮ ಜ್ಞಾನವನ್ನು ಹೆಕ್ಕಿಕೊಂಡು, ನಮ್ಮ ಸಮಾಜ ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸಲು ಗುರಿ ಹೊಂದಿರುತ್ತದೆ.

- ಇಂಥ ಸಂಕೀರ್ಣ ಸಮಸ್ಯೆಗಳನ್ನು ಎದುರಿಸಲು ಸಮಾಜದ ಎಲ್ಲ ವಿಭಾಗಗಳಲ್ಲಿ ಹೊಸ ನಾಯಕತ್ವವನ್ನು ಹುಟ್ಟುಹಾಕುವುದು.

ಸಮಾಲೋಚನೆಯ ಬಗ್ಗೆ ಮಾತನಾಡುತ್ತಾ, "ಲಿಂಗಭೇದದ ವಿಷಯ, ಅದರಲ್ಲೂ ವಿಶೇಷವಾಗಿ ಮಹಿಳೆಯ ಸ್ಥಾನಮಾನದ ಬಗ್ಗೆ ಮೊದಲಿನಿಂದಲೂ ನಿಯಾಸ್ ಆಸಕ್ತಿ ಹೊಂದಿದೆ" ಎಂದರು. ಲಿಂಗಭೇದ ಅಧ್ಯಯನ ವಿಭಾಗ ನಡೆಸಿದ 'ಕರ್ನಾಟಕದಲ್ಲಿ ಗ್ರಾಮೀಣ ಮಹಿಳೆಯರ ಸ್ಥಾನಮಾನ' ಎಂಬ ಅಧ್ಯಯನವು ರಾಜ್ಯದಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ ಇನ್ನೂ ಹೆಚ್ಚು ಅರಿಯಬೇಕಾಗಿದೆ ಎಂಬ ಅಂಶಕ್ಕೂ ಒತ್ತು ನೀಡಿದೆ ಎಂದರು. ಮುಂದುವರೆದು ತಮ್ಮ ಭಾಷಣದಲ್ಲಿ, "ನಮ್ಮ ಸಮಾಜವನ್ನು ಸಬಲಗೊಳಿಸಲು ಸ್ತ್ರೀಯರು ಆಡಳಿತದ ಮುಖ್ಯ ಧಾರೆಗೆ ಬರಬೇಕಾದುದು ತುಂಬ ಮುಖ್ಯ. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಗಂಭೀರತೆಯ ಬಗ್ಗೆ, ಸರಕಾರದಲ್ಲಿನ ಬೇರೆ ಬೇರೆ ಮಟ್ಟದ ಜನ, ಸಾರ್ವಜನಿಕರು ಹಾಗೂ ಬುದ್ಧಿಜೀವಿಗಳ ಗಮನ ಸೆಳೆಯಲು ನಿಯಾಸ್ ಪ್ರಯತ್ನ-ಶೀಲವಾಗಿದೆ. ಈ ಪ್ರಯತ್ನದ ಅಂಗವಾಗಿ ವಿಭಾಗವು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹೆಣ್ಣು ಮಕ್ಕಳ ಭಾಗಿತ್ವದ ಬಗ್ಗೆ - ವಿಸ್ತೃತವಾದ ಅಧ್ಯಯನ ಕೈಗೊಂಡಿದೆ." ಎಂದು ಹೇಳಿದರು.

ಇದರ ಮುಂದುವರೆದ ಕ್ರಿಯೆಯಾಗಿ, ಲಿಂಗಭೇದಕ್ಕೆ ಸಂಬಂಧಿಸಿದಂತೆ, ಮಹಿಳೆಯರ ವಿರುದ್ಧದ ಹಿಂಸೆಯ ಬಗ್ಗೆ ಸಮಾಲೋಚನೆಯನ್ನು ಏರ್ಪಡಿಸಲಾಗಿದೆ. ಮಹಿಳೆಯರ ಮೇಲಿನ ಹಿಂಸೆ ಒಂದು ಗಂಭೀರ ಸಮಸ್ಯೆಯಾಗಿಯೇ ಮುಂದುವರೆಯುತ್ತಿದೆ. ಆದ್ದರಿಂದ, ಈ ವಿಷಯದ ಬಗ್ಗೆ ಸಂಬಂಧಿಸಿದವರೆಲ್ಲ ಒಂದಾಗಿ ಹೋರಾಡುವ ಅಗತ್ಯವಿದೆ. ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ ಇನ್ನು ಮುಂದೆ ಕಾರ್ಯಪ್ರವೃತ್ತವಾಗುವ ಕಾರ್ಯತಂತ್ರಗಳನ್ನು ರೂಪಿಸಲು ಎಲ್ಲರೊಂದಿಗೆ ಕೈ ಜೋಡಿಸಲು ಸಿದ್ಧರಿದ್ದೇವೆ ಎಂದರು.

ಡಾ|| ಶಾಂತಾ ಮೋಹನ್ ತಮ್ಮ ಪರಿಚಯ ಭಾಷಣದಲ್ಲಿ, ಸಮಾಲೋಚನೆಯ ಹಿನ್ನೆಲೆ ಮತ್ತು ಅದರ ಅಗತ್ಯ ಕುರಿತು ಪ್ರಸ್ತಾಪಿಸಿದರು. ಲಿಂಗಭೇದ ಅಧ್ಯಯನ ವಿಭಾಗವು 1994 ರಲ್ಲಿ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಮಹಿಳೆಯರ ಸ್ಥಾನಮಾನ ಕುರಿತು ಅಧ್ಯಯನ ನಡೆಸಲು ಆರಂಭಿಸಿತು. ಈ ಅಧ್ಯಯನದ ಆಧಾರದ ಮೇಲೆ, ಸಮುದಾಯಗಳು ಪ್ರಾಮುಖ್ಯತೆ ನೀಡಿದ ಸಂಗತಿಯಾಗಿ ಪ್ರಚಾರ ಆಂದೋಲನವೂ ಯೋಜಿತವಾಯಿತು. ಇದರಲ್ಲಿ ಭಾಗಿಯಾಗಿದ್ದ ನಮ್ಮ ಸಹಭಾಗಿಗಳು ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯ ಬಗ್ಗೆ ನಮ್ಮ ಗಮನ ಕೇಂದ್ರೀಕರಿಸಬೇಕಾದ್ದು ಅಗತ್ಯ ಎಂದು ಭಾವಿಸಿದರು. ಮೊದಲು, ಮನೆಯಲ್ಲಿನ ಹಿಂಸೆಯ ಮೇಲೆ ಗಮನ ಕೇಂದ್ರೀಕರಿಸಬೇಕು ಎಂದು ನಿರ್ಧರಿಸಿದ್ದೆವು. ಅನಂತರ ಸಮುದಾಯಗಳು

ಯಾವ ವಿಷಯಗಳಿಗೆ ಪ್ರಾಮುಖ್ಯತೆ ನೀಡಬಯಸುತ್ತವೆ ಎಂಬುದನ್ನು ತಿಳಿಯಲು ನಿರ್ಧರಿಸಿದೆವು. ಸಮುದಾಯಗಳು ಮತ್ತು ಸರಕಾರೇತರ ಸಂಸ್ಥೆಗಳ ಭಾಗಿದಾರರೊಂದಿಗೆ ಆಳವಾಗಿ ಚರ್ಚಿಸಿದ ನಂತರ ಪ್ರತಿಯೊಂದು ಸಮುದಾಯವು ತನ್ನದೇ ಆದ ಆದ್ಯತಾ ವಿಷಯಗಳ ಪಟ್ಟಿ ಮಾಡಿದವು; ಕೊಡಗು ಜಿಲ್ಲೆ ರಾಜ್ಯಾಧಿಕಾರದಿಂದ - ಹಿಂಸೆ, ಬಾಲ್ಯವಿವಾಹ ಮತ್ತು ದೇವದಾಸಿ ಪದ್ಧತಿ ವಿಜಾಪುರ ಮತ್ತು ಕೊಪ್ಪಳ ಜಿಲ್ಲೆಗಳು; ಕೋಲಾರ ಜಿಲ್ಲೆ- ಮದ್ಯ ಪಾನ ವರದಕ್ಷಿಣೆ- ಚಿತ್ರದುರ್ಗ ಮತ್ತು ಉಡುಪಿ ಜಿಲ್ಲೆಗಳು; ಕೌಟುಂಬಿಕ-ಹಿಂಸೆ ಹಾಗೂ ಮಹಿಳೆಯರ ಮೇಲೆ ಅದರಿಂದಾಗುತ್ತಿರುವ ಪರಿಣಾಮಗಳ ವಿಷಯದ ಬಗ್ಗೆ ಸಮುದಾಯಗಳು ಮತ್ತು ಭಾಗಿದಾರರು ಮಹತ್ವ ನೀಡಿದರೂ, ಈ ವಿಷಯವನ್ನು ಕೈಗೆತ್ತಿಕೊಳ್ಳಲು ಕಾಲ ಇನ್ನೂ ಪಕ್ವವಾಗಿಲ್ಲ ಎಂದು ಭಾವಿಸಿದರು. ಆದ್ದರಿಂದ, ಮೇಲೆ ಕಾಣಿಸಿದ ವಿಷಯಗಳನ್ನು ಆರಂಭಿಕ ಹಂತಗಳೆಂದು ಪರಿಗಣಿಸುವುದು ಸೂಕ್ತ. ಕೇವಲ ನಾವು ಮಾತ್ರ ಪರಿವರ್ತನೆ ತರಲು ಸಾಧ್ಯವಾಗದು ಎಂದು ನಿಯಾಸ್‌ನಲ್ಲಿ ನಾವೆಲ್ಲ ಅರ್ಥಮಾಡಿಕೊಂಡಿದ್ದೇವೆ. ಈ ಸಮಸ್ಯೆಯನ್ನು ಎದುರಿಸಲು ಪೋಲಿಸ್, ಮಾಧ್ಯಮ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸೇರಿಸಿಕೊಂಡು ಒಟ್ಟಾಗಿ ಕಾರ್ಯಪ್ರವೃತ್ತರಾಗಬೇಕಾದ್ದು ಅವಶ್ಯ. ಹಿಂಸೆಯ ಬಗೆಗಿನ ತಮ್ಮ ಅನುಭವಗಳನ್ನು-ಭಾವನೆಗಳನ್ನು ಹಂಚಿಕೊಂಡು, ಸಮಸ್ಯೆಗೆ ಪರಿಹಾರಗಳನ್ನು ಕಂಡುಕೊಳ್ಳಲು ಸಮುದಾಯಗಳ ಪ್ರತಿನಿಧಿಗಳೆಲ್ಲ ಇಲ್ಲಿ ಸೇರಿದ್ದಾರೆ. ಮಹಿಳೆಯರ ಮೇಲಿನ ಹಿಂಸೆಯನ್ನು ಎದುರಿಸಲು - ತಡೆಗಟ್ಟಲು ಹಂತ ಹಂತವಾದ ಕಾರ್ಯಯೋಜನೆಗಳನ್ನು ರೂಪಿಸಲು ನಾವೆಲ್ಲ ಇಲ್ಲಿ ಸೇರಿದ್ದೇವೆ. ಇಲ್ಲಿನ ಪ್ರಶ್ನೆ ಎಂದರೆ, ನಾವೆಲ್ಲ ಈ ಪ್ರಕ್ರಿಯೆಯಲ್ಲಿ ಹೇಗೆ ಭಾಗೀದಾರರಾಗುತ್ತೇವೆ ಮತ್ತು ಸಮುದಾಯಗಳಲ್ಲಿ ಹೇಗೆ ಬದಲಾವಣೆ ತರುತ್ತೇವೆ ಎಂಬುದು. ಈ ಸಮಾಲೋಚನೆಯ ಮುಖ್ಯ ಉದ್ದೇಶವೇ ಇದು. ಎಲ್ಲರೂ ಸೇರಿ ಚರ್ಚೆಮಾಡಿ ಹಿಂಸಾ ರಹಿತ ಸಮಾಜವನ್ನು, ಅನುಕರಣೀಯ ಮಾದರಿಗಳನ್ನು ಸೃಷ್ಟಿಸಲು ಕಾರ್ಯತಂತ್ರಗಳನ್ನು ರೂಪಿಸಲು ಯತ್ನಿಸೋಣ.

## ಉದ್ಘಾಟನಾ ಭಾಷಣ

ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆಯರಾದ ಸನ್ಮಾನ್ಯ ಶ್ರೀಮತಿ ಮೋಟಮ್ಮ, ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ಬಗೆಯ ಸಮಾಲೋಚನೆಯ ಬಗ್ಗೆ ಬಹುವಾಗಿ ಮೆಚ್ಚುಗೆ ವ್ಯಕ್ತಪಡಿಸಿದರು. "ಮಹಿಳೆಯರು ಎಲ್ಲಿಯೇ ಇರಬಹುದು. ಅವರೆಲ್ಲ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ, ಯಾಕೆ ಇದೆಲ್ಲ? ಸಂಸ್ಕೃತದಲ್ಲಿ ಒಂದು ಹೇಳಿಕೆ ಇದೆ - ಸ್ತ್ರೀಯರನ್ನು ಪೂಜಿಸುವ ಜಾಗದಲ್ಲಿ ದೇವರುಗಳು ಸಂತೋಷದಿಂದ ಇರುತ್ತಾರೆ - ಇಂಥ ಉನ್ನತ ವಿಚಾರದ ನಮ್ಮ ಸಂಸ್ಕೃತಿಯಲ್ಲಿ, ಮಹಿಳೆಯರ ಮೇಲಿನ ದೌರ್ಜನ್ಯ- ಹಿಂಸೆಗಳು ಮುಂದುವರಿಯುತ್ತಲೇ ಇರುವುದು, ಚಿಂತೆಗೀಡು ಮಾಡುತ್ತಿದೆ. ಇಲ್ಲೀ ತನಕ ನಾವು ಇದನ್ನೆಲ್ಲ ತಾಳಿಕೊಂಡಿದ್ದೇವೆ. ಆದರೆ, ಈಗ ಮಹಿಳೆಯರು ಒಂದಾಗಿ ಈ ಸವಾಲನ್ನು ಎದುರಿಸಬೇಕಾದ ಅವಶ್ಯಕತೆ ಇದೆ." ಎಂದು ಅವರು ತಮ್ಮ ಭಾಷಣದಲ್ಲಿ ಹೇಳಿದರು. ಮುಂದುವರೆದು "ಮಾರ್ಚ್ 8ನ್ನು ಮಹಿಳಾ ದಿನವನ್ನಾಗಿ ಆಚರಿಸುತ್ತೇವೆ; ಈ ವರ್ಷ ಹೆಣ್ಣು ಮಗುವಿನ ವರ್ಷವೆಂದೂ ಆಚರಿಸುತ್ತಿದ್ದೇವೆ. ಇವತ್ತು

## ನೊಂದಾವಣೆ



ಸುಮಾರು ನೂರು ಜನರು ಭಾಗವಹಿಸಿದರು!

## ಭಾಗವಹಿಸಿದವರ ಒಂದು ವೀಕ್ಷಣೆ



ಸ್ತ್ರೀಯರ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಪರಿಗಣಿಸಲಾಗುತ್ತಿದೆ. ಆದರೆ, ಸಮಾಜದಲ್ಲಿ ಆಕೆಯ ಸ್ಥಾನಮಾನಗಳನ್ನು ಉತ್ತಮಗೊಳಿಸಲು ಹೆಚ್ಚು ಧೃಡವಾದ ಕಾರ್ಯ ಆಗದೇ, ಕೇವಲ ಆಚರಣೆ ಘೋಷಣೆಗಳು ಅರ್ಥಹೀನ" ಎಂದು ಅಭಿಪ್ರಾಯ ಪಟ್ಟರು. "ಈಚಿನ ವರ್ಷಗಳಲ್ಲಿ ಮಹಿಳೆಯು ಪ್ರಗತಿ ಸಾಧಿಸಿದ್ದಾಳೆ ನಿಜ. ಅದೇ ಹೊತ್ತಿನಲ್ಲಿ ಆಕೆಯ ಮೇಲಿನ ಹಿಂಸೆಯ ಪ್ರಮಾಣವೂ ಹೆಚ್ಚಾಗಿದೆ. ತಮಗೆ ದೊರೆಯುತ್ತಿರುವ ಪ್ರೋತ್ಸಾಹದಿಂದಾಗಿ ಮಹಿಳೆಯರು ಎಲ್ಲ ರಂಗಗಳಲ್ಲೂ ಮೇಲುಗೈ ಸಾಧಿಸುತ್ತಿದ್ದಾರೆ. ಇದನ್ನೇ ಒಂದು ಬೆದರಿಕೆ ಎಂದು ಭಾವಿಸಲಾಗುತ್ತಿದೆಯೆ? ಅಥವಾ ನಮ್ಮಲ್ಲಿಯೇ ಏನಾದರೂ ಗಂಭೀರ ಸಮಸ್ಯೆ ಇದೆಯೆ? ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕುಗಳ ಬಗ್ಗೆ ಬೇಕಾದಷ್ಟು ಕಾಯಿದೆ ಕಾನೂನು ಇವೆ. ಮಹಿಳಾ ಪೋಲಿಸ್ ಠಾಣೆಗಳೂ ಇವೆ. ಇತ್ತೀಚೆಗೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಶೇಕಡಾ 33 ಮಹಿಳಾ ಮೀಸಲಾತಿ ಸೌಲಭ್ಯದಿಂದಾಗಿ ಹೆಚ್ಚು ಹೆಚ್ಚು ಮಹಿಳೆಯರು ಸಾರ್ವಜನಿಕ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳುವಂತಾಗಿದೆ. ಇಷ್ಟೆಲ್ಲ ಇದ್ದೂ ಸ್ತ್ರೀಯರ ಮೇಲಿನ ಹಿಂಸೆ ಇನ್ನೂ ಹೆಚ್ಚುತ್ತಲೇ ಇದೆ. ಕಾರಣವೇನು ಇದಕ್ಕೆ? ಈ ಸಮಸ್ಯೆಗಳಿಂದ ಹೊರಬರಲು ಮಹಿಳೆಯರು ಸಂಘಟಿಕರಾಗಿ ಮಾಡಿರುವ ಪ್ರಯತ್ನಗಳೇನು?" ಎಂದು ಪ್ರಶ್ನಿಸಿದರು.

ಹಿಂಸೆಯನ್ನು ತಡೆಗಟ್ಟುವ ಬಗ್ಗೆ ಪುರುಷರಲ್ಲಿ ಜಾಗೃತಿ ಮೂಡಿಸಬೇಕಾದ ಅಗತ್ಯ ಕುರಿತು ಮಾತನಾಡುತ್ತಾ, ಈಗಲೂ ತವರು ಮನೆ ಹಾಗೂ ಗಂಡನ ಮನೆಗಳಲ್ಲಿ ಇರುವ ಪರಸ್ಪರ ವಿರೋಧಿ ಪರಿಸ್ಥಿತಿಯ ಕಡೆಗೆ ಗಮನ ಸೆಳೆದರು "ಮಗಳ ಬಗ್ಗೆ ಚಿಂತೆ ಮಾಡುವುದು, ಗಂಡನ ಮನೆಯಲ್ಲಿ ಹೇಗೆ ಬಾಳಬೇಕೆಂಬುದರ ಬಗ್ಗೆ ಆಕೆಗೆ ಹೇಳಿಕೊಡುವುದು ಕೇವಲ ತಾಯಿಯ ಹೊಣೆಯಲ್ಲ. ತಂದೆ, ಅಣ್ಣಂದಿರೂ ಈ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಾದ್ದು ಮುಖ್ಯ." ನಮ್ಮ ಹೆಣ್ಣುಮಕ್ಕಳನ್ನು ನಾವು ಚೆನ್ನಾಗಿ ನೋಡಿಕೊಳ್ಳುತ್ತೇವೆ. ಆದರೆ, ಆಕೆ ಗಂಡನ ಮನೆಗೆ ಹೋದಾಗ ಅಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಈ ಅನುಭವ ಕೇವಲ 'ಮಗಳಿಗೆ' ಅಲ್ಲ, ಸೊಸೆಯಂದಿರಿಗೂ ಆಗುತ್ತದೆ. ತಮ್ಮ ಮಗಳು ಗಂಡನ ಮನೆಗೆ ಹೋದಾಗ, ಅಲ್ಲಿ ಆಕೆಗೆ ಕೆಟ್ಟ ಅನುಭವ ಆದಲ್ಲಿ ತಂದೆ ಹಾಗೂ ಇತರರಿಗೆ ನೋವಾಗುತ್ತದೆ, ಕೋಪಬರುತ್ತದೆ. ಆದರೆ, ಇದೇ ಬಗೆಯ ಅನುಭವ ಸೊಸೆಗೆ ಆಗುತ್ತಿರುವಾಗ ಇವರೆಲ್ಲ ಮೌನ ವಹಿಸುತ್ತಾರೆ. ಗಂಡಸರು ಇಂಥ ಸನ್ನಿವೇಶಗಳಿಂದ ಆದಷ್ಟು ದೂರ ಉಳಿಯುತ್ತಾರೆ. ಆದರೆ, ಅವರು ಈ ವಿಷಯದ ಬಗ್ಗೆ ಆಲೋಚಿಸುವಂತೆ, ಜಾಗೃತರಾಗುವಂತೆ ಮಾಡಬೇಕಿದೆ. ಹೆಂಗಸರ ನಡುವೆಯೇ ಜಗಳ ಸಂಘರ್ಷ ನಡೆಯುವಂಥ ಸಂದರ್ಭಗಳಲ್ಲಿ ತಮ್ಮ ತಾಯಂದಿರಿಗೆ ವಿರೋಧವಾದ ನಿಲುವು ತಾಳಲು ಗಂಡುಮಕ್ಕಳು ಹಿಂಜರಿಯುತ್ತಾರೆ. ಮದುವೆಯಾದ ಮಗಳೋ, ತಂಗಿಯೋ ಮನೆಯಲ್ಲಿದ್ದು, ಸೊಸೆಯೊಂದಿಗೆ ಹೊಂದಾಣಿಕೆಯಾಗದಿದ್ದಾಗ ಇಂಥ ಸಂದರ್ಭಗಳು ವಿಪರೀತಕ್ಕೆ ಹೋಗುತ್ತವೆ. ಗಂಡಸರು ಈ ಸನ್ನಿವೇಶಗಳಲ್ಲಿ ಬೇಗನೆ ಮನೆಯಿಂದ ಹೊರಬಿದ್ದು ತಡವಾಗಿ ಮನೆಗೆ ಬಂದು ಹೇಗೋ ದೂರ ಉಳಿಯುತ್ತಾರೆ. ಇದು ಪಲಾಯಾನವಾದ ಅಲ್ಲವೆ? ಗಂಡಸರು ಉಳಿದೆಲ್ಲ ವಿಷಯಗಳಲ್ಲೂ ತಾವೇ ನಿರ್ಣಯ ಕೈಗೊಳ್ಳಬೇಕು ಎನ್ನುತ್ತಾರೆ. ಆದರೆ, ಈ ಹಿಂಸೆಯ ವಿಷಯದಲ್ಲೂ ಯಾಕೆ ನಿರ್ಣಯ ಕೈಗೊಳ್ಳಲು ಇವರು ಮುಂದೆ ಬರಬಾರದು? ಹಿಂಸೆಗೆ ಸಂಬಂಧಿಸಿದ ಈ ಕ್ಷೇತ್ರದಲ್ಲೂ ಏಕೆ ಗಂಡಸರು ಮುಂದಾಳತ್ವ ವಹಿಸಬಾರದು? ತನ್ನ ಹೆಂಡತಿಯ ಮೇಲೆ ನಡೆಯುವ ದೌರ್ಜನ್ಯ, ದಬ್ಬಾಳಿಕೆಯ ವಿಷಯದಲ್ಲಿ ಗಂಡ ಏಕೆ ಆಕೆಯ ಪರವಾದ ನಿಲುವು ತೆಗೆದುಕೊಳ್ಳಬಾರದು?

ವರದಕ್ಷಿಣೆಯ ಪಿಡುಗಿನ ಬಗ್ಗೆ ತಮ್ಮ ತಾಯಿ-ತಂಗಿಯಂದಿರಿಗೆ ಮನವರಿಕೆ ಮಾಡಿಕೊಡುವ ಜವಾಬ್ದಾರಿ ಗಂಡಸರು ಏಕೆ ತೆಗೆದುಕೊಳ್ಳಬಾರದು? ಹೀಗಾಗುವುದಾದರೆ ಅನೇಕ ಸಮಸ್ಯೆಗಳು ತಮ್ಮಿಂದ ತಾವೇ ಸುಲಭವಾಗಿ ಪರಿಹಾರಗೊಳ್ಳುತ್ತವೆ ಎಂದು ಮಾನ್ಯ ಸಚಿವೆಯವರು ಅಭಿಪ್ರಾಯಪಟ್ಟರು.

ಕಾನೂನು ಕಾರ್ಯಗತಗೊಳಿಸುವ ಅಧಿಕಾರ ಸ್ಥಾನಗಳನ್ನು ಜಾಗೃತಗೊಳಿಸಬೇಕಿರುವುದರ ಮಹತ್ವದ ಬಗ್ಗೆ ಮಾತನಾಡುತ್ತಾ ಸಚಿವೆ, "ಪೋಲಿಸರು ಮತ್ತು ನ್ಯಾಯಾಂಗ ಕಾನೂನಿನ ರಕ್ಷಕರಾಗಿದ್ದಾರೆ. ಪೋಲಿಸು ಇಲಾಖೆಯಲ್ಲಿ ಎಲ್ಲರೂ ಕೆಟ್ಟವರೇನಿಲ್ಲ. ಆದಾಗ್ಯೂ ಜನಾಂಗದ, ಅದರಲ್ಲೂ ಸ್ತ್ರೀಯರ ಸಮಸ್ಯೆಗಳು ಬಂದಾಗ ಅವರು ಹೆಚ್ಚು ಹೊಣೆಗಾರಿಕೆ ತೋರುವುದಿಲ್ಲ. ಕುಟುಂಬ ಸಲಹಾ ಕೇಂದ್ರಗಳು ಅಸ್ತಿತ್ವದಲ್ಲಿ ಇವೆ. ಆದರೆ ಅವು ಪರಿಣಾಮಕಾರಿಯಾದ ಕೆಲಸ ಮಾಡುವಲ್ಲಿ ಹಿಂದೆ ಬಿದ್ದಿವೆ. ಉದಾಹರಣೆಗೆ ಹೇಳುವುದಾದರೆ, ಕುಟುಂಬ ಸಲಹಾ ಕೇಂದ್ರದಿಂದ ಪ್ರಕರಣವೊಂದು ಪೋಲಿಸರಿಗೆ ಬಂದ ಬಳಿಕ, ಪೋಲಿಸರೊಂದಿಗೆ ಅವರ ಸಂಬಂಧ, ಸಂಪರ್ಕ ಅಂಥಾ ಪರಿಣಾಮಕಾರಿಯಾಗಿ ಇರುವುದಿಲ್ಲ. ಅದೇ ರೀತಿಯಲ್ಲಿ ಹೆಂಗಸೊಬ್ಬಳು ಸಹಾಯದ ನಿರೀಕ್ಷೆ ಮಾಡಿದರೆ ಪೋಲಿಸರು ಆಕೆಯನ್ನು ಮನೆಗೆ ತಿರುಗಿ ಕಳಿಸಿಬಿಡುತ್ತಾರೆ." ಎಂದು ಹೇಳಿದರು. ಮುಂದುವರೆದು, "ಅತ್ತೆ-ಮಾವಂದಿರು ಆಕೆಯನ್ನು ಮನೆಯೊಳಗೆ ಕರೆದುಕೊಂಡರೂ ಪೋಲಿಸರು ಆಕೆಗೆ ಅಲ್ಲಿ ಭದ್ರತೆ ಸಿಗುವ ಹಾಗೆ ನೋಡಿಕೊಳ್ಳಬೇಕು. ವರದಕ್ಷಿಣೆ ಪ್ರಕರಣಗಳಿಗೆ ಏನಾಗುತ್ತಿದೆ? ಎಷ್ಟು ಜನಗಳಿಗೆ ನಿಜವಾಗಿಯೂ ಶಿಕ್ಷೆ ಆಗಿದೆ? ಮದುವೆ ಆದ ಐದು ವರ್ಷದೊಳಗೆ ಸಾವು ಸಂಭವಿಸಿದರೆ, ಅದು ವರದಕ್ಷಿಣೆ ಸಾವು ಎಂದೇ ಪರಿಗಣಿತವಾಗುತ್ತದೆ. ಪೋಲಿಸರು ಇಂಥ ದೂರುಗಳಿಗೆ ಎಷ್ಟರಮಟ್ಟಿಗೆ ಪ್ರತಿಕ್ರಿಯಿಸಿದ್ದಾರೆ? ಎಷ್ಟು ಜನಕ್ಕೆ ಶಿಕ್ಷೆ ಆಗಿದೆ ಎಂದು ಪೋಲಿಸರು ನಮಗೆ ಹೇಳಬಲ್ಲರೆ? ಪ್ರಕರಣ ದಾಖಲಿಸಿಕೊಂಡಿದ್ದೇವೆ ಎಂದು ಪೋಲಿಸರು ಹೇಳಿದಾಗ ಅಪರಾಧಿಗಳಿಗೆ ಶಿಕ್ಷೆ ಆಗಬೇಕಾದ್ದು ಮುಖ್ಯ. ಮಹಿಳೆಯ ಮೇಲೆ ಸೀಮೆ ಎಣ್ಣೆ ಸುರಿದು, ಬೆಂಕಿ ಹಚ್ಚಿಕೊಂದಾಗ ಅಥವಾ ನೇಣು ಹಾಕಿ ಕೊಂದಾಗ ಸಾಕ್ಷಿಗಳನ್ನು ಒದಗಿಸುವುದು ಸಾಧ್ಯವೆ? ವರದಕ್ಷಿಣೆ ಸಾವಿಗೆ ಇರುವ ಎಲ್ಲ ಕಾರಣಗಳು ಗೊತ್ತಿದ್ದೂ ಶಿಕ್ಷಾರ್ಹ ಅಪರಾಧಿಗಳಿಗೆ ಶಿಕ್ಷೆಯಾಗಬಹುದಾದಂಥ ಪ್ರಕರಣಗಳನ್ನು ಪೋಲಿಸರು ದಾಖಲಿಸಿಕೊಳ್ಳುವುದಿಲ್ಲ. ಸಾಕ್ಷಿ-ಪುರಾವೆ, ದಾಖಲೆ ಇತ್ಯಾದಿಗಳನ್ನು ಕೇಳುತ್ತಾ ನ್ಯಾಯಾಲಯ ಕೂಡ ಇದನ್ನೇ ಮಾಡುತ್ತೆ. ಇವನ್ನೆಲ್ಲ ಒದಗಿಸುವುದು ಕಷ್ಟವಾಗುತ್ತೆ. ಆದ್ದರಿಂದ, ಸ್ತ್ರೀಯರಿಗೆ ಅದರಲ್ಲೂ ಲೈಂಗಿಕ ಕಿರುಕುಳ ಮತ್ತು ವರದಕ್ಷಿಣೆ ಸಾವುಗಳಿಗೆ ಸಂಬಂಧಿಸಿದಂತೆ ಪೋಲಿಸು ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಚುರುಕುಗೊಳಿಸಬೇಕಾದ ಅಗತ್ಯವಿದೆ ಎಂದು" ಅಭಿಪ್ರಾಯ ಪಟ್ಟರು.

ಮಹಿಳಾ ಸಮಸ್ಯೆಗಳ ಬಗ್ಗೆ ತಮ್ಮ ಬದ್ಧತೆಯ ಬಗ್ಗೆ ಪುನರುಚ್ಚರಿಸುತ್ತಾ ಸಚಿವೆ, ಈಗ ಜಾರಿಯಲ್ಲಿರುವ ಮತ್ತು ಇನ್ನು ಮುಂದೆ ಯೋಜಿಸಲಾಗುತ್ತಿರುವ ಸರಕಾರದ ತಮ್ಮ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಸಭಿಕರಿಗೆ ವಿವರಿಸಿದರು. "ತೊಂದರೆಗಳಿಗೆ ಈಡಾಗಿರುವಂಥ, ಆತ್ಮ ಹತ್ಯೆಗೆ ಪ್ರಯತ್ನಿಸಿದಂಥ ಅಸಹಾಯಕ ಮಹಿಳೆಯರಿಗಾಗಿ 'ಮಹಿಳಾ ಕಲ್ಯಾಣ ಕೇಂದ್ರ' ಗಳನ್ನು ಆರಂಭಿಸುವುದು ತುಂಬಾ ಜರೂರಿದೆ. ಇಂಥ ಮಹಿಳೆಯರಿಗೆ

ಸಾಧ್ಯವಿರುವ ಎಲ್ಲ ರೀತಿಯ ಸಹಾಯ ನೀಡುವ, ಪ್ರೋತ್ಸಾಹ ನೀಡುವ, ಇಂಥ ಆಶ್ರಯ ತಾಣಗಳಿಗೆ ಅವರನ್ನು ಮುಕ್ತವಾಗಿ ಸ್ವಾಗತಿಸುವ ಅಗತ್ಯವಿದೆ. ಈ ಬಗೆಯ ರಕ್ಷಣೆ ಪಡೆಯಲು ಆರ್ಥಿಕ ಅಂಶ ಅಡ್ಡಬರಬಾರದು. ಅವರವರ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಶಿಕ್ಷಣ ಅಥವಾ ಉದ್ಯೋಗ ನೀಡಿ ಈ ಮಹಿಳೆಯರಿಗೆ ಸಾಧ್ಯವಿರುವ ಎಲ್ಲ ಸಹಾಯ ಒದಗಿಸಬೇಕು. ಪ್ರಥಮ ಹಂತದಲ್ಲಿ ಈ ಕೇಂದ್ರಗಳನ್ನು ಬೆಳಗಾವಿ, ಮೈಸೂರು ಮತ್ತು ಗುಲ್ಬರ್ಗಾಗಳಲ್ಲಿ ಆರಂಭಿಸಲು ಇಚ್ಛಿಸುತ್ತೇವೆ " ಎಂದು ತಿಳಿಸಿದರು.

"ಸರಕಾರೇತರ ಸಂಸ್ಥೆಗಳೊಂದಿಗಿನ (NGOs) ಸಹಯೋಗದೊಂದಿಗೆ ಪೋಲಿಸರು ಜಾರಿಯಲ್ಲಿ ತಂದಿರುವ 'ಸಹಾಯ ಮಾರ್ಗ' (Help Line) ಕಾರ್ಯಕ್ರಮವನ್ನು ಸಹಾಯದ ಅಗತ್ಯವಿರುವ ಮಹಿಳೆಯರಿಗೆ 24 ಗಂಟೆಗಳ ಸೇವೆಯನ್ನು ಒದಗಿಸುತ್ತದೆ. ಈ ಸಹಾಯ ಮಾರ್ಗಗಳು ಪೋಲಿಸ್ ಇಲಾಖೆಗೆ ಮಾಹಿತಿಗಳ ಮೂಲಗಳು. ದೌರ್ಜನ್ಯ-ಕಿರುಕುಳಗಳಂಥ ಸಂದರ್ಭದಲ್ಲಿ ಅಕ್ಕ ಪಕ್ಕದವರು ಈ ಸಹಾಯ ಮಾರ್ಗವನ್ನು ಬಳಸಿಕೊಳ್ಳಬಹುದು. ಘಟನೆ ನಡೆಯುತ್ತಿರುವ ಕ್ಷಣಗಳಲ್ಲಿಯೇ ಅವರು ಪೋಲಿಸರಿಗೆ ತಿಳಿಸಬಹುದು. ಇದರಿಂದ, ಅಪರಾಧಿಗಳನ್ನು ಅವರು ಅಪರಾಧ ಮಾಡುತ್ತಿರುವ ಕ್ಷಣಗಳಲ್ಲಿಯೇ ಹಿಡಿಯಲು ಸಾಧ್ಯವಾಗುತ್ತದೆ. ಸರಕಾರೇತರ ಸಂಸ್ಥೆಗಳು ಈ ಪ್ರಯತ್ನದಲ್ಲಿ ಮುಂದೆ ಬರಬೇಕು" ಎಂದು ಹೇಳಿದರು.

**ಸಚಿವೆ ಸರಕಾರದ ಕಾರ್ಯಕ್ರಮಗಳ ಪಟ್ಟಿ ನೀಡಿದರು:**

- ಮನೆಯಲ್ಲಿನ ಆರ್ಥಿಕ ಸಮಸ್ಯೆಯಿಂದಾಗಿ ಶಾಲೆಬಿಟ್ಟಿರುವಂಥ ಹೆಣ್ಣು ಮಕ್ಕಳಿಗೆ ಹಾಜರಾತಿ-ಶಿಷ್ಯ ವೇತನ.
- ಹೆಣ್ಣುಭ್ರೂಣ ಹತ್ಯೆ ಮತ್ತು ಶಿಶು ಹತ್ಯೆಗಳನ್ನು ತಡೆಯಲು, ಎರಡು ಹೆಣ್ಣು ಮಕ್ಕಳವರೆಗೆ ಪ್ರತಿ ಹೆಣ್ಣು ಮಗುವಿಗೆ ತಲಾ 500 ರೂಪಾಯಿಗಳ ಸಹಾಯಧನ ನೀಡುವುದು.
- ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ಮಹಿಳಾ ಅಭಿವೃದ್ಧಿ ನಿಗಮದಿಂದ ಆದಾಯ ಉತ್ಪನ್ನಕ್ಕಾಗಿ 50,000 ರೂಪಾಯಿಗಳವರೆಗೆ ಸಾಲ ನೀಡುವುದು. ಈ ಹಣದಲ್ಲಿ ಎಸ್‌ಸಿ/ಎಸ್‌ಟಿ ಮಹಿಳೆಯರಿಗೆ 40%, ಉಳಿದವರಿಗೆ 25% ಸಹಾಯಧನ ನೀಡಲಾಗುವುದು.
- ಸರಕಾರದ ಯಾವುದೇ ಯೋಜನೆ ಅಡಿಯಲ್ಲಿನ ಜಮೀನು ಮತ್ತು ಮನೆಗಳ ನೊಂದಣಿಯಲ್ಲಿ ಹೆಣ್ಣು ಮಕ್ಕಳ ಹೆಸರನ್ನು ಕಡ್ಡಾಯವಾಗಿ ಸೇರಿಸುವುದು.

ಇಷ್ಟೆಲ್ಲ ಅನುಕೂಲಗಳಿದ್ದಾಗ್ಯೂ ಸ್ತ್ರೀಯರ ಸ್ಥಿತಿಗತಿಗಳು ಹಾಗೆಯೇ ಉಳಿದುಕೊಂಡಿರುವುದರ ಬಗ್ಗೆ ಸಚಿವೆ ವಿಷಾದಿಸಿದರು. ತಮ್ಮ ಭಾಷಣ ಮುಂದುವರೆಸುತ್ತಾ "ಈ ವಿಶ್ವದಲ್ಲಿ ಸೇವೆ ಸಲ್ಲಿಸಲು ಮಹಿಳೆಗೂ ಸಮಾನ ಹಕ್ಕು, ಅವಕಾಶ ಇದೆ ಎಂದು ಅವರಿಗೆ ತಿಳಿಸಬೇಕು" ಎಂದು ಹೇಳಿದರು

- **ಮಹಿಳೆಯರ ಮೇಲಿನ ಹಿಂಸೆ (VAW) ತಗ್ಗಿಸಲು ಧೀರ್ಘಕಾಲೀನ ಯೋಜನೆಗಳ ಬಗ್ಗೆ ಸಚಿವೆಯರ ಅಭಿಪ್ರಾಯಗಳು**

**ಶಿಕ್ಷಣ :** ಹೆಣ್ಣು ಮಕ್ಕಳ ಬಗೆಗಿನ ದೃಷ್ಟಿಕೋನದಲ್ಲಿನ ಪರಿವರ್ತನೆಗಾಗಿ ಗ್ರಾಮೀಣ ಮಹಿಳೆಯರಿಗೆ ಶಿಕ್ಷಣ ನೀಡಬೇಕು; ಕೇವಲ ಶಾಲೆಗೆ ಕಳಿಸುವುದಲ್ಲ. ಹೆಣ್ಣುಮಕ್ಕಳ ಪ್ರಾಮುಖ್ಯತೆಯನ್ನೂ ಎತ್ತಿ ತೋರಿಸಬೇಕು. ಗಂಡು ಮಗುವಿನ ಬಗ್ಗೆ ನಿಮಗಿರುವ ಕನಸುಗಳು ಹೆಣ್ಣು ಮಗುವಿನ ಬಗ್ಗೆಯೂ ಇರಲಿ.

**ದೃಷ್ಟಿಕೋನ ಬದಲಾವಣೆ :** ಸುಶಿಕ್ಷಿತ ಸ್ತ್ರೀಯರಲ್ಲೂ ದೃಷ್ಟಿಕೋನದ ಬದಲಾವಣೆ ಆಗಬೇಕಾದ ಅಗತ್ಯವಿದೆ. ತಮ್ಮ ವೈವಾಹಿಕ ಜೀವನದಲ್ಲಿ ಸ್ವತಃ ತಾವೇ ಅತೃಪ್ತರಾಗಿದ್ದಾಗಲೂ ತಮ್ಮ ಹೆಣ್ಣುಮಕ್ಕಳ ಮದುವೆ ಮಾಡಲು ಇವರು ಕಾತರರಾಗಿರುತ್ತಾರೆ.

**ಆರ್ಥಿಕ ಸ್ವಾವಲಂಬನೆ ಪ್ರೋತ್ಸಾಹಿಸುವುದು :** ಜೀವನದಲ್ಲಿನ ಸಮಸ್ಯೆಗಳನ್ನು ಎದುರಿಸಲು ಮಹಿಳೆಯರಿಗೆ ತರಬೇತಿ ನೀಡಿ. ಮಹಿಳೆಯರಿಗೆ ಶಿಕ್ಷಣ, ಆರ್ಥಿಕ ಸ್ವಾವಲಂಬನೆ ಮತ್ತು ಸಮಾನ ಆಸ್ತಿ ಹಕ್ಕು ನೀಡುವುದರಿಂದ ಇದನ್ನು ಸಾಧಿಸಬಹುದು. ತಮ್ಮ ಮಗಳನ್ನು ಸ್ವತಂತ್ರ ವ್ಯಕ್ತಿಯನ್ನಾಗಿಸಿ, ಆಕೆ ಸಮಸ್ಯೆಗಳನ್ನು ಎದುರಿಸಲು ಸಮರ್ಥಗಳಾಗುವಂತೆ ಮಾಡುವ ಬದಲು, ಅಳಿಯನಿಗೆ ವರದಕ್ಷಿಣೆ ನೀಡಲು ಹಣ ಜೋಡಿಸುವುದರಲ್ಲಿ ಬಹಳಷ್ಟು ಕುಟುಂಬಗಳು ಮಗ್ನವಾಗಿರುತ್ತವೆ. ಇದೆಲ್ಲಕ್ಕಿಂತ ಮುಖ್ಯವಾಗಿ, ಆರ್ಥಿಕವಾಗಿ ಸ್ವತಂತ್ರವಾಗಿದ್ದು, ಹೆಣ್ಣು ಮಕ್ಕಳನ್ನು ಶೋಷಿಸುವಂಥ ಗಂಡಸರನ್ನು ಸಹಿಸಿಕೊಳ್ಳದಿರುವ ಎಚ್ಚರವೂ ಮಹಿಳೆಯರಲ್ಲಿ ಇರಬೇಕು.

**ಇತರೆ :** ಮಹಿಳೆಯರಿಗಾಗಿ ಇರುವ ಸರಕಾರದ ಕಾರ್ಯಕ್ರಮ ಮತ್ತು ಯೋಜನೆಗಳು ಮತ್ತು ಅವುಗಳ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಪುರುಷರಲ್ಲಿ ಅರಿವು ಮೂಡಿಸಬೇಕು. ಇದು ನ್ಯಾಯಾಂಗ, ಸರಕಾರ ಹಾಗೂ ಕಾನೂನು ಜಾರಿ ತರುವ ಸಂಸ್ಥೆಗಳು ಮಾಡಬೇಕಾದ ಅಗತ್ಯ ಕೆಲಸ.

## ಚರ್ಚೆ:

ತಮ್ಮ ಉದ್ಘಾಟನಾ ಭಾಷಣಾ ನಂತರ ಸಚಿವೆಯರು, ಸಭೆಯಲ್ಲಿ ಪಾಲ್ಗೊಂಡಿದ್ದವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

**ಸಚಿವೆ ಹಾಗೂ ಭಾಗವಹಿಸಿದ್ದವರ ನಡುವಿನ ಸಂಭಾಷಣೆ**

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಸಾಮಾಜಿಕ ಕಾರ್ಯಕರ್ತೆಯಾದ ಶ್ರೀಮತಿ ಗಿರಿಜಾ ಅವರು, 'ಶಿಕ್ಷಣ, ಆರೋಗ್ಯ ಮತ್ತು ಮದ್ಯಪಾನ ಈ ವಿಷಯಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿದರು.

- ಮಹಿಳೆಯರಿಗೆ ಶಿಕ್ಷಣ ಮತ್ತು ಆರೋಗ್ಯ ಅತ್ಯಂತ ಮುಖ್ಯ ಅಂಶಗಳು. ಆದರೆ ಗ್ರಾಮೀಣ ಪ್ರದೇಶಗಳಲ್ಲಿನ ಮಹಿಳೆಯರಿಗೆ ಈ ವಿಷಯಗಳಲ್ಲಿ ಸೌಲಭ್ಯಗಳು ಪೂರ್ಣವಾಗಿ ಸಿಗಬೇಕಾದಷ್ಟು ಸಿಗುತ್ತಿಲ್ಲ.

- ಮಹಿಳೆಯರು ಮಾನಸಿಕ ಹಾಗೂ ದೈಹಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ. ಗ್ರಾಮೀಣ ಮಹಿಳೆಯರಿಗೆ, ಅದರಲ್ಲೂ ಬಡಮಹಿಳೆಯರಿಗೆ ಆರೋಗ್ಯ ಸೌಲಭ್ಯ ನೀಡುವುದು ಬಹಳ ಮುಖ್ಯವಾದುದು. ಮುಳಬಾಗಲು ತಾಲ್ಲೂಕಿನಲ್ಲಿ 100 ಪ್ರಾಥಮಿಕ ಆರೋಗ್ಯ (PHS) ಕೇಂದ್ರಗಳಿವೆ. ಆದರೆ, ಮಹಿಳಾ ವೈದ್ಯೆ ಇರುವುದು ತಾಲ್ಲೂಕು ಕೇಂದ್ರವೊಂದರಲ್ಲಿ ಮಾತ್ರ. ಸ್ತ್ರೀಯರಿಗೆ ಸ್ತ್ರೀ ರೋಗಗಳ ಸಮಸ್ಯೆ ಇರುತ್ತದೆಯಾದ್ದರಿಂದ, ಅವರು ಪುರುಷ ವೈದ್ಯರೊಂದಿಗೆ ಅವುಗಳ ಬಗ್ಗೆ ಚರ್ಚಿಸಲು ಹಿಂಜರಿಯುತ್ತಾರೆ. ಹೆಚ್ಚಿನವರು ಈ ಸಮಸ್ಯೆಗಳ ಬಗ್ಗೆ ಗಮನವನ್ನೇ ನೀಡುವುದಿಲ್ಲ. ಅವೇ ಮುಂದೆ ದೊಡ್ಡ ಅವಾಂತರಗಳಾಗುತ್ತವೆ. ತಮ್ಮ ಸಂತಾನ ಅಭಿವೃದ್ಧಿ-ಆರೋಗ್ಯ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅವರಿಗೆಲ್ಲ ಮಹಿಳಾ ವೈದ್ಯೆಯರ ಅಗತ್ಯವಿದೆ.

- ಮದ್ಯಪಾನವು ಕೌಟುಂಬಿಕ ಹಿಂಸೆಗೆ ಒಂದು ಮುಖ್ಯ ಕಾರಣ. ಹಳ್ಳಿಗಳಲ್ಲೆಲ್ಲ ಪರವಾನಗಿ ರಹಿತ ಸಾರಾಯಿ ಅಂಗಡಿಗಳು ಹುಟ್ಟಿಕೊಂಡಿವೆ. ಮೊದಲಿಗೆ, ಬರೀ ಗಂಡಸರು ಮಾತ್ರ ಕುಡಿಯುತ್ತಿದ್ದರು. ಈಗ ಇವರನ್ನು ಅನುಸರಿಸಿ ಮನೆಯಲ್ಲಿನ ಉಳಿದ ಗಂಡು ಮಕ್ಕಳೂ ಕುಡುಕರಾಗುತ್ತಿದ್ದಾರೆ. ಅಲ್ಲದೇ, ಸಾರಾಯಿ ತರಲು ಅಂಗಡಿಗೆ ಕಳಿಸಿದ ಚಿಕ್ಕ ಮಕ್ಕಳೂ ಸುಲಭವಾಗಿ ಸಾರಾಯಿ ರುಚಿ ನೋಡುವ ಅವಕಾಶಗಳಿರುತ್ತವೆ.



ಗಮನ ಹರಿಸುತ್ತಿರುವ ಪೋಲಿಸ್ ಅಧಿಕಾರಿಗಳು



ಮಾನ್ಯ ಮಂತ್ರಿಗಳನ್ನು ಕಾರ್ಯಪ್ರವೃತ್ತರಾಗಲು ಕೇಳುತ್ತಿರುವ
ಚಿತ್ರದುರ್ಗ ಜಿಲ್ಲೆಯ ಶ್ರೀಮತಿ ಗೌರಮ್ಮ

**ಸಚಿವೆಯರ ಉತ್ತರ**

- "ಶಿಕ್ಷಣಕ್ಕೆ ಸಂಬಂಧಿಸಿದ ಪ್ರಶ್ನೆಗೆ ಉತ್ತರಿಸುತ್ತಾ, "ಕಡ್ಡಾಯ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರಕಾರದ ನಿಯಮ ಇದೆ. ಈ ನಿಯಮಕ್ಕೆ ಅನುಗುಣವಾಗಿ ಬಹಳಷ್ಟು ಹಳ್ಳಿಗಳಲ್ಲಿ ಶಾಲೆಗಳನ್ನು ತೆರೆಯಲಾಗಿದೆ. ಯಾವುದಾದರೂ ಹಳ್ಳಿಯಲ್ಲಿ 40 ಅಥವಾ 60 ಕ್ಕೂ ಹೆಚ್ಚು ಮಕ್ಕಳಿದ್ದು, ಅಲ್ಲಿ ಶಾಲೆ ಇಲ್ಲ ಎಂದಾದರೆ, ಸಾರ್ವಜನಿಕರು ತಮ್ಮ ಶಿಕ್ಷಣ ಅಧಿಕಾರಿ ಹಾಗೂ ತಾಲ್ಲೂಕು ಪಂಚಾಯಿತಿ ಮೂಲಕ ಶಾಲೆಗಾಗಿ ಸರಕಾರವನ್ನು ಒತ್ತಾಯಿಸಬಹುದು. ಪೌಢ ಶಾಲೆಯ ಅಗತ್ಯವಿರುವುದಾದರೆ, ಹತ್ತಿರ ಹತ್ತಿರ ಇರುವ ಗ್ರಾಮಗಳು ಸೇರಿಕೊಂಡು ಫ್ರೌಢ ಶಾಲೆಗಾಗಿ ಕೇಳಬಹುದು. ಒಂದು ವೇಳೆ, ಸರಕಾರ ತಲುಪಲು ಸಾಧ್ಯವಾಗಿರುವ ಸ್ಥಳಗಳು ಇದ್ದರೆ. ಅಥವಾ ಪರಿಹಾರ ಕಾರ್ಯದಲ್ಲಿ ಏನಾದರೂ ತೊಡಕು-ತೊಂದರೆ ಇದ್ದಲ್ಲಿ, ನೀವು ನನ್ನನ್ನು ಕಾಣಬಹುದು. ನಾನು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಆ ಬಗ್ಗೆ ಮಾತನಾಡುತ್ತೇನೆ." ಎಂದು ಹೇಳಿದರು.

- ಮಹಿಳಾ ವೈದ್ಯೆಯ ಅಗತ್ಯತೆಯ ಬಗ್ಗೆ ಮಾತನಾಡುತ್ತಾ, ಸಚಿವೆ ಅವರು ವೈದ್ಯರನ್ನು ಗ್ರಾಮೀಣ ಪ್ರದೇಶಗಳಿಗೆ ಕಳಿಸುವುದರಲ್ಲಿ ಇರುವ ಸಮಸ್ಯೆ ಬಗ್ಗೆ ಹೇಳಿದರು. " ಮೂಲತಃ ವೈದ್ಯರ ಕೊರತೆ ಇದೆ. ಹೆಚ್ಚು ಜನ ವೈದ್ಯರು ನಗರ ಪ್ರದೇಶದಲ್ಲಿಯೇ ಇದ್ದು ಉತ್ತಮ ಪ್ರಾಕ್ಟೀಸ್ ಮಾಡಲು ಇಷ್ಟ ಪಡುತ್ತಾರೆ. ಹಳ್ಳಿಗಳಿಗೆ ಸೇವೆ ಸಲ್ಲಿಸಲು ಸಿದ್ಧರಿರುವವರ ಸಂಖ್ಯೆ ತುಂಬಾ ಕಡಿಮೆ. ಗ್ರಾಮೀಣ ಪ್ರದೇಶಗಳಿಗೆ ವೈದ್ಯಕೀಯ ಸೌಲಭ್ಯ ಒದಗಿಸಿಕೊಡಲು ಸರಕಾರ ಈಗಲೂ ಬಲವಾಗಿ ಪ್ರಯತ್ನ ಪಡುತ್ತಿದೆ. ವೈದ್ಯರನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗಾಗಿ ಆಯ್ಕೆ ಮಾಡಲಾಗಿದೆ. ಪರಿಶೀಲನೆಯ ನಂತರ ಅವರನ್ನು ಅಲ್ಲಿಗೆ ಹಾಕಲಾಗುತ್ತದೆ. ಇದಾದ ಮೇಲೂ ನಿಮ್ಮ ಭಾಗದಲ್ಲಿ ವೈದ್ಯರು ಇಲ್ಲದೇ ಹೋದರೆ ನೀವು ನನಗೆ ಬರೆಯಿರಿ." ಎಂದು ತಿಳಿಸಿದರು.

- ಮದ್ಯಪಾನ ಸಮಸ್ಯೆಯ ಕುರಿತು ಎತ್ತಲಾದ ಪ್ರಶ್ನೆಗೆ ಸಚಿವೆಯರು "ಸಮಾಜದ ಎಲ್ಲ ವರ್ಗದವರೂ ಸಾರಾಯಿ ಕುಡಿಯುತ್ತಾರೆ. ಇದನ್ನು ನಿಲ್ಲಿಸಲು ಸವಾಜದವರೆಲ್ಲ ಒಂದಾಗಿ ಸಾರಾಯಿ ಮಾರಾಟದ ವಿರುದ್ಧ ಪ್ರತಿಭಟಿಸಬೇಕು. ಆಂಧ್ರಪ್ರದೇಶದಲ್ಲಿ ಮಹಿಳೆಯರೆಲ್ಲ ಒಗ್ಗೂಡಿ ಹೋರಾಡಿ ಸಾರಾಯಿ ಮಾರಾಟ ನಿಲ್ಲಿಸಿದರು"ಎಂದು ಉತ್ತರಿಸಿದರು.

ಮಹಿಳೆಯರ ಜವಾಬ್ದಾರಿಯ ಬಗ್ಗೆ ಚರ್ಚಿಸುತ್ತಾ, ಮಹಿಳೆಯರೇ ಮಹಿಳೆಯರ ವಿರುದ್ಧ ನಡೆಸುವ ಹಿಂಸೆಯ ಬಗ್ಗೆ ಪೋಲಿಸರು ಪ್ರಸ್ತಾಪಿಸಿದರು. ಇಂಥ ಸಂದರ್ಭಗಳಲ್ಲಿ ಪುರುಷರ ಜವಾಬ್ದಾರಿಗಳ ಬಗ್ಗೆ ಅರಿವು ನೀಡಬೇಕು ಎಂದು ಸಚಿವೆಯರು ಹೇಳಿದರು.

## ಸಚಿವೆ ಹಾಗೂ ಭಾಗವಹಿಸಿದುರ ಮಧ್ಯದ ಸಂಭಾಷಣೆ

ಉಡುಪಿಯ ಪೋಲಿಸ್ ಇಲಾಖೆಯ ಪ್ರತಿನಿಧಿಯಾಗಿರುವ ಶ್ರೀ ಜಗದೀಶ್‌ರ ಪ್ರಕಾರ, "ಮಹಿಳೆಯ ವಿರುದ್ಧ ದೌರ್ಜನ್ಯ ನಡೆಸುವವರು ಯಾವಾಗಲೂ ಪುರುಷರೇ ಆಗಿರುವುದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆಯರೂ ದೌರ್ಜನ್ಯ ನಡೆಸಿದ್ದಾರೆ. ಆದ್ದರಿಂದ, ಈ ಬದಲಾವಣೆಯನ್ನು ತರಲೋಸುಗ ಸಾಮಾಜಿಕ ಮಟ್ಟದಲ್ಲಿ ಈ ಸಮಸ್ಯೆಯ ಬಗ್ಗೆ ಚರ್ಚೆ ನಡೆಯಬೇಕು." ತಮ್ಮ ಸ್ವಂತ ಅನುಭವದ ಆದಾರದ ಮೇಲೆ ಇವರು 'ಸ್ಪಂದನ'ದ ಬಗ್ಗೆ ಮಾತನಾಡಿದರು. "ಸ್ಪಂದನವು ಸರಕಾರೇತರ ಸಂಸ್ಥೆಗಳು ಮತ್ತು ಉಡುಪಿಯ ಪೋಲಿಸರ ಜಂಟಿ ಪ್ರಯತ್ನದ ಫಲ. ಇದು ಪ್ರತಿ ಹದಿನೈದು ದಿನಗಳಿಗೊಮ್ಮೆ ಭಾನುವಾರ ಸಭೆಗಳನ್ನು ನಡೆಸುತ್ತದೆ. ಈ ಸಭೆಗಳಲ್ಲಿ ಮಹಿಳೆಯರಿಂದಲೇ ಮಹಿಳೆಯರ ಮೇಲೆ ನಡೆಯುವ ಹಿಂಸೆಯ ಬಗ್ಗೆ ಅನೇಕ ಸಲ ಚರ್ಚೆ ನಡೆಸಲಾಗಿದೆ. ತಾಯಂದಿರು ಮತ್ತು ನಾದಿನಿಯರು ಸೇರಿ ಸೊಸೆಯಂದಿರಿಗೆ ಹಿಂಸೆ ಕೊಡುತ್ತಾರೆ. ಸ್ತ್ರೀಯರಿಂದ ನಡೆಯುವ ಇಂಥ ಇನ್ನೊಂದು ದೌರ್ಜನ್ಯ ಎಂದರೆ, ಹೆಣ್ಣು ಭ್ರೂಣ ಹತ್ಯೆ."

## ಸಚಿವೆಯರ ಪ್ರತಿಕ್ರಿಯೆ

ಪುರುಷರ ಜವಾಬ್ದಾರಿಯ ಬಗ್ಗೆ ಮಾತನಾಡುತ್ತಾ, ಸಚಿವೆಯರು ತಮ್ಮ ಉಧ್ಘಾಟನಾ ಭಾಷಣವನ್ನು ಪ್ರಸ್ತಾಪಿಸಿ, "ನನ್ನ ಭಾಷಣದಲ್ಲಿ, ನಾನೀಗಾಗಲೇ ಗಂಡಸರ ಪಲಾಯನವಾದ ಮತ್ತು ಹೊಣೆಗಾರಿಕೆ ಇಲ್ಲದಿರುವ ಬಗ್ಗೆ ಮಾತನಾಡಿದ್ದೇನೆ. ಹಿಂಸೆ-ದೌರ್ಜನ್ಯಕ್ಕೆ ಮಹಿಳೆಯರು ಕಾರಣ ಎಂದು ಹೇಳುವ ಮೂಲಕ ನೀವು, ಗಂಡಸರು ಹೊಣೆಯಿಂದ ನುಣುಚಿಕೊಳ್ಳುತ್ತಿದ್ದೀರಿ. ನಿಮ್ಮ ಪತ್ನಿ ವರದಕ್ಷಿಣೆ ತೆಗೆದುಕೊಳ್ಳುತ್ತಿದ್ದರೆ, ಅದನ್ನು ಸುಮ್ಮನೇ ನೋಡಿಕೊಂಡು ನಿಲ್ಲುವ ಬದಲು, ನಿಲ್ಲಿಸಲು ಪ್ರಯತ್ನಿಸಬಹುದಲ್ಲ? ಒಂದು ವೇಳೆ ಹೆಣ್ಣುಭ್ರೂಣ ತೆಗೆಸಲು ನಿಮ್ಮ ಹೆಂಡತಿ ಮೇಲೆ ಒತ್ತಡ ಇದ್ದರೆ, ಆಗ ನಿಮ್ಮ ಜವಾಬ್ದಾರಿ ಏನು? ಹಿರಿಯರಾಗಿ-ಪಾಲಕರಾಗಿ, ನೀವು ನಿಮ್ಮ ಹೆಣ್ಣು ಮಕ್ಕಳು ಹಾಗೂ ಗಂಡು ಮಕ್ಕಳಲ್ಲಿ ಭೇದ ಎಣಿಸಬಾರದು. ಹೆಣ್ಣು ಮಗುವಿಗೂ ಗಂಡು ಮಗುವಿಗೂ ಸಮಾನ ಪ್ರೀತಿ-ಆದರ, ಅವಕಾಶ ನೀಡಬೇಕು. ಕುಟುಂಬದಲ್ಲಿ ನಡೆಯುವ ಹಿಂಸೆಯ ಸಂದರ್ಭದಲ್ಲಿ, ಗಂಡಸರು ಆ ಹುಚ್ಚಾಟ ನಿಲ್ಲಿಸಲು ಪ್ರಯತ್ನಿಸಬೇಕು. ಪುರುಷರಾಗಿ ನೀವೇ ಯಾವಾಗಲೂ ಕುಟುಂಬದ ಮುಖ್ಯಸ್ಥರಾಗಿರುತ್ತೀರಿ, ನೀವೇ ಎಲ್ಲ ನಿರ್ಣಯಗಳನ್ನು ಕೈಗೊಳ್ಳಲು ಅಪೇಕ್ಷಿಸುತ್ತೀರಿ, ಮುಂದಾಗುತ್ತೀರಿ. ಸರಿ, ಹಾಗೇನೇ ಈ ಹಿಂಸೆಯ ಬಗ್ಗೆಗೂ ನೀವು ನಿರ್ಣಯ ಏಕೆ ತೆಗೆದುಕೊಳ್ಳುವುದಿಲ್ಲ? ಅತ್ತೆ-ಸೊಸೆಯರ ನಡುವೆ ಜಗಳ ಹುಟ್ಟಿಕೊಂಡಾಗ ಯಾವ ಗಂಡಸೂ ಮನೆಯಲ್ಲಿ ಇರುವುದಕ್ಕೆ ಇಷ್ಟಪಡುವುದಿಲ್ಲ. ಬೆಳಿಗ್ಗೇನೇ ಮನೆ ಬಿಟ್ಟು, ಕೆಲಸಕ್ಕೆ ಹೋಗಿ, ಗೆಳೆಯರು ಅವರಿವರನ್ನು ಭೇಟಿ ಮಾಡಿ, ಅವರ ಕೂಡ ತಿಂದು ಕುಡಿದು, ರಾತ್ರಿ ತಡವಾಗಿ ಮನೆಗೆ ಬಂದು ಗಡದ್ದಾಗಿ ನಿದ್ದೆ ಮಾಡಿಬಿಡುತ್ತಾರೆ ಗಂಡಸರು. ನಿಮಗೇ ನಿರ್ಣಯ ತೆಗೆದುಕೊಳ್ಳಲು ಆಗಲ್ಲ. ಆಗ ಹೆಣ್ಣು ಮಕ್ಕಳನ್ನು ಆರೋಪಿಸುತ್ತೀರಿ ಅಷ್ಟೇ!" ಎಂದರು.



ಪರಸ್ಪರ ವಿಚಾರ ವಿನಿಮಯ - ಮಾನ್ಯ ಮಂತ್ರಿಗಳು ಹಾಗೂ ಆಂಕಣ ಸದಸ್ಯರು



ಕ್ಷೇತ್ರ ಅನುಭವ ಹಂಚಿಕೆ - ಡಾ|| ಬಿ. ಕೆ. ಅನಿತಾ

ಮಹಿಳೆಯರ ಮೇಲಿನ ದೌರ್ಜನ್ಯದ ಬಗ್ಗೆ ಸಮುದಾಯದ ಸದಸ್ಯರು ಗ್ರಹಿಸಿರುವ ಒಳನೋಟಗಳನ್ನು ಡಾ|| ಬಿ.ಕೆ. ಅನಿತಾ ಅವರು ಮಂಡಿಸಿದರು.

## ಕ್ಷೇತ್ರಾನುಭವಗಳು : ಪ್ರಸ್ತಾವನೆಯಿಂದ ಆಯ್ದ ಭಾಗಗಳು

ನಮ್ಮ ಯೋಜನೆಗೆ, ಮಹಿಳಾ ಮಾನವ ಹಕ್ಕುಗಳ ನಾನಾ ಬಗೆಯ ಉಲ್ಲಂಘನೆಗಳನ್ನೆಲ್ಲ ವಿವರಿಸಲು ಒಂದು ವಿಶಾಲ ವ್ಯಾಖ್ಯೆಯ ಅಗತ್ಯ ಇದೆ. ಆದರೂ, 'ಹಿಂಸೆ' ಎಂಬ ಪದದಲ್ಲಿ ಅಡಕವಾಗಿರುವ ವಿವರಣಾತ್ಮಕ ವಿಸ್ತೃತ ಶಕ್ತಿ ಕೈ ಬಿಟ್ಟು ಹೋಗಬಹುದು ಎಂಬ ಭಯದಿಂದ, ನಾವು ಕೆಳಕಂಡ ವಿಶ್ವಸಂಸ್ಥೆಯ ವ್ಯಾಖ್ಯೆಯನ್ನು ಅಂಗೀಕರಿಸಿದ್ದೇವೆ.

"ಮಹಿಳೆ ಅಥವಾ ಬಾಲಕಿಯರಿಗೆ ಒಡ್ಡುವ ಯಾವುದೇ ಬಗೆಯ ಮೌಖಿಕ ಅಥವಾ ದೈಹಿಕ ಒತ್ತಾಯ, ಬಲಾತ್ಕಾರ ಅಥವಾ ಜೀವಹಾನಿ ಮಾಡುವಂಥ ಬೆದರಿಕೆಗಳು; ಅವರಿಗೆ ಮಾನಸಿಕವಾಗಿ ಅಥವಾ ದೈಹಿಕವಾಗಿ ಉಂಟು ಮಾಡುವ ಹಾನಿ, ಅಪಮಾನ, ಅಥವಾ ಸ್ವಾತಂತ್ರ್ಯಹರಣ".

ವಿಶ್ವಸಂಸ್ಥೆಯ ವ್ಯಾಖ್ಯೆಯ ಎರಡನೆಯ ಭಾಗಕ್ಕೆ ಒತ್ತು ನೀಡಲು ಬಯಸುತ್ತೇವೆ. ಏಕೆಂದರೆ ಅದು ಹಿಂಸೆಯಿಂದಾಗುವ ಸಾಮಾಜಿಕ ಪರಿಣಾಮಗಳ ಮೇಲೆ ಬೆಳಕು ಚೆಲ್ಲುತ್ತಿದೆ ಮತ್ತು ಸಮಾಜದಲ್ಲಿ ಮಹಿಳೆಯರ ಮೇಲೆ ಹಲವಾರು ಶಕ್ತಿಗಳಿಂದ, ಹಲವಾರು ರೂಪಗಳಿಂದ ನಡೆಯುತ್ತಿರುವ, ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಹಾನಿಕಾರಕ ಸಂಪ್ರದಾಯಗಳನ್ನು ಎತ್ತಿ ತೋರಿಸಲು ಸಹಾಯ ಮಾಡುತ್ತದೆ.

ಈ ವ್ಯಾಖ್ಯೆಯೊಂದಿಗೆ, ಸಮುದಾಯಗಳೊಂದಿಗೆ ಕೇಂದ್ರಿತ ಗುಂಪು ಚರ್ಚೆಗಳು ಆರಂಭವಾದವು. ಈ ಚರ್ಚೆಗಳ ಉದ್ದೇಶಗಳು ಈ ಮುಂದೆ ತಿಳಿಸಿದಂತೆ ಇವೆ:

- ನಮ್ಮ ಪ್ರಚಾರಾಂದೋಲನದ ಎಲ್ಲಾ ಹಂತಗಳಲ್ಲಿ ಸಮುದಾಯಗಳನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಲು, ಸಮುದಾಯಗಳೊಂದಿಗೆ ಉತ್ತಮ ಸಂಬಂಧವನ್ನು ಪುನಃ ಸ್ಥಾಪಿಸುವುದು.
- ನಮ್ಮ ಸಹಭಾಗಿ ಸಂಸ್ಥೆಗಳಿಂದ ಆದ್ಯತಾ ವಿಷಯವಾಗಿ ಪರಿಗಣಿತವಾಗಿರುವ 'ಮಹಿಳೆಯ ಮೇಲಿನ ಹಿಂಸೆ' ಗೆ ಪ್ರಾಮುಖ್ಯತೆ ನೀಡುವುದು.
- 'ಮಹಿಳೆಯರ ಮೇಲಿನ ಹಿಂಸೆ'ಯನ್ನು ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯದ ಚೌಕಟ್ಟಿನೊಂದಿಗೆ ಪರಿಚಯಿಸುವುದು.
- ಮಹಿಳೆಯರು ತಮ್ಮ ದಿನನಿತ್ಯದ ಬದುಕಿನಲ್ಲಿ ಅನುಭವಿಸುತ್ತಿರುವ ವಿವಿಧ ಬಗೆಯ ಹಿಂಸೆ, ಅದಕ್ಕೆ ಕಾರಣ ಮತ್ತು ಅದು ತಾಳುವ ರೂಪ ಇತ್ಯಾದಿಗಳನ್ನು ಅರಿತುಕೊಳ್ಳುವುದು.
- ಮಹಿಳೆಯ ಮೇಲೆ ನಡೆಯುತ್ತಿರುವ ವಿವಿಧ ಬಗೆಯ ಹಿಂಸೆಗಳನ್ನು ಅಂತರ ಜಿಲ್ಲಾ ಹಾಗೂ ಜಿಲ್ಲೆ ಒಳಗಿನ ಬೇರೆ ಬೇರೆ ಸಮುದಾಯಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳುವುದು.

- ಹಿಂಸಾರಹಿತ ಸಮಾಜ ನಿರ್ಮಾಣಕ್ಕಾಗಿ ಪ್ರಚಾರಾಂದೋಲನದಲ್ಲಿ ಅನುಸರಿಸಬೇಕಾದ ಮಾರ್ಗೋಪಾಯಗಳನ್ನು ಯೋಚಿಸುವುದು.

ವಿಧಾನಃ ಪ್ರತಿಯೊಂದು ಹಳ್ಳಿಯಲ್ಲಿ, ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ಎರಡು ಕೇಂದ್ರಿತ ಗುಂಪು ಚರ್ಚೆಗಳನ್ನು (FGD) ಏರ್ಪಡಿಸಿದ್ದೆವು. ಸಾಮಾಜಿಕ ವ್ಯತ್ಯಾಸದಿಂದಾಗಿ ಪರಸ್ಪರ ಬೆರೆಯುವ ಬಗ್ಗೆ ಇರುವ ಅಡೆತಡೆಗಳಿಂದಾಗಿ ಉಂಟಾಗಬಹುದಾದ ಉದ್ವೇಗಗಳನ್ನು ನಿವಾರಿಸಲು ಬಹಳಷ್ಟು ಜಾಗಗಳಲ್ಲಿ ಈ ಗುಂಪು ಚರ್ಚೆಗಳನ್ನು ಜಾತಿವಾರು ನಡೆಸಲಾಯಿತು. ಉದಾಹರಣೆಗೆ ವಿಜಾಪುರದಲ್ಲಿ ಮಾದಾರ ಮತ್ತು ಮಾದಿಗ ಜಾತಿಗಳ ಹೆಣ್ಣು ಮತ್ತು ಗಂಡು ಮಕ್ಕಳಿಗಾಗಿ ಪ್ರತ್ಯೇಕ ಗುಂಪು ಚರ್ಚೆಗಳನ್ನು ಏರ್ಪಡಿಸಲಾಗಿತ್ತು. ಸಾಮಾಜಿಕವಾಗಿ ಮುಂದುವರೆದ ಜಾತಿಗಳಾದ ದೇವಾಂಗ, ಲಿಂಗಾಯಿತ, ಕ್ಷತ್ರಿಯ ಹಾಗೂ ಕುರುಬ ಜಾತಿಗಳ ಹೆಣ್ಣು ಮತ್ತು ಗಂಡು ಮಕ್ಕಳಿಗಾಗಿ ಪ್ರತ್ಯೇಕ ಗುಂಪು ಚರ್ಚೆಯನ್ನು ನಡೆಸಲಾಯಿತು.

ಈ ಚರ್ಚೆಗಳಲ್ಲಿ 8 ರಿಂದ 16 ರವರೆಗೆ ಸರಾಸರಿ ಸದಸ್ಯರು ಭಾಗವಹಿಸುತ್ತಿದ್ದರು. ಸರಕಾರೇತರ ಸಂಸ್ಥೆಗಳು ಕಾರ್ಯ ನಿರ್ವಹಿಸದೇ ಇರುವ ಸ್ಥಳಗಳಲ್ಲಿ ಈ ಚರ್ಚೆಗೆ ಬರುವವರ ಹಾಜರಾತಿ ಕಡಿಮೆ ಇರುತ್ತಿತ್ತು. ಮಹಿಳೆಯರ ಮೇಲಿನ ಹಿಂಸೆಯನ್ನು ಚರ್ಚಿಸುವಾಗ ಜೀವನ ಚಕ್ರದ ವಿಧಾನವನ್ನು ಅಳವಡಿಸಿಕೊಂಡಿದ್ದೆವು. ಹಿಂಸೆಗೆ ಸಂಬಂಧಿಸಿದ ವಿಷಯವನ್ನು ಬಾಲ್ಯ, ಯೌವ್ವನ, ವಯಸ್ಕ, ವೈವಾಹಿಕ ಮತ್ತು ಮುಪ್ಪು ಈ ಮುಂತಾಗಿ ಭಾಗಿದಾರರ ಗ್ರಹಿಕೆಗೆ ಅನುಗುಣವಾಗಿ ವರ್ಗೀಕರಿಸಲಾಗಿತ್ತು.

ಈ ಚರ್ಚೆಗಳ ಉದ್ದೇಶ ಮುಖ್ಯವಾಗಿ ನಮ್ಮನ್ನು ನಾವು ಪುನರ್‌ಪರಿಚಯಿಸಿಕೊಂಡು, ಸಮುದಾಯಗಳೊಂದಿಗೆ ಉತ್ತಮ ಸಂಬಂಧ ಏರ್ಪಡಿಸಿಕೊಂಡು, ಮಹಿಳೆಯರ ಮೇಲಿನ ಹಿಂಸೆಯ ಬಗ್ಗೆ ಸಮುದಾಯಗಳ ಒಳನೋಟಗಳನ್ನು ಅರಿಯುವುದು ಆಗಿತ್ತು. ಆದ್ದರಿಂದ ಚರ್ಚೆಗಳಲ್ಲಿ, ಸಾಂಸ್ಕೃತಿಕ ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಈ ವಿಷಯದ ಬಗ್ಗೆ ಸಮುದಾಯಗಳಲ್ಲಿರುವ ತಿಳಿವಳಿಕೆ ಮತ್ತು ಅಡೆತಡೆಗಳನ್ನು ತಿಳಿದುಕೊಳ್ಳುವಲ್ಲಿ ಹೆಚ್ಚು ಗಮನ ನೀಡಿದ್ದೆವು. ಆರು ಜಿಲ್ಲೆಗಳಾದ್ಯಂತ ನಡೆದ 23 ಕೇಂದ್ರಿತ ಗುಂಪು ಚರ್ಚೆಗಳಿಂದ ಹೊರ ಹೊಮ್ಮಿದ ನಮ್ಮ ಅನುಭವಗಳನ್ನು ಒಳಗೊಂಡ ಯೋಜನೆಗಳನ್ನು ಒಂದು ಪುಸ್ತಕದಲ್ಲಿ ಮಂಡಿಸಿದೆವು. ಈ ಮಂಡನೆ ನಾವು ಉಪಯೋಗಿಸಿದ ವರ್ಗೀಕರಣ, ಸಮುದಾಯದ ಸದಸ್ಯರು ವ್ಯಕ್ತಪಡಿಸಿದ ಚಿಂತನೆಯ ಪ್ರತಿಫಲನ ಆಗಿತ್ತು. ಈ ಕಾರಣದಿಂದಾಗಿ ಅಲ್ಲಿ ನಮೂದಿಸಿದ ಮಾಹಿತಿಗಳು ಪುನಃ ಪುನಃ ಮಂಡಿತವಾಗಿವೆ. ಕೇಂದ್ರಿತ ಚರ್ಚೆ ನಡೆಸಿದ ಜಿಲ್ಲೆಗಳ, ಹಳ್ಳಿಗಳ, ಪ್ರಮುಖ ಸಮುದಾಯಗಳು ಹಿಂಸೆಯನ್ನು ಪ್ರಮುಖ ಸಮಸ್ಯೆಯನ್ನಾಗಿ ಗುರುತಿಸಿದ್ದು ಪಟ್ಟಿ - 1 ರಲ್ಲಿ ಕಾಣಿಸಲ್ಪಟ್ಟಿದೆ.

## ಪಟ್ಟಿ - 1: ಕೇಂದ್ರಿತ ಗುಂಪು ಚರ್ಚೆ - ಚಿತ್ರ- ಎ.

| ಜಿಲ್ಲೆ | ಹಳ್ಳಿ | ಜಾತಿ ಗುಂಪುಗಳು | ಕೇಂದ್ರಿತ ಗುಂಪುಗಳು | | ಗುಂಪಿನ ಸರಾಸರಿ ಪ್ರಮಾಣ | | ಗುರುತಿಸಲ್ಪಟ್ಟ ವಿಷಯಗಳು |
|---|---|---|---|---|---|---|---|
| | | | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು | |
| ವಿಜಾಪುರ | ಮಲ್ಲಾಪುರ | ಮಾದಾರ, ಮಾದಿಗ<br>ದೇವಾಂಗ, ಲಿಂಗಾಯಿತ<br>ಕ್ಷತ್ರಿಯ ಕುರುಬ | 2 | 2 | 14 | 15 | ದೇವದಾಸಿಯರು,<br>ಕಡಿಮೆಯಾಗುತ್ತಿರುವ<br>ಹುಡುಗಿಯರ ಮದುವೆ ವಯಸ್ಸು |
| ಚಿತ್ರದುರ್ಗ | ಹೊಸಹಳ್ಳಿ | ಆದಿಕರ್ನಾಟಕ,<br>ಬೋವಿ, ಗೊಲ್ಲ,<br>ಶೆಟ್ಟಿ, ಲಿಂಗಾಯಿತ | 2 | 2 | 15 | 13 | ವರದಕ್ಷಿಣೆ, ಪರಿತ್ಯಕ್ತ<br>ಹೆಣ್ಣು ಮಕ್ಕಳಿಗೆ ವಿಧಿಸುವ ಬಹಿಷ್ಕಾರ |
| ಕೊಡಗು | ರಂಗಸಮುದ್ರ | ಜೇನು ಕುರುಬ<br>ಕೊರಗ, ಬೆಟ್ಟ ಕುರುಬ,<br>ಬಿಲ್ಲವ | 1 | 1 | 10 | 8 | ಸರಕಾರಿ ಹಿಂಸೆ |
| ಕೋಲಾರ | ಮಿಂಜೇನಹಳ್ಳಿ<br>ನಾಗಮಂಗಲ | ಗೊಲ್ಲ,<br>ಬೋವಿ | 2 | 2 | 12 | 16 | ಮದ್ಯಪಾನದಿಂದಾಗುವ ಅಪರಾಧಗಳು |
| ಕೊಪ್ಪಳ | ತಲಕೇರಿ | ವಾಲ್ಮೀಕಿ<br>ಲಿಂಗಾಯಿತ<br>ಒಕ್ಕಲಿಗ, ಹೊಲೆಯ | 2 | 2 | 14 | 11 | ಬಾಲ್ಯವಿವಾಹ |
| ಉಡುಪಿ | ಪಾದೂರು | ಕೊರಗ,<br>ಆದಿ ಕರ್ನಾಟಕ,<br>ಬಂಟರು, ಬಿಲ್ಲವ,<br>ಶೆಟ್ಟಿ, ಪೂಜಾರ | 1 | 2 | 8 | 10 | ವರದಕ್ಷಿಣೆ |

ಪ್ರತಿಯೊಂದು ಹಳ್ಳಿ ಹಾಗೂ ಜನಾಂಗದ ಬಗೆಗಿನ ನಮ್ಮ ಆಂತರಿಕ ತಿಳಿವಳಿಕೆಯು, ಮಹಿಳೆಯರು ಎದುರಿಸುತ್ತಿರುವ ಹಿಂಸೆಯನ್ನು ಪ್ರಮುಖ ವಿಷಯವಾಗಿ ಪರಿಗಣಿಸಿದ ಗುಂಪುಗಳಿಂದ ಗುರುತಿಸಲ್ಪಟ್ಟ ಹಿಂಸೆಯ ವಿಷಯಕ್ಕಿಂತ ವಿಭಿನ್ನವಾಗಿದೆ. ಈ ತಿಳಿವು ನಮ್ಮ ಪರಿವೀಕ್ಷಣೆ ಮತ್ತು ಇತರ ಸರಕಾರೇತರ ಸಂಸ್ಥೆಗಳೊಂದಿಗಿನ ನಮ್ಮ ಕಾರ್ಯಾನುಭವದಿಂದ ಬಂದುದು. ಒಂದು ಸ್ಥಳ/ಹಳ್ಳಿಯಲ್ಲಿ ಯಾವುದೋ ಒಂದು ವಿಷಯಕ್ಕೆ ಪ್ರಾಮುಖ್ಯತೆ ನೀಡಿದ ಮಾತ್ರಕ್ಕೆ ಅಲ್ಲಿ ಉಳಿದ ಬಗೆಯ ಹಿಂಸೆಗಳು ಇಲ್ಲ ಅಥವಾ ಪ್ರಮುಖವಾಗಿಲ್ಲ ಎಂದು ಅರ್ಥವಲ್ಲ. ಆದರೂ, ಈ ವೈವಿಧ್ಯಗಳನ್ನು ಪುರುಷರು ಮತ್ತು ಮಹಿಳೆಯರ ವ್ಯಕ್ತಿನಿಷ್ಠ ವಾಸ್ತವಗಳೆಂದೂ, ವ್ಯತ್ಯಾಸಗಳು ಪರಿಗಣಿಸಬೇಕಾದ ವಿಷಯಗಳೆಂದೂ ಭಾವಿಸಿದೆವು.

ಉದಾಹರಣೆಗೆ, ವಿಜಾಪುರ ಜಿಲ್ಲೆಯ ಕೆಳಜಾತಿಗಳಲ್ಲಿ ದೇವದಾಸಿ ಪದ್ಧತಿ ಮತ್ತು ಬಾಲ್ಯವಿವಾಹಗಳು ಪ್ರಮುಖ ಸಾಮಾಜಿಕ ಅನಿಷ್ಟಗಳು ಎನಿಸಿದರೆ, ಉಳಿದ ಜಾತಿಗಳಲ್ಲಿ ಹೆಣ್ಣು ಮಕ್ಕಳು ದೊಡ್ಡವರಾದ ಬಳಿಕ ಶಾಲೆ ಬಿಡಿಸುವುದು ಮುಖ್ಯ ಸಮಸ್ಯೆಯಾಗಿ ಕಂಡು ಬಂದಿತು. ಹೀಗೆ ಬೇರೆ ಬೇರೆ ವಿಷಯಗಳು ಪ್ರಮುಖ ಎಂದು ಗುರುತಿಸಲು ಆಯಾ ಗುಂಪುಗಳಿಗೆ ಅವುಗಳದೇ ಆದ ಕಾರಣಗಳೂ ಇರುತ್ತವೆ. ಪರಿಶಿಷ್ಟ ಜಾತಿ ಗುಂಪುಗಳು ಹುಡುಗಿಯರನ್ನು ದೇವದಾಸಿಯರನ್ನಾಗಿ ಬಿಡುವುದರ ಬಗ್ಗೆ ಚರ್ಚಿಸಿದವು. ಏಕೆಂದರೆ ಈ ಭಾಗದಲ್ಲಿ ಈಗಾಗಲೇ ಆ ಸಮುದಾಯದೊಂದಿಗೆ ಕೆಲಸ ಮಾಡುತ್ತಿರುವ ಸರಕಾರೇತರ ಸಂಸ್ಥೆ ಅದನ್ನು ಪ್ರಮುಖ ವಿಷಯವಾಗಿ ಪರಿಗಣಿಸಿತ್ತು. ಆದಾಗ್ಯೂ, ಹೆಣ್ಣಿನ ಮೇಲಿನ ದೌರ್ಜನ್ಯದ ಇನ್ನೊಂದು ರೂಪವಾದ ಬಾಲ್ಯವಿವಾಹದ ಬಗ್ಗೆ ಚರ್ಚೆ ನಡೆಸಲು ಅವರು ಸಿದ್ಧರಿದ್ದಿಲ್ಲ. ಸಾಮಾಜಿಕವಾಗಿ ಸ್ವಲ್ಪ ಮುಂದುವರೆದ ಜಾತಿಗಳು ಎನಿಸಿದ ದೇವಾಂಗ, ಲಿಂಗಾಯಿತ ಮತ್ತು ಕ್ಷತ್ರಿಯ ಇವರು ಸಾಮಾಜಿಕ ಒತ್ತಡಗಳ ಒಗ್ಗೆ ಚರ್ಚಿಸಿದರು.

ಅದೇ ರೀತಿಯಲ್ಲಿ, ಉಡುಪಿಯಲ್ಲಿ ಕೌಟುಂಬಿಕ ಹಿಂಸೆಯ ಬಗ್ಗೆ ನಡೆದ ಚರ್ಚೆಯು ವರದಕ್ಷಿಣೆಯ ಹೆಚ್ಚಳ, ಇದರಿಂದುಂಟಾಗುವ ಹೆಣ್ಣು ಮಕ್ಕಳ ವಿವಾಹ ವಿಳಂಬ, ತತ್ಪರಿಣಾಮವಾಗಿ ಆರ್ಥಿಕ ಹೊರೆ, ವರದಕ್ಷಿಣೆಗಾಗಿ ಪೀಡನೆಯ ಸುತ್ತ ಕೇಂದ್ರಿಕೃತವಾಗಿತ್ತು.

*ಉಡುಪಿ ಜಿಲ್ಲೆಯಲ್ಲಿ, ವರದಕ್ಷಿಣೆ ದರದ ವಿಪರೀತ ಹೆಚ್ಚಳವು ಕನ್ಯೆಯರ ವಿವಾಹ ವಿಳಂಬವಾಗಲು ಕಾರಣವಾದರೆ, ಇದೇ ಸಮಸ್ಯೆ ವಿಜಾಪುರ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ದೇವದಾಸಿ ಹಾಗೂಬಾಲ್ಯವಿವಾಹ ಪದ್ಧತಿ, ವಯಸ್ಸಿಗೆ ಮುಂಚಿನ ಮದುವೆ ಈ ಮುಂತಾದ ಪದ್ಧತಿಗಳ ಮುಂದುವರಿಕೆಗೆ ಕಾರಣವಾಗುತ್ತದೆ. ಹೀಗೆ ಒಂದೇ ಸಮಸ್ಯೆಗೆ ಜಾತಿ-ಜನಾಂಗಗಳು ನೀಡುವ, ಭಿನ್ನ ರೀತಿಯ ಪ್ರತಿಕ್ರಿಯೆಗಳು ಸಮಸ್ಯೆಯನ್ನು ಸಾಂಸ್ಕೃತಿಕ ವಿಶಿಷ್ಠತೆಯ ವಾಸ್ತವದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕೆಂದು ಒತ್ತಾಯಿಸುತ್ತವೆ.*

ಹೆಚ್ಚಾಗಿ ಬುಡಕಟ್ಟು ಜನಾಂಗದವರೇ ಇರುವ ಕೊಡಗು ಜಿಲ್ಲೆಯಲ್ಲಿ, ಗಂಡಸರ ಕುಡಿತದ ಚಟದಿಂದಾಗಿ ಹೆಂಡಂದಿರ ಮೇಲೆ ನಡೆಯುತ್ತಿರುವ ದೌರ್ಜನ್ಯ ದಿನನಿತ್ಯದ ಮಾತಾಗಿದೆ. ಸರಕಾರಿ ದೌರ್ಜನ್ಯದ ಬಗ್ಗೆ, ಅದರಲ್ಲೂ ಅರಣ್ಯ ಇಲಾಖೆಯಿಂದ ತಮಗಾಗುತ್ತಿರುವ

ಕಿರುಕುಳದ ಬಗ್ಗೆ ಈ ಜಿಲ್ಲೆಯವರು ಚರ್ಚಿಸಿದರು. ಏಕೆಂದರೆ, ಇವರೆಲ್ಲ ತಮ್ಮ ಉಪಜೀವನಕ್ಕಾಗಿ ಅವಲಂಬಿಸಿರುವುದು ಈ ಅರಣ್ಯವನ್ನೇ.

ಈಗ ಇಲ್ಲಿನ ಪ್ರಶ್ನೆ ಎಂದರೆ, ಸಮುದಾಯದಿಂದ ಸಮುದಾಯಕ್ಕೆ ಬೇರೆ ಬೇರೆಯೇ ಆಗಿರುವ ಈ ಆದ್ಯತಾ ವಿಷಯಗಳನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು? ನಮ್ಮ ಅನುಭವದ ಆಧಾರದಿಂದ ಮುಂದಿನ ಅಂಶಗಳು ಹೊರಹೊಮ್ಮುತ್ತವೆ.

**ಸಮುದಾಯದ ಆದ್ಯತೆಗಳು :**

- ಸಾಂಸ್ಕೃತಿಕವಾಗಿ, ರೂಢಿಗತವಾಗಿ ಅಭ್ಯಾಸದಲ್ಲಿರುವಂಥ ಹಿಂಸೆಯ ರೂಪಗಳ ಬಗ್ಗೆ ಈ ಜನಗಳು ಅಷ್ಟಾಗಿ ಮಹತ್ವ ನೀಡುವುದಿಲ್ಲ. ಅಷ್ಟೇ ಅಲ್ಲ ಅವು ಹಿಂಸೆಯೆಂದು ಸಹ ಪರಿಗಣಿಸಲ್ಪಡುವುದಿಲ್ಲ. ಆದಾಗ್ಯೂ, ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ಈ ವಿಷಯದ ಬಗ್ಗೆಯೇ ವಿಶೇಷ ಒತ್ತುಕೊಟ್ಟು, ಹೆಚ್ಚು ಕಾಲ ಪ್ರಚಾರ ಮಾಡಿದಾಗ ಸಮುದಾಯದವರಿಗೂ ಇವು ಮಹತ್ವದ ಸಂಗತಿಗಳೆನಿಸುತ್ತವೆ. ವಿಜಾಪುರ ಜಿಲ್ಲೆಯ ದೇವದಾಸಿ ಪದ್ಧತಿ, ಕೊಡಗಿನಲ್ಲಿನ ಸರಕಾರಿ ದೌರ್ಜನ್ಯಗಳನ್ನು ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

- ಕುಟುಂಬ ಸೌಖ್ಯಕ್ಕೆ ಕೇಡುಂಟು ಮಾಡುವ ಹಿಂಸಾ ರೂಪಗಳು ಸ್ವಲ್ಪ ಮಹತ್ವದ್ದವು ಎಂದು ತಿಳಿಯಲಾಗುತ್ತದೆ. ಉದಾಹರಣೆಗೆ, ಗಂಡ ಹೆಂಡತಿಯನ್ನು ಹೊಡೆದರೆ ಏನೂ ತಪ್ಪಿಲ್ಲ! ಅದು ಹಿಂಸೆಯಲ್ಲ! ಆದರೆ ಕುಡಿದು ಬಂದು ಹೊಡೆಯುವುದು, ಕುಡಿತದಿಂದ ಕುಟುಂಬದ ಆದಾಯದ ಮೇಲೆ ಕೆಟ್ಟ ಪರಿಣಾಮ ಬೀರುವುದು, ಅಥವಾ ಈ ಬಗೆಯ ಹಿಂಸೆ ಮಕ್ಕಳು ಮತ್ತು ಮನೆಯ ಇತರರ ಮೇಲೂ ಆಗತೊಡಗುವುದೆಲ್ಲ ಒಂದು ದೊಡ್ಡ ಸಂಗತಿಯಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ಮದ್ಯಪಾನವು ಮುಖ್ಯ ಸಮಸ್ಯೆಯಾಗಿ ಪರಿಗಣಿತವಾಗಿದೆ.

## ಗ್ರಹಿಕೆ : ಮಹಿಳೆಯರ ಮೇಲಿನ ಹಿಂಸೆ ಚರ್ಚೆಯಲ್ಲಿ ಗುಂಪುಗಳ ಮುಕ್ತ ಮನಸ್ಸು

ಸಾಂಸ್ಕೃತಿಕ ಅಡೆತಡೆ ಮತ್ತು ಸಮೀಕ್ಷಾ ವಿಧಾನದ ಮಿತಿಗಳಲ್ಲಿ ಹೇಳುವುದಾದರೆ ನಮ್ಮ ಮೊದಲಿನ ಅಧ್ಯಯನದಲ್ಲಿ ಹಿಂಸೆಯ ಬಗೆಗಿನ ವರದಿಗಳು, ದಾಖಲಾಗುವುದು ಕಡಿಮೆ ಎಂದೇ ಹೇಳಬೇಕು. ಆದರೆ, ಈ ಬಗೆಯ ದಾಖಲಾಗದ ಪರಿಸ್ಥಿತಿಯನ್ನು ಕುಟುಂಬ ಜೀವನಕ್ಕೆ ಇರುವ ಮಾನ ಮರ್ಯಾದೆ ಮತ್ತು ಹೆಣ್ಣುಮಕ್ಕಳು ಆ ಮೌಲ್ಯವನ್ನು ಕಾಪಾಡಲು ವಹಿಸಿಕೊಂಡಿರುವ ಜವಾಬ್ದಾರಿಯನ್ನು ಈ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು. ಈ ಮನೋಧರ್ಮ ಹೆಚ್ಚಾಗಿ ಸಮಾಜದ ಮೇಲುವರ್ಗದ ಜನಾಂಗದ ಹೆಣ್ಣುಮಕ್ಕಳಲ್ಲಿ ಹೆಚ್ಚು ಕಂಡುಬರುತ್ತದೆ.

ಸ್ತ್ರೀ ಮತ್ತು ಪುರುಷರು ತಮ್ಮ ಜೀವನಾನುಭವಗಳನ್ನು ಹಂಚಿಕೊಳ್ಳುವ ಭಾವನೆ ಉದ್ದೀಪಿಸಲು, ಸಮೀಕ್ಷಾ ವಿಧಾನವನ್ನು ಕೈಬಿಟ್ಟು, ಕೇಂದ್ರಿತ ಗುಂಪು ಚರ್ಚೆಯ (FGD)ಸಹಭಾಗಿ ವಿಧಾನವನ್ನು ಅಂಗೀಕರಿಸಲಾಯಿತು. ಆದಾಗ್ಯೂ, ವಿಷಯದ 'ಖಾಸಗಿತನ ' ಬಿಟ್ಟುಕೊಡುವ ಆತಂಕ, ಕುಟುಂಬದ ಮರ್ಯಾದೆ, ವೈವಾಹಿಕ ಜೀವನದ ಪಾವಿತ್ರ್ಯ, ಸಂಬಂಧಗಳನ್ನು ಕಾಯ್ದುಕೊಳ್ಳಬೇಕು ಎನ್ನುವ ಮನೋಭಾವನೆಯಿಂದಾಗಿ ಗುಂಪುಗಳಲ್ಲಿ ಮುಕ್ತತೆಯ ಪ್ರಮಾಣದಲ್ಲಿ ವ್ಯತ್ಯಾಸ ಆಗುತ್ತಿತ್ತು. ಹಲವಾರು ಸಣ್ಣವಯಸ್ಸಿನ ಮಹಿಳೆಯರು, ಹಿರಿಯ ಸ್ತ್ರೀಯರೆದುರು ಮುಕ್ತವಾಗಿ ಮಾತನಾಡಲು ಹಿಂಜರಿಯುತ್ತಿದ್ದರು. ಚರ್ಚೆಯ ಆರಂಭದಲ್ಲಿ, ಪುರುಷರ ಗುಂಪುಗಳು ಹೆಣ್ಣು ಮಕ್ಕಳ ಮೇಲೆ ನಡೆಯುವ ಯಾವುದೇ ಬಗೆಯ ಹಿಂಸೆಯನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಆದ್ದರಿಂದ, ಈ ವಿವಿಧ ಬಗೆಯ ಪ್ರತಿಕ್ರಿಯೆಗಳ ಸಾಂದರ್ಭಿಕತೆಯನ್ನು ಅರಿಯಲು, ಮನೆಗಳಲ್ಲಿ, ಸಾಮಾನ್ಯವಾಗಿ ಮಹಿಳೆಯ ಮೇಲಿನ ಹಿಂಸೆಗೆ ಸಂಬಂಧಿಸಿದ ಮುಕ್ತತೆ ಮತ್ತು ಗ್ರಹಿಕೆ, ಸಾಂಸ್ಕೃತಿಕವಾಗಿ ರೂಢಿಯಲ್ಲಿ ಬಂದ ಹಿಂಸೆಯ ರೂಪಗಳು, ಸರಕಾರದಿಂದ ನಡೆಯುವ ದೌರ್ಜನ್ಯಗಳು ಇವೆಲ್ಲವನ್ನು ಭಿನ್ನ ಭಿನ್ನವಾಗಿ ಗ್ರಹಿಸಬೇಕಾದ ಅಗತ್ಯವಿದೆ.

### ಪಟ್ಟಿ -2: ಗ್ರಹಿಕೆ/ಗುಂಪುಗಳ ಮುಕ್ತತೆ

| ಜಿಲ್ಲೆ | ಮಹಿಳೆಯ ಮೇಲಿನ ಹಿಂಸೆ | | ಮನೆಗಳಲ್ಲಿ ಕೌಟುಂಬಿಕ | | ಸಾಂಸ್ಕೃತಿಕ | | ಸರಕಾರಿ ಹಿಂಸೆ | |
|---|---|---|---|---|---|---|---|---|
| | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು | ಪುರುಷರು | ಮಹಿಳೆಯರು |
| ಬಿಜಾಪುರ | 6 | 4, 5 | 5 | 5 | 5 | 5 | - | - |
| ಚಿತ್ರದುರ್ಗ | 6 | 5 | 6 | 5 | 6 | 5 | - | - |
| ಕೊಡಗು | 7 | 7 | 5 | 5 | 5 | 5 | 3 | 3 |
| ಕೋಲಾರ | 5 | 4 | 6 | 3 | 6 | 4 | - | - |
| ಕೊಪ್ಪಳ | 6 | 3, 5 | 6 | 5 | 6 | 5 | - | - |
| ಉಡುಪಿ | 6 | 4 | 6 | 5 | 6 | 5 | - | - |

1. ತಿಳುವಳಿಕೆಯ ಕೊರತೆಯಿಂದಾಗಿ ಕಡಿಮೆ ಪ್ರಮಾಣದ ಗ್ರಹಿಕೆ.
2. ಸಾಂಸ್ಕೃತಿಕ ಅಡೆತಡೆಗಳಿಂದಾಗಿ ಕಡಿಮೆ ಪ್ರಮಾಣದ ಗ್ರಹಿಕೆ.
3. ಚರ್ಚೆಗೆ ಮುಕ್ತ.
4. ಚರ್ಚೆಗೆ ಮುಕ್ತವಾಗಿದ್ದರೂ ತಿಳುವಳಿಕೆಯ ಕೊರತೆ.
5. ಮಹಿಳೆಯರ ಮೇಲಿನ ದೌರ್ಜನ್ಯವನ್ನು ತುಂಬಾ ಒಪ್ಪಿಕೊಂಡಿದ್ದರಿಂದಾಗಿ ಕಡಿಮೆ ಪ್ರಮಾಣದ ಗ್ರಹಿಕೆ.
6. ರಕ್ಷಿತ ಪ್ರತಿಕ್ರಿಯೆ / ಎಚ್ಚರಿಕೆ ವಹಿಸಿದ ಪ್ರತಿಕ್ರಿಯೆ.
7. ನಿರ್ದಿಷ್ಟ ವಿಷಯಗಳ ಮೇಲಿನ ಚರ್ಚೆಗೆ ಮುಕ್ತ.

**ಮಹಿಳೆಯರ ಮೇಲಿನ ಹಿಂಸೆ : ಜಿಲ್ಲೆಗಳಲ್ಲಿನ ಅಂತರ**

ಪಟ್ಟಿ 2 ನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಮಹಿಳೆಯರ ಮೇಲಿನ ಹಿಂಸೆಯ ಬಗೆಗಿನ ಚರ್ಚೆಯಲ್ಲಿ ವ್ಯಕ್ತವಾದ ಪುರುಷರ ಬಹಳಷ್ಟು ಅಭಿಪ್ರಾಯಗಳು "ರಕ್ಷಿತ / ತುಂಬಾ ಎಚ್ಚರಿಕೆಯಿಂದ" ನೀಡಿದ ಹೆಚ್ಚು ಸೂಕ್ತ ಪ್ರತಿಕ್ರಿಯೆಗಳಂತೆ ಕಂಡುಬರುತ್ತವೆ. ಉದಾಹರಣೆಗೆ, ಬಿಜಾಪುರ, ಚಿತ್ರದುರ್ಗ, ಉಡುಪಿ ಮತ್ತು ಕೊಪ್ಪಳಗಳಲ್ಲಿನ ಪುರುಷರು, ಹೆಣ್ಣು ಮಕ್ಕಳ ಮೇಲೆ ಯಾವುದೇ ಬಗೆಯ ಹಿಂಸೆ ನಡೆಯುತ್ತಿಲ್ಲ ಎಂದು ಒಮ್ಮತದಿಂದ ಹೇಳುತ್ತಿದ್ದರು. ಕೋಲಾರ ಜಿಲ್ಲೆಯಲ್ಲಿ ಈ ಚರ್ಚೆಗೆ ತುಂಬ ಕಡಿಮೆ ಪ್ರತಿಕ್ರಿಯೆ ಬಂದಿತ್ತು. ಏಕೆಂದರೆ ಅವರ ಪ್ರಕಾರ ಅದು ತಮ್ಮ ಕುಟುಂಬ ಜೀವನದ ಅವಿಭಾಜ್ಯ ಅಂಗ.

ಎಲ್ಲ ಜಿಲ್ಲೆಗಳಲ್ಲಿ, ಎಲ್ಲ ಜಾತಿ-ವರ್ಗಗಳ ಮಹಿಳೆಯರು ಈ ಹಿಂಸೆಯ ಬಗ್ಗೆ ಚರ್ಚೆ ನಡೆಸಲು ಯಾವುದೇ ಬಗೆಯ ವಿರೋಧ ತೋರಲಿಲ್ಲ. ಹಿಂಸೆಯ ರೂಪ, ಅದನ್ನು ಗ್ರಹಿಸಿರುವ ರೀತಿ, ಅದರ ಹಿಂದಿರುವ ಕಾರಣ ಇತ್ಯಾದಿಗಳಲ್ಲಿ ವ್ಯತ್ಯಾಸಗಳನ್ನು ತೋರ್ಪಡಿಸಿದರೂ ಎಲ್ಲ ಮಹಿಳಾ ಗುಂಪುಗಳನ್ನು ಈ ವಿಷಯದೊಂದಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳಲು ಶಕ್ತವಾಗಿದ್ದವು. ಮಹಿಳಾ ಗುಂಪುಗಳಲ್ಲಿ ಹರಿದ ಒಂದು ಸಾಮಾನ್ಯ ಭಾವನೆಯೆಂದರೆ, ಈ ವಿಷಯದ ಬಗ್ಗೆ ಒಂದು ಬಗೆಯ ಲಘು ದೃಷ್ಟಿಕೋನ. ಕೆಲವು ಗುಂಪುಗಳಲ್ಲಿ ಸಾಕಷ್ಟು ಉತ್ಸಾಹ - ಮುಕ್ತತೆ ಇದ್ದರೂ ಅವರಿಗೆ ವಿಷಯದ ಬಗ್ಗೆ ಹೆಚ್ಚು ತಿಳಿವಳಿಕೆ ಇರಲಿಲ್ಲ. ಉದಾಹರಣೆ: ವಿಜಾಪುರ *ಮತ್ತು ಕೊಪ್ಪಳ ಜಿಲ್ಲೆಗಳಲ್ಲಿನ ಮಹಿಳೆಯರು ಚರ್ಚೆಗೆ ಮುಕ್ತವಾಗಿದ್ದರೂ ಪುರುಷ ಪ್ರಧಾನ ಸಂಸ್ಕೃತಿಯ ಮೌಲ್ಯಗಳಿಂದಲೇ ಅವರ ಮನಸ್ಸೆಲ್ಲ ತುಂಬಿತ್ತು. ಆದಗ್ಯೂ, ಚರ್ಚೆಯ ಸಂದರ್ಭದಲ್ಲಿ ಈ ಮಹಿಳೆಯರು, ಹುಡುಗಿಯರ ಮದುವೆಯ ವಯಸ್ಸಿನಲ್ಲಿ ಆಗುತ್ತಿರುವ ಇಳಿಮುಖ ಹಾಗೂ ಇದಕ್ಕೆ ಕಾರಣ ವರದಕ್ಷಿಣೆಯ ವಿಪರೀತ ಹಾವಳಿ ಎಂಬುದನ್ನು ಗುರುತಿಸಲು ಶಕ್ತವಾಗಿದ್ದರು. ಅದುವೇ ಪುರುಷರು ಮಾತ್ರ ಮಹಿಳೆಯರ ಮೇಲೆ ಯಾವ ಬಗೆಯ ಹಿಂಸೆಯೂ ಇಲ್ಲ ಎಂದು ಹೇಳುತ್ತಲೇ ಇದ್ದರು.*

ಮನೆಯೊಳಗಿನ ಹಿಂಸೆ ಮತ್ತು ಪರಂಪರೆಯಿಂದ ಅಭ್ಯಾಸವಾಗಿ ಬಂದಿರುವ ಹಿಂಸೆಯ ರೂಪಗಳ ಬಗ್ಗೆ ಚರ್ಚಿಸುತ್ತಿದ್ದಾಗ ಗಂಡಸರು ಯಥಾ ಪ್ರಕಾರ ತಮ್ಮ 'ರಕ್ಷಿತ-ಸೂಕ್ತ' ಪ್ರತಿಕ್ರಿಯೆಯನ್ನೇ ನೀಡುತ್ತಿದ್ದರು. ಕೊಡಗು ಜಿಲ್ಲೆಯ ಒಂದು ಹಳ್ಳಿಯಲ್ಲಿ ಬುಡಕಟ್ಟು ಜನಾಂಗದವರೇ ಹೆಚ್ಚಾಗಿದ್ದಾರೆ. ಇಲ್ಲಿನ ಸ್ತ್ರೀ ಪುರುಷರಿಬ್ಬರೂ ರಾಜ್ಯಾಧಿಕಾರ ದಿಂದ ತಮಗೆ ಒದಗುವ ಹಿಂಸೆ ಬಗ್ಗೆ ಚರ್ಚಿಸಲು ಮುಕ್ತರಾಗಿದ್ದರು. ಕಾಯ್ದಿಟ್ಟ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿರುವ ಇವರಲ್ಲಿನ ಅನೇಕರು, ಬುಡಕಟ್ಟು ಜನಾಂಗದವರ ಅರಣ್ಯ ಹಾಗೂ ಆ ಪ್ರದೇಶದ ಮೇಲಿನ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿರುವ ಸಂಸ್ಥೆಯೊಂದರಲ್ಲಿ ಭಾಗಿಗಳಾಗಿರುವುದರಿಂದ ಸರಕಾರವೇ ಹಿಂಸೆಯ ಮೂಲ ಎಂದು ಅವರು ಗ್ರಹಿಸಿದ್ದಾರೆ. ಹೆಂಡತಿಯನ್ನು ಗಂಡ ಹೊಡೆಯುವ, ಮತ್ತಿತರ ಬಗೆಯ ಹಿಂಸೆಯನ್ನು ಇಲ್ಲಿನ ಹೆಣ್ಣು ಮಕ್ಕಳು ಅಲ್ಲಗಳೆಯುವುಲ್ಲವಾದರೂ, ಅವರಿಗೆಲ್ಲ, ಅದೆಲ್ಲಕ್ಕಿಂತ ಸರಕಾರಿ ಹಿಂಸೆಯೇ ದೊಡ್ಡ ಸಮಸ್ಯೆಯಾಗಿ ಕಾಡುತ್ತಿತ್ತು. ಆದಾಗ್ಯೂ, ಜಿಲ್ಲೆಯ ಗುಂಪಿನೊಳಗೇ ಆಂತರಿಕ ಭಿನ್ನ ಅಭಿಪ್ರಾಯಗಳು ಇರುವುದೂ ಕಂಡು ಬಂದಿತ್ತು. ಉದಾಹರಣೆ: ವಿಜಾಪುರ ಜಿಲ್ಲೆಯಲ್ಲಿ, *ಹೆಣ್ಣು ಮಕ್ಕಳ ಮೇಲೆ ನಡೆಯುವ ಯಾವುದೇ ಬಗೆಯ ಹಿಂಸೆಯ ಕುರಿತು ಚರ್ಚಿಸಲು*

ಪರಿಶಿಷ್ಟ ಜಾತಿಯ ಮಹಿಳೆಯರಷ್ಟು ಮುಕ್ತತೆ ಮೇಲು ಜಾತಿಯ ಹೆಣ್ಣು ಮಕ್ಕಳಲ್ಲಿ ಇರಲಿಲ್ಲ. ಇದಕ್ಕೆ ಒಂದು ಮುಖ್ಯ ಕಾರಣ ಎಂದರೆ 'ಮಹಿಳಾ ಸಮಖ್ಯ ' ಎನ್ನುವ ಸಂಸ್ಥೆ ಪರಿಶಿಷ್ಟ ಜಾತಿಯ ಹೆಣ್ಣು ಮಕ್ಕಳೊಂದಿಗೆ ಅನೇಕ ವರ್ಷಗಳಲ್ಲಿ ಕಾರ್ಯಪ್ರವೃತ್ತವಾಗಿರುವುದು. ಒಟ್ಟು, ಇದೆಲ್ಲ ಒಂದೇ ಹಳ್ಳಿಯ ಎರಡು ವಿಭಿನ್ನ ಸ್ತ್ರೀ ಗುಂಪುಗಳಲ್ಲಿ ಬೇರೆ ಬೇರೆ ಬಗೆಯ ಅಭಿಪ್ರಾಯಗಳು ಇರುತ್ತವೆ ಎಂಬುದನ್ನು ತೋರುತ್ತದೆ.

**ಕೌಟುಂಬಿಕ ಹಿಂಸೆ**

ಪಟ್ಟಿ 2 ರಲ್ಲಿ, ಕೌಟುಂಬಿಕ ಹಿಂಸೆಗೆ ಪುರುಷರ ಪ್ರತಿಕ್ರಿಯೆ - 'ಹಿಂಸೆಯನ್ನು ಪೂರ್ಣವಾಗಿ ಒಪ್ಪಿಕೊಂಡಿರುವ ' ಮತ್ತು 'ರಕ್ಷಿತ ಪ್ರತಿಕ್ರಿಯೆ'ಯಾಗಿ ಅಥವಾ ಕಡಿಮೆ ಪ್ರಮಾಣದ ಗ್ರಹಿಕೆ ಆಗಿ ಕಂಡುಬರುತ್ತದೆ. ಅದೇ ವೇಳೆಗೆ, ಪುರುಷರ ಗುಂಪುಗಳಲ್ಲಿಯೇ ಇರುವ ಸೂಕ್ಷ್ಮ ವ್ಯತ್ಯಾಸಗಳನ್ನು ಸಹ ಗಮನಿಸಬೇಕು. ಉದಾಹರಣೆಗೆ : ಕೊಪ್ಪಳದಲ್ಲಿ ಕೆಳಜಾತಿಯ ಪುರುಷರು ಮನೆಯಲ್ಲಿ ತಮ್ಮಿಂದಾಗುವ ಹಿಂಸೆಯನ್ನು 'ಸಹಜ' ಎಂದು ಒಪ್ಪಿಕೊಂಡರೆ, ಮೇಲು ಜಾತಿಯ ಪುರುಷರು, "ಅದು ಅವರ ಒಳಿತಿಗಾಗಿ, ಕೌಟುಂಬಿಕ ಮೌಲ್ಯಗಳನ್ನು ಕಾಪಾಡುವುದಕ್ಕಾಗಿ; ಮತ್ತು ಹೆಣ್ಣುಮಕ್ಕಳು ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳಲ್ಲಿ ತಪ್ಪಿದಾಗ ದಂಡನೆ ಮಾಡಬೇಕಾಗುತ್ತದೆ " ಎಂದು ಸಮರ್ಥಿಸಿಕೊಳ್ಳುತ್ತಿದುದು ಕಂಡು ಬಂದಿತು. ಇದಕ್ಕೂ ಹೆಚ್ಚಾಗಿ, ಈ ರೀತಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವಾಗ, ಅದೆಲ್ಲ ಒಂದು ಬಗೆಯ ಹಿಂಸೆ ಎಂಬುದನ್ನು ಮಾತ್ರ ಒಪ್ಪಿಕೊಳ್ಳುತ್ತಿರಲಿಲ್ಲ. ಆದಾಗ್ಯೂ ಕೋಲಾರ ಜಿಲ್ಲೆಯೊಂದನ್ನು ಹೊರತು ಪಡಿಸಿ ಉಳಿದೆಲ್ಲ ಜಿಲ್ಲೆಯ ಮಹಿಳೆಯರು, ದುರ್ದೈವದಿಂದ, ಪುರುಷರ ಅಭಿಪ್ರಾಯಗಳೊಂದಿಗೆ ಶಾಮೀಲಾಗಿದ್ದರು. ಕೋಲಾರದಲ್ಲಿ 'ಗ್ರಾಮ ವಿಕಾಸ್' ಎಂಬ ಸರಕಾರೇತರ ಸಂಸ್ಥೆ ತನ್ನ ಅಭಿವೃದ್ಧಿ ಕಾರ್ಯಕ್ರಮಗಳ ಪಟ್ಟಿಯಲ್ಲಿ ಮದ್ಯಪಾನವನ್ನು ಪ್ರಮುಖ ಸಂಗತಿಯನ್ನಾಗಿ ಪರಿಗಣಿಸಿ ಕಾರ್ಯ ಪ್ರವೃತ್ತವಾಗಿದೆ. ಹೀಗಾಗಿ ಆ ಜಿಲ್ಲೆಯ ಹೆಣ್ಣು ಮಕ್ಕಳು ಈ ವಿಷಯಕ್ಕೆ ಸರಿಯಾಗಿ ಸ್ಪಂದಿಸಲು, ಚರ್ಚಿಸಲು, ಹಿಂಸೆಯ ಉಳಿದ ರೂಪಗಳು, ಕಾರಣಗಳ ಬಗ್ಗೆ ಮಾತನಾಡಲು ಸಮರ್ಥರಾಗಿದ್ದಾರೆ.

**ಸಾಂಸ್ಕೃತಿಕ ಹಿಂಸೆ**

ಪರಂಪರೆಯಿಂದ, ಸಾಂಸ್ಕೃತಿಕ ರೀತಿ ನೀತಿಯಾಗಿಯೇ ಜಾರಿಯಲ್ಲಿರುವ ಹಿಂಸೆಯ ಬಗ್ಗೆ ಪುರುಷರೆಲ್ಲರ ಪ್ರತಿಕ್ರಿಯೆಗಳು ಹೆಚ್ಚು ಕಡಿಮೆ ಒಂದೇ ತೆರನಾಗಿ ಇರುತ್ತವೆ. ಬಹಳಷ್ಟು ಜನ ಗಂಡಸರು 'ಇದು ಬದಲಾಯಿಸಲಾಗದ ಶಾಶ್ವತ ಸ್ಥಿತಿ' ಎಂದು ಹೇಳಿದರೆ ಇನ್ನು ಕೆಲವರು, ಅದು ತಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದ ಅವಿಭಾಜ್ಯ ಸ್ವರೂಪ ಎಂದು ಸಮರ್ಥಿಸಿಕೊಳ್ಳುತ್ತಾರೆ. ಹೆಣ್ಣು ಮಕ್ಕಳು ಕೂಡ ಇವುಗಳನ್ನು ಸಾಂಸ್ಕೃತಿಕ ಪಾವಿತ್ರ್ಯ ಎಂಬ ದೃಷ್ಟಿಯಿಂದ ಒಪ್ಪಿಕೊಂಡು ಬಿಡುತ್ತಾರೆ. ಎಲ್ಲ ಸಂಗತಿಗಳನ್ನು ಚರ್ಚಿಸಲು ಮುಕ್ತವಾಗಿದ್ದಂತಹ ಕೋಲಾರ ಜಿಲ್ಲೆಯ ಹೆಣ್ಣುಮಕ್ಕಳು ಕೂಡ ಕೆಲವು ಅನಿವಾರ್ಯ ಮಿತಿಗಳ ಒಳಗೆ ಮಾತ್ರ ಈ ಸಾಂಸ್ಕೃತಿಕ ಹಿಂಸೆಯ ಬಗ್ಗೆ ಚರ್ಚಿಸಲು ಒಲವು ಹೊಂದಿದ್ದರು. ಕೊಡಗು ಜಿಲ್ಲೆಯಲ್ಲಿ, ಈಗಾಗಲೇ ತಿಳಿಸಿರುವ ಕಾರಣಗಳಿಂದಾಗಿ, ಸರಕಾರದಿಂದ ಸ್ತ್ರೀಯರ ಮೇಲೆ ನಡೆಯುವ ಹಿಂಸೆಯನ್ನು ಚರ್ಚಿಸಲಾಯಿತು. ಸರಕಾರದಿಂದ ತಮ್ಮ ಮೇಲೆ

ನಡೆಯುತ್ತಿರುವ ದೌರ್ಜನ್ಯದ ಎದುರು, ಇವರು ದಿನನಿತ್ಯ ಅನುಭವಿಸುವ ಇತರ ಕೌಟುಂಬಿಕ ಅಥವಾ ಸಾಂಸ್ಕೃತಿಕ ಹಿಂಸೆಗಳು ಗೌಣವಾಗಿ ಬಿಡುತ್ತವೆ. ಏಕೆಂದರೆ, ಅರಣ್ಯಗಳೇ ಈ ಜನರ ಆದಾಯದ ಮೂಲ. ಅದಕ್ಕೇ ಸರಕಾರದಿಂದ ಕೊಡಲೀ ಪೆಟ್ಟು ಬಿದ್ದಾಗ ಉಳಿದೆಲ್ಲವೂ ಅವರಿಗೆ ಅಷ್ಟೊಂದು ಮುಖ್ಯ ಸಂಗತಿ ಎಂದೆನಿಸುವುದಿಲ್ಲ.

## ಗುಂಪಿನಿಂದ ವರದಿಯಾಗಿರುವ ಹಿಂಸೆಯ ರೂಪಗಳ ಬಗೆಗಿನ ಅರ್ಥ ಗ್ರಹಿಕೆ

ಹೆಣ್ಣು ಮಕ್ಕಳ ಮೇಲೆ ನಡೆಯುವ ಹಿಂಸೆಯನ್ನು ಅರ್ಥ ಮಾಡಿಕೊಳ್ಳಲು ನಾವು ಜೀವನ ಚಕ್ರ ವಿಧಾನವನ್ನು ಅಳವಡಿಸಿಕೊಂಡಿದ್ದೇವೆ. ಚರ್ಚೆಗಳನ್ನು ನಡೆಸಲು ಸಿದ್ಧಪಡಿಸಿದ ತಾಳೆ ನೋಡುವ ಪಟ್ಟಿ (Check List) ಹಿಂಸೆಯ ಹಲವಾರು ಮುಖಗಳನ್ನೆಲ್ಲ ಒಳಗೊಂಡಿತ್ತು. ಆದಾಗ್ಯೂ, ಹೆಣ್ಣು-ಗಂಡು ಮಕ್ಕಳಿಬ್ಬರೂ ಕೆಲವೇ ಅಂಶಗಳ ಬಗ್ಗೆ ಮಾತ್ರ ಚರ್ಚೆ ನಡೆಸಿದರು. *ಸುಮಾರು ನಾಲ್ಕು ವರ್ಷಗಳ ನಂತರ ಸಮುದಾಯಗಳೊಂದಿಗೆ ನಾವು ಪುನಃ ಸಂಪರ್ಕ ಏರ್ಪಡಿಸಿಕೊಳ್ಳುತ್ತಿದ್ದವು. ಆದ್ದರಿಂದ, ಸಮುದಾಯದವರು ಹಿಂಜರಿಯುವುದು, ಮುಕ್ತವಾಗಿ ಅಭಿವ್ಯಕ್ತಿ ಮಾಡಲು ಸಂಕೋಚ ಪಡುವುದು ಮತ್ತು ನಾವು ನಿರೀಕ್ಷಿಸುವ ಮಟ್ಟದ ಸೂಕ್ಷ್ಮತೆಯೊಂದಿಗೆ ಮಾತನಾಡುವುದಕ್ಕೆ ಹಿಂದುಮುಂದು ನೋಡುವುದು ಸಹಜವೇ ಆಗಿತ್ತು.* ಈ ಹಿಂದಿನ ಪಟ್ಟಿ 2 ರಿಂದ, ವಿಷಯದ ಪ್ರಾಮುಖ್ಯತೆಯ ಬಗ್ಗೆ ಇದ್ದ ಅರಿವಿನ ಕೊರತೆ, ಅದರಲ್ಲಿರುವ ಹಕ್ಕುಗಳ ಉಲ್ಲಂಘನೆಯ ವಿಷಯ, ಇವೆಲ್ಲ ಅವರು ಹಿಂಸೆಯ ವಿವಿಧ ಮುಖಗಳ ಬಗ್ಗೆ ಚರ್ಚಿಸಲು ಅನುವು ಮಾಡಿಕೊಡಲಿಲ್ಲ ಎಂಬ ಸಂಗತಿ ತಿಳಿದು ಬರುತ್ತದೆ. ಸಾಮಾನ್ಯವಾಗಿ ಸಮುದಾಯಗಳೊಂದಿಗೆ ನಾವು ಹೆಂಡಂದಿರನ್ನು ಹೊಡೆಯುವುದು, ಬಾಲ್ಯ ವಿವಾಹ, ವರದಕ್ಷಿಣೆ ಹಿಂಸೆ, ಮತ್ತು ಮದ್ಯಪಾನದಿಂದಾಗುವ ಅಪರಾಧಗಳ ಬಗ್ಗೆ ಚರ್ಚಿಸಲು ಸಾಧ್ಯವಾಯಿತು. ಹಿಂಸೆಯ ಇನ್ನುಳಿದ ಮುಖಗಳ ಬಗ್ಗೆ ಚರ್ಚೆಯಲ್ಲಿ ಲಘುಧೋರಣೆ ಕಂಡು ಬಂದಿತು. ಏಕೆಂದರೆ, ಬಹಳಷ್ಟು ಮಹಿಳೆಯರು ಈ ಹಿಂಸೆಗಳನ್ನು ತಮ್ಮ ಹಕ್ಕುಗಳ ಉಲ್ಲಂಘನೆ ಎಂಬುದನ್ನು ಅರಿಯದೆ ಹೋದರು. ಹಾಗೆಯೇ, ಬಹಳಷ್ಟು ಜನ ಪುರುಷರು. ಕೌಟುಂಬಿಕ ಹಿಂಸೆಗೆ ತಾವೇ ಕಾರಣ ಎಂಬುದನ್ನು ಒಪ್ಪಿಕೊಳ್ಳಲಿಲ್ಲ, ಏಕೆಂದರೆ, ಅದೆಲ್ಲ ವೈವಾಹಿಕ ಜೀವನದ, ಸಾಮಾಜಿಕವಾಗಿ ಒಪ್ಪಿತವಾಗಿರುವ ಪುರುಷ ನಡವಳಿಕೆ ಎಂದು ಆಳವಾಗಿ ಭಾವಿಸಿದ್ದರು.

## ಪಟ್ಟಿ 3 ಗುಂಪಿನಿಂದ ವರದಿಯಾಗಿರುವ ಹಿಂಸೆಯ ರೂಪಗಳು

| ಜಿಲ್ಲೆ | ಹೆಂಡತಿಯನ್ನು ಹೊಡೆಯುವುದು | | ಬಾಲ್ಯ ವಿವಾಹ | | ವರದಕ್ಷಿಣೆ ಪೀಡವೆ | | ಮದ್ಯಪಾನದಿಂದ ಹೊರುವ ಅಪರಾಧಗಳು | | ಶಿಕ್ಷಣ ಕೆಲಸಗಳ ಮೇಲಿನ ನಿರ್ಬಂಧಗಳು | | ಹೆಣ್ಣು ಮಕ್ಕಳ ಬಗ್ಗೆ ಸಾಮಾಜಿಕ ತಾರತಮ್ಯ | | ವಿಧವೆಯರು ಮತ್ತು ಪರಿತ್ಯಕ್ತ ಮಹಿಳೆಯರ ಬಹಿಷ್ಕಾರ | |
|---|---|---|---|---|---|---|---|---|---|---|---|---|---|---|
| | ಪು | ಮ | ಪು | ಮ | ಪು | ಮ | ಪು | ಮ | ಪು | ಮ | ಪು | ಮ | ಪು | ಮ |
| ವಿಜಾಪುರ | 1 | 1 | 2 | 2 | 3 | 4 | 6 | 4 | 3 | 3 | 6 | 3 | 3 | 4 |
| ಚಿತ್ರದುರ್ಗ | 1 | 1 | 6 | 3 | 3 | 4 | 6 | 4 | 3 | 3 | 3 | 3 | 3 | 4 |
| ಕೊಡಗು | 1 | 1 | - | - | - | - | 1 | 1 | - | - | 3 | 3 | - | - |
| ಕೋಲಾರ | 1 | 4 | 3 | 3 | 1 | 1 | 1 | 4 | 3 | 4 | 3 | 3 | 3 | 4 |
| ಕೊಪ್ಪಳ | 6 | 1 | 2 | 2 | 1 | 1 | 1 | 1 | 3 | 3 | 3 | 3 | 1 | 1 |
| ಉಡುಪಿ | 6 | 1 | 6 | 6 | 3 | 4 | 6 | 1 | 3 | 4 | 6 | 6 | 3 | 3 |

ಪು - ಪುರುಷರು

ಮ - ಮಹಿಳೆಯರು

1. ಹೆಚ್ಚು ಪ್ರಮಾಣದ ಅನಿವಾರ್ಯ ಒಪ್ಪಿಗೆ.
2. ಧಾರ್ಮಿಕ ನಿರ್ಬಂಧ.
3. ಸಾಮಾಜಿಕವಾಗಿ ಸ್ವೀಕಾರ್ಹ.
4. ನಿರಾಶಾದಾಯಕವಾದ ತೀವ್ರ ಅಸಮಾಧಾನ.
5. ಘಟನೆಯ ನಿರಾಕರಣೆ.

ಚರ್ಚೆಗಳು ಸಹಜವಾಗಿ ನಡೆಯಬೇಕು ಎಂಬುದು ನಮ್ಮ ಆಶಯ ಆಗಿತ್ತು. ಆದ್ದರಿಂದ ಮಹಿಳೆಯರ ಮೇಲಿನ ಹಿಂಸೆಯ ನಿರ್ದಿಷ್ಟ ವರ್ಗೀಕರಣಗಳಾದ ಮಾನಸಿಕ, ದೈಹಿಕ ಮತ್ತು ಮನೋವೈಜ್ಞಾನಿಕ, ಕೌಟುಂಬಿಕ ಮುಂತಾದ ವರ್ಗೀಕರಣಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಿಲ್ಲ. ಇದರ ಬದಲಾಗಿ ಭಾಗಿದಾರರ ತಿಳಿವಳಿಕೆ ಮತ್ತು ಅನುಭವವು ಚರ್ಚೆಯ ದಿಕ್ಕನ್ನು ನಿರ್ಧರಿಸುತ್ತಿತ್ತು. ಹೀಗಾಗಿ ಚರ್ಚೆ ನಿರ್ದಿಷ್ಟ ಅಪೇಕ್ಷಿತ ವರ್ಗೀಕರಣ ಅನುಸರಿಸಲು ಆಗಲಿಲ್ಲ. ಈ ಕಾರಣದಿಂದಾಗಿ, ತಾವು ತಮ್ಮ ನಿತ್ಯದ ಜೀವನದಲ್ಲಿ ಅನುಭವಿಸುತ್ತಿದ್ದ ಹಿಂಸೆಗಳು ವರ್ಗೀಕರಣದ ಚೌಕಟ್ಟಿನಿಂದ ನುಸುಳಿಕೊಂಡು ಹೋಗಿಬಿಡುತ್ತಿದ್ದವು. ಹಕ್ಕುಗಳ ಉಲ್ಲಂಘನೆಯ ರೀತಿಗಳನ್ನು ಹೇಳಿಕೊಳ್ಳಬೇಕೆಂಬ ಅತೀ ಕಾತರದಿಂದಾಗಿ, ಹಲವಾರು ಬೇರೆ ವಿಷಯಗಳು ಚರ್ಚೆಗೆ ಒಳಗಾಗಲೇ ಇಲ್ಲ.

ನಾವು ಯಾವುದಕ್ಕೆ ಹೆಚ್ಚು ಮುಖ್ಯ ಗಮನ ನೀಡಬೇಕೆಂಬುದು ನಿರೀಕ್ಷೆ ಇಟ್ಟುಕೊಂಡಿದ್ದೆವೋ ಅದಕ್ಕಿಂತ ಬೇರೆ ಕೆಲವು ವಿಷಯಗಳು ಚರ್ಚೆಗೆ ಬಂದು ಸಾಕಷ್ಟು ಗಮನಸೆಳೆದವು. ಉದಾಹರಣೆಗೆ, ಚಿತ್ರದುರ್ಗ ಜಿಲ್ಲೆಯಲ್ಲಿ ವಿಧವೆಯರು ಮತ್ತು ಪರಿತ್ಯಕ್ತ ಹೆಣ್ಣು ಮಕ್ಕಳು ಎದುರಿಸುತ್ತಿರುವ ಸಾಮಾಜಿಕ ನಿರ್ಬಂಧಗಳು ಮುಖ್ಯ ವಿಷಯ ಆಗಿತ್ತು. ಈ ಜಿಲ್ಲೆಯಲ್ಲಿ ಈ ಪದ್ಧತಿ ಇದೆ ಎಂಬುದನ್ನು ಅಲ್ಲಿಯ ಹೆಣ್ಣು ಮಕ್ಕಳು ಒಪ್ಪಿಕೊಂಡರು. ಇಲ್ಲಿ ಹೆಣ್ಣು ಮಕ್ಕಳ ಮೇಲೆ ವಿಪರೀತವಾಗಿ ಸಾಮಾಜಿಕ ನಿರ್ಬಂಧ, ನಿಯಂತ್ರಣಗಳಿವೆ. ಇದರಿಂದ, ಸಮಾಜದಲ್ಲಿ ಒಂಟಿ ಹೆಂಗಸು ತಾನು ಯಾವುದೇ ತಪ್ಪು ಮಾಡದೇ ಇರುವಾಗಲೂ, ಉಳಿದ ಹೆಂಗಸರಿಗಿಂತ ಹೆಚ್ಚು ತೊಂದರೆ, ನಿರ್ಬಂಧಗಳನ್ನು ಎದುರಿಸಬೇಕಾಗುತ್ತದೆ.

ಸಾಮಾಜಿಕ ಹಾಗೂ ಧಾರ್ಮಿಕ ವಿಧಿ ನಿಷೇಧಗಳಿಂದಾಗಿ ಇಂಥ ಹಿಂಸೆಯನ್ನು ಪೂರ್ಣವಾಗಿ ಸಮಾಜ ಒಪ್ಪಿಕೊಂಡಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಈ ಬಗೆಯ ಸಂಗತಿಗಳ ಬಗ್ಗೆ ಬಹಳಷ್ಟು ಹೆಣ್ಣುಮಕ್ಕಳು ಅಸಮಾಧಾನ ವ್ಯಕ್ತಪಡಿಸಿದರೂ, ಪರ್ಯಾಯ ಮಾರ್ಗ-ಉಪಾಯಗಳ ಕೊರತೆಯಿಂದಾಗಿ ಆ ಬಗ್ಗೆ ಅಸಹಾಯಕರಾಗಿದ್ದರು. ಪಟ್ಟಿ 3 ರಲ್ಲಿ, ನಿರಾಕರಣೆ, ಅನಿವಾರ್ಯ ಒಪ್ಪಿಗೆ ಮತ್ತು ಸಾಮಾಜಿಕ ಒಪ್ಪಿಗೆಗಳು ಹೆಚ್ಚಾಗಿ ಗಂಡಸರ ಗುಂಪುಗಳಲ್ಲಿ ವ್ಯಕ್ತವಾದದು ಕಂಡು ಬರುತ್ತದೆ. ಇಲ್ಲಿ ಕೂಡ ಅನಿವಾರ್ಯ ಒಪ್ಪಿಗೆಗಳನ್ನು ಅವರು ಹಿಂಸೆಯ ರೂಪವೆಂದು ಪರಿಗಣಿಸುತ್ತಾರೆ ಎನ್ನಲಾಗದು. ನಿರಾಕರಣೆ, ಅನಿವಾರ್ಯ ಒಪ್ಪಿಗೆ, ಸಾಮಾಜಿಕ ಒಪ್ಪಿಗೆ ಈ ಮೂರು ಬಗೆಯ ಪ್ರತಿಕ್ರಿಯೆಗಳಲ್ಲಿರುವ ಸೂಕ್ಷ್ಮ ವ್ಯತ್ಯಾಸಗಳು ಹೆಣ್ಣು ಮಕ್ಕಳ ಮೇಲೆ ನಡೆಯುವ ಹಿಂಸೆಯ ಘಟನೆಗಳನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆ ಎಂಬುದನ್ನು ವಿಶ್ಲೇಷಿಸಲು ಉತ್ತಮ ಅವಕಾಶ ನೀಡುತ್ತವೆ. ಕೆಲವು ಘಟನೆಗಳು ಖಂಡಾಖಂಡಿತವಾಗಿ ತಿರಸ್ಕರಿಸಲ್ಪಟ್ಟವು. ಉದಾಹರಣೆಗೆ, ಮದ್ಯಪಾನ

ದಿಂದಾಗುವ ಅಪರಾಧಗಳು. ಹೆಂಡತಿಯನ್ನು ಹೊಡೆಯುವಂಥ ಘಟನೆಗಳನ್ನು ಹಿಂಸೆಯ ರೂಪಗಳೆಂದು ತಿಳಿಯದೇ ಇದ್ದಾಗ, ಅದು ಹಿಂಸೆಯೆಂದು ಒಪ್ಪಿಕೊಳ್ಳದೇ ಹೋದದ್ದೂ ಉಂಟು.

ವರದಕ್ಷಿಣೆ ಸಂಬಂಧ ನಡೆಯುವ ಹಿಂಸೆ, ಪೀಡೆ, ಮದ್ಯಪಾನದಿಂದಾಗುವ ಅಪರಾಧ, ಸಾಮಾಜಿಕ ಬಹಿಷ್ಕಾರಗಳ ಬಗ್ಗೆ ಮಹಿಳೆಯರಲ್ಲಿ ತೀವ್ರ ಅಸಮಾಧಾನ, ಕೋಪ ಇರುವುದು ಕಂಡು ಬಂದಿತು. ಹೆಂಡಂದಿರನ್ನು ಆರೋಪಿಸುವುದು, ನಿಂದಿಸುವುದು ಎಲ್ಲೆಡೆ ಇರುವ ರೋಗ ಎಂದು ಅವರು ಒಪ್ಪಿಕೊಂಡರಲ್ಲದೇ, ಅದರ ಬಗ್ಗೆ ತಾವು ಮಾತನಾಡಬಹುದು, ಪರಿಹಾರ ಕಂಡುಕೊಳ್ಳಬಹುದು, ಎಂದೂ ಭಾವಿಸಿದರು.

ಧಾರ್ಮಿಕ ನಂಬಿಕೆಗಳು, ಬಾಲ್ಯ ವಿವಾಹಕ್ಕೆ ಇರುವ ಸಾಮಾಜಿಕ ಒತ್ತಡಗಳು, ಹೆಣ್ಣುಮಗುವಿನ ಶಿಕ್ಷಣದ ಬಗ್ಗೆ ನಿರ್ಲಕ್ಷ್ಯ , ಸಾಮಾಜಿಕ ವ್ಯತ್ಯಾಸ ಈ ಮುಂತಾದವು ಹೆಣ್ಣಿನ ಮೇಲೆ ಹಿಂಸೆ ಹೆಚ್ಚುವಂತೆ ಮಾಡುವ ಅಂಶಗಳಾಗಿವೆ. ಏನೇ ಆಗಲಿ, ಪುರುಷ ಹಾಗೂ ಮಹಿಳೆಯರಿಬ್ಬರೂ ಕೆಲವು ಗಾದೆ ಮಾತುಗಳನ್ನು ಬಳಸಿ, ಹಿಂಸಾಪ್ರಕರಣಗಳನ್ನು ಸಮರ್ಥಿಸಿಕೊಂಡಿದ್ದು ಮಾತ್ರ ತುಂಬಾ ಗಮನಸೆಳೆಯುವಂತಿತ್ತು. ಅವುಗಳಲ್ಲಿ ಉತ್ತಮ ಹೆಂಗಸು, ಕೆಟ್ಟ ಹೆಂಗಸು ಯಾರು? ಅವರು ಮಾಡಬೇಕಾದ್ದು ಏನು? ಮಾಡಬಾರದ್ದು ಏನು? ಆಕೆಯ ಜೀವನದ ನಾಲ್ಕು ನಿರ್ದಿಷ್ಟ ಅವಸ್ಥೆಗಳು ಈ ಮುಂತಾದ ಅಂಶಗಳೆಲ್ಲ ಅದರಲ್ಲಿ ಆಡಕವಾಗಿದ್ದವು. ಗಂಡು ಮಗು ಮತ್ತು ಹೆಣ್ಣು ಮಗುವಿಗೆ ಕೊಡುವ ಆಹಾರದಲ್ಲಿಯೇ ವ್ಯತ್ಯಾಸ ಏಕೆ ಇರಬೇಕೆಂದು ಸಮರ್ಥಿಸುವ ಒಂದು ಗಾದೆಮಾತು ಅಲ್ಲಿ ಹೇಳಲ್ಪಟ್ಟಿತು ಎಂಬುದನ್ನು ಇಲ್ಲಿ ಕಾಣಿಸುವುದು ಅಗತ್ಯ. ರಾಗಿ ಮುದ್ದೆಯ ಕೊನೇ ಭಾಗವನ್ನು ತಿಂದರೆ ಪೂರ್ಣ ಗಂಡಸಾಗಲ್ಲ ಎಂಬ ನಂಬಿಕೆ ಮಾತೂ ಅದರಲ್ಲಿದೆ.

ಹೆಣ್ಣು ಮಕ್ಕಳು ಸಾಮಾಜಕೀಕರಣಗೊಳ್ಳುವ ಪ್ರಕ್ರಿಯೆಯ ಅಂಗವಾಗಿ ಅವರ ಮೇಲೆ ನಡೆಯುವ ನಿರಂತರ ಹಿಂಸೆಯನ್ನು, ಸಾಮಾಜಿಕ ವ್ಯವಸ್ಥೆಯು ನಿರ್ಧರಿಸಿದ ಜೀವನಮಾರ್ಗ ಎಂದು ವಿವರಿಸಲಾಯಿತು. ಇಂಥ ಸ್ಥಾಪಿತ ಸಾಮಾಜಿಕ ವ್ಯವಸ್ಥೆಗಿಂತ ಭಿನ್ನವಾದ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಯೋಚಿಸಲು, ಪುರುಷ-ಮಹಿಳಾರಿಬ್ಬರಿಗೂ ಕಷ್ಟವಾಯಿತು ಎಂಬುದನ್ನು ಇಲ್ಲಿ ಮನಗಾಣಬೇಕು.

ಉದಾಹರಣೆಗೆ, ಉತ್ತರ ಕರ್ನಾಟಕದಲ್ಲಿ ಬಾಲ್ಯ ವಿವಾಹವು ಹೆಚ್ಚು ಪ್ರಚಲಿತ ಇರುವ ಒಂದು ಪಾರಂಪರಿಕ ಆಚರಣೆ. ಇದರಲ್ಲಿ ಕೆಲವು ಪರಿಶಿಷ್ಟ ಜನಾಂಗದವರ ನಂಬಿಕೆಗಳೂ ಒಳಗೊಂಡಿವೆ. ಈ ಆಚರಣೆಯನ್ನು ವೈಚಾರಿಕವಾಗಿ ಸಮರ್ಥಿಸಿಕೊಳ್ಳಲು ಆರ್ಥಿಕ ಕಾರಣಗಳನ್ನೂ ನೀಡಲಾಗುತ್ತಿದೆ. ಹೀಗಾಗಿ, ಬಾಲ್ಯ ವಿವಾಹಕ್ಕೆ ಉಳಿದ ಸಾಮಾಜಿಕ ಆಚರಣೆಗಳೊಂದಿಗೆ ಒಪ್ಪಿಗೆ ಸಿಕ್ಕುಬಿಡುತ್ತದೆ.

## ವಿವಿಧ ಬಗೆಯ ಹಿಂಸೆಗಳಿಗೆ ಗುಂಪು ಕಂಡುಕೊಂಡ ಕಾರಣಗಳು

ಪಟ್ಟಿ 4 : ವಿವಿಧ ಬಗೆಯ ಹಿಂಸೆಗಳಿಗೆ ಗುಂಪು ಕಂಡುಕೊಂಡ ಕಾರಣಗಳು

| ಜಿಲ್ಲೆ | ಹೆಂಡತಿಯನ್ನು ಹೊಡೆಯುವುದು | | ಬಾಲ್ಯವಿವಾಹ | | ವರದಕ್ಷಿಣೆ ಪೀಡನೆ | | ಮದ್ಯಪಾನದಿಂದ ಆಗುವ ಅಪರಾಧಗಳು ನಿಷೇಧಗಳು | | ಶಿಕ್ಷಣ, ಉದ್ಯೋಗಗಳ ಮೇಲಿನ | | ಹೆಣ್ಣು ಮಗುವಿನ ಬಗ್ಗೆ ಇರುವ ಸಾಮಾಜಿಕ ಪಕ್ಷಪಾತ | | ವಿಧವೆ ಮತ್ತು ಪರಿತ್ಯಕ್ತ ಹೆಣ್ಣು ಮಕ್ಕಳ ಬಹಿಷ್ಕಾರ | |
|---|---|---|---|---|---|---|---|---|---|---|---|---|---|---|
| | ಪು | ಮ | ಪು | ಮ | ಪು | ಮ | ಪು | ಮ | ಪು | ಮ | ಪು | ಮ | ಪು | ಮ |
| ವಿಜಾಪುರ | 4 | 4 | 1 | 2 | 5 | 5 | 4 | 4 | 5 | 5 | 2 | 2 | 2 | 1,2 |
| ಚಿತ್ರದುರ್ಗ | 1 | 2 | 2 | 5 | 5 | 4 | 4 | 5 | 5 | 2 | 2 | 1 | 2 | |
| ಕೊಡಗು | 4 | 4 | - | - | - | - | 4 | 4 | 5 | 5 | 2 | 2 | - | - |
| ಕೋಲಾರ | 4 | 4 | 2 | 2 | 5 | 5 | 4 | 4 | 5 | 5 | 2 | 1,2 | 2 | 1,2 |
| ಕೊಪ್ಪಳ | - | 4 | 3 | 2 | 5 | 5 | 4 | 4 | 5 | 5 | 2 | 2 | 2 | 2 |
| ಉಡುಪಿ | - | 4 | - | - | 5 | 5 | 4 | 4 | 5 | 5 | 1 | 1 | 5 | 5 |

1. ಬಡತನ ಮತ್ತು ಇನ್ನಿತರ ಆರ್ಥಿಕ ಕಾರಣಗಳು.
2. ಸಾಮಾಜಿಕ ನಡಾವಳಿಕೆಗಳನ್ನು ಉಲ್ಲಂಘಿಸುವ ಭಯ.
3. ಸಾಂಸ್ಕೃತಿಕ ಮತ್ತು ಧಾರ್ಮಿಕ ನಂಬಿಕೆಗಳು.
4. ವೈವಾಹಿಕ/ ಕೌಟುಂಬಿಕ ಸಂಸ್ಥೆಗಳ ಒಳಗೆ ನಿರೀಕ್ಷಿತ ಸಾಮಾಜಿಕ ವರ್ತನೆ.
5. ಬಲವಾದ ಸಾಮಾಜಿಕ ಆಚರಣೆಗಳಿಗೆ ಬೆಂಬಲ ನೀಡುವುದು.

ಗಂಡು-ಹೆಣ್ಣಿನ ಸಂಬಂಧಗಳ ಬಗ್ಗೆ ಇರುವ ಆಳವಾದ, ಖಚಿತವಾದ ದೃಷ್ಟಿಕೋನ, ಖಾಸಗಿ ವಿಷಯಗಳನ್ನು ಸಾರ್ವಜನಿಕವಾಗಿ ಚರ್ಚಿಸುವುದರ ಬಗ್ಗೆ ಇರುವ ನಿಷೇಧ, ನಿರ್ದಿಷ್ಟವಾಗಿ ಇರುವ ಸಾಂಸ್ಕೃತಿಕ, ಪಾರಂಪರಿಕ ನಂಬಿಕೆ-ಸಂಕೇತಗಳು, ಕುಟುಂಬ ಮತ್ತು ವಿವಾಹಗಳಂಥ ಪ್ರಾಥಮಿಕ ಸಾಮಾಜಿಕ ಸಂಸ್ಥೆಗಳ ಒತ್ತಡಗಳು - ಇವೆಲ್ಲಗಳ ಸಮ್ಮಿಳನದಿಂದಾಗಿರುವ ಸಮಾಜವೊಂದರಲ್ಲಿ ಕಾಣಿಸುವ ಕೆಲವು ಹಿಂಸೆಯ ಪ್ರಕರಣಗಳ ಹಿಂದಿನ ನಿಜವಾದ ಕಾರಣಗಳನ್ನು ಕಂಡುಕೊಳ್ಳಲು ತುಂಬಾ ಮಿತಿಗಳು ಏರ್ಪಟ್ಟು ಬಿಡುತ್ತವೆ. ಪಿತೃಪ್ರಧಾನ ಯಜಮಾನ್ಯ ಪದ್ಧತಿಯನ್ನು ಪುರುಷ ಸ್ತ್ರೀಯರಿಬ್ಬರೂ ಪೂರ್ಣವಾಗಿ ಒಪ್ಪಿಕೊಂಡುಬಿಡುವುದು ಅವರು ತಪ್ಪಿತಸ್ಥರಾಗಲು, ಹಿಂಸೆಗೆ ಬಲಿಯಾಗಲು ಮುಖ್ಯ ಕಾರಣವಾಗುತ್ತದೆ. ಈಗಾಗಲೇ ತಿಳಿಸಿರುವಂತೆ ಹಿಂಸಾ ಪ್ರವೃತ್ತಿಯ ಚರ್ಚೆಯಲ್ಲಿ ಭಾಗಿಗಳಾಗಿದ್ದ ಹಲವರು ಅದನ್ನೇ ಜೀವನ ರೀತಿ, ಬದುಕು ಇರಬೇಕಾದ ರೀತಿ ಎಂದು ಭಾವಿಸಿದ್ದರಿಂದ, ಹಿಂಸೆಗೆ ಕಾರಣಗಳನ್ನು ಹುಡುಕುವ ಪ್ರಯತ್ನ ಮಾಡಲಿಲ್ಲ. ಆದ್ದರಿಂದ, ಚರ್ಚೆಯ ಸಂದರ್ಭದಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆಯುವ ಹಿಂಸೆಯ ಕುರಿತು ಪ್ರಶ್ನೆಗಳು ಬಂದಾಗ, ಹಿಂಸೆಯ ಲಕ್ಷಣಗಳು ಮತ್ತು ಕಾರಣಗಳು - ಇವುಗಳ ಮಧ್ಯೆ ವ್ಯತ್ಯಾಸ ಗುರುತಿಸುವುದು ಅವರಿಂದ ಸಾಧ್ಯವಾಗಲಿಲ್ಲ.

ಆದರೂ, ಸಮುದಾಯವು ಗುರುತಿಸಿದ 'ಕಾರಣಗಳನ್ನು 'ಎರಡು ಮುಖ್ಯ ಶೀರ್ಷಿಕೆಗಳಡಿ ವಿಭಾಗಿಸಬಹುದು.

- ಸಾಮಾಜಿಕ ಪದ್ಧತಿಗಳು ಮತ್ತು ಸಾಂಸ್ಕೃತಿ ಆಚರಣೆಗಳು
- ವೈವಾಹಿಕ / ಕೌಟುಂಬಿಕ ಸಂಸ್ಥೆಗಳ ಒಳಗೆ ನಿರೀಕ್ಷಿತ ಸಾಮಾಜಿಕ ವರ್ತನೆ.

ನಿರೀಕ್ಷಿತ ವರ್ತನೆ ಮತ್ತು ಕೌಟುಂಬಿಕ ಪದ್ಧತಿಗಳು ಸಮಾಜದ ಸಾಂಸ್ಕೃತಿಕ ವಿಧಿನಿಯಮವನ್ನು ರೂಪಿಸುತ್ತವೆಯಾದ್ದರಿಂದ, ಚರ್ಚೆಯಲ್ಲಿ ಗುಂಪು ಗುರುತಿಸಿದ್ದ ಏಳು ಬಗೆಯ ಹಿಂಸೆಗಳಿಗೆ ಕಾರಣಗಳು ಪರಸ್ಪರ ಅಷ್ಟಾಗಿ ಭಿನ್ನವಾಗಿ ತೋರಲಿಲ್ಲ. ಆದಾಗ್ಯೂ ಕುಟುಂಬದ ಒಳಗಿನಿಂದ ಹೊರಹೊಮ್ಮುವ ಹಿಂಸೆ ಹಾಗೂ ಸಾಂಸ್ಕೃತಿಕ ಪದ್ಧತಿಯಿಂದಾಗಿ ಹುಟ್ಟುವ ಹಿಂಸೆ ಎಂದು ಭಾಗಿದಾರರು ಕಾರಣಗಳನ್ನು ಗುರುತಿಸಿದರು.

**ಬಾಲ್ಯ ವಿವಾಹಕ್ಕೆ ಕಾರಣಗಳು :** ವಿವಿಧ ಗುಂಪುಗಳಲ್ಲಿ ಬೇರೆ ಬೇರೆ ಕಾರಣಗಳನ್ನು ಗುರುತಿಸಲಾಯಿತು. ವಿಜಾಪುರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬಾಲ್ಯವಿವಾಹಕ್ಕೆ ಕಾರಣ ಸಾಮಾಜಿಕ ಪದ್ಧತಿ ಎಂದು ಗುರುತಿಸಲಾಯಿತು. ಅಂದರೆ, ಪರಂಪರೆಯಿಂದ ನಂಬಿ-ನಡೆದುಕೊಂಡ ಬಂದಿರುವ ಒಂದು ನಂಬಿಕೆ, ಪದ್ಧತಿ - ಹೆಣ್ಣು ಮಗುವಿನ ಕನ್ಯತ್ವದ ಪರಿಶುದ್ಧತೆ, ಲೈಂಗಿಕತೆಯ ನಿಯಂತ್ರಣ ಅಗತ್ಯ. ಇದರಿಂದ, ಆ ಮನೆತನದ ಸಾಮಾಜಿಕ

ಗೌರವ ಕೂಡ ಹೆಚ್ಚಾಗುತ್ತದೆ ಎಂಬ ಪರಿಸ್ಥಿತಿ. ಇನ್ನೊಂದು ಮುಖ್ಯಕಾರಣ ಎಂದರೆ, ಬಾಲ್ಯ ವಿವಾಹವು "ಪುಣ್ಯದ ಕೆಲಸ- ಕಲ್ಯಾಣ ಕಾರ್ಯ" ಎಂದು ಪರಿಗಣಿತವಾಗಿರುವುದು. ಇದಕ್ಕೂ ಹೆಚ್ಚಿನ ಮತ್ತೊಂದು ಕಾರಣ ಎಂದರೆ ಇದಕ್ಕಿರುವ ಆರ್ಥಿಕ ಮುಖ. ಇಲ್ಲಿ ವರದಕ್ಷಿಣೆಯ ಹಾವಳಿ ಇರದೇ, ಅತೀ ಕಡಿಮೆ ಖರ್ಚಿನಲ್ಲಿ ಇದನ್ನು ನಿಭಾಯಿಸಬಹುದು. ಕೆಲವು ಸಲ, ಜಮೀನುದಾರರು ತಮ್ಮ ಸಾಮಾಜಿಕ ಸೇವೆಯ ಸಂಕೇತವಾಗಿ ಸಾಮೂಹಿಕ ಬಾಲ್ಯವಿವಾಹಗಳನ್ನು ಏರ್ಪಡಿಸುವುದೂ ಉಂಟು.

ಕೊಡಗು ಮತ್ತು ಉಡುಪಿ ಜಿಲ್ಲೆಗಳ ಪ್ರತಿನಿಧಿಗಳು ಈ ವಿಷಯವನ್ನು ಚರ್ಚಿಸಲಿಲ್ಲ. ಬದಲಾಗಿ ಉಡುಪಿ ಜಿಲ್ಲೆಯವರಿಗೆ ತಡವಾಗಿ ಆಗುತ್ತಿರುವ ಮದುವೆಯು ಚರ್ಚೆಯ ಪ್ರಮುಖ ವಿಷಯವಾಯಿತು.

**ವರದಕ್ಷಿಣೆಗೆ ಕಾರಣಗಳು :**ಕೊಡಗು ಜಿಲ್ಲೆಯ ಬುಡಕಟ್ಟು ಜನಾಂಗವೊಂದನ್ನು ಹೊರತುಪಡಿಸಿ, ಉಳಿದೆಲ್ಲ ಜಿಲ್ಲೆಯವರು, ಸಧ್ಯ ಅಸ್ತಿತ್ವದಲ್ಲಿರುವ ಸಾಮಾಜಿಕ ಪದ್ಧತಿಯನ್ನು ಪಾಲಿಸುವುದಕ್ಕೋಸ್ಕರ ತಾವು ವರದಕ್ಷಿಣೆ ಪದ್ಧತಿ ಮುಂದುವರೆಸಿಕೊಂಡು ಹೋಗುತ್ತಿರುವುದಾಗಿ ಅವಿರೋಧವಾಗಿ ಹೇಳಿದರು. ವರದಕ್ಷಿಣೆ ಪದ್ಧತಿ ಜಾರಿಯಲ್ಲಿರುವ ಗುಂಪುಗಳು, ಇದು ಹೆಣ್ಣಿನ ಮೇಲೆ ಹಿಂಸೆ ನಡೆಯುವುದಕ್ಕೆ ಸಂಬಂಧಿಸಿರುವುದನ್ನು ಒಪ್ಪಿಕೊಂಡರು. ಕೆಳಜಾತಿಗಳಲ್ಲಿಯೂ ಅಸ್ತಿತ್ವದಲ್ಲಿ ಬಂದಿರುವ ಈ ವರದಕ್ಷಿಣೆ ಪಿಡುಗಿಗೆ ಕಾರಣ ಸಾಮಾಜಿಕ ಒತ್ತಡ ಹಾಗೂ ಸಂಸ್ಕೃತೀಕರಣದ ಹುಚ್ಚು ಎಂದು ಗುರುತಿಸಲಾಯಿತು. ಈ ಸಂಸ್ಕೃತೀಕರಣದ ಪರಿಣಾಮವಾಗಿ ಕೆಳಜಾತಿಗಳಲ್ಲಿ ಹೆಣ್ಣಿನ ಮೇಲೆ ಹಿಂಸೆ ಹೊಸ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಹೆಣ್ಣಿನ ಸ್ವತಂತ್ರ ಚಲನವಲನಗಳ ಮೇಲೆ ನಿಷೇಧ - ಅದರಲ್ಲೂ ಸಾರ್ವಜನಿಕ ಕ್ಷೇತ್ರಗಳಲ್ಲಿ - ಕೆಳಜಾತಿಯಲ್ಲಿನ ಅನುಕೂಲಸ್ಥ ಮನೆತನಗಳಲ್ಲೂ ರೂಢಿಗೆ ಬಂದಿದೆ.

ಮೇಲಿನ ಚರ್ಚೆಯ ಆಧಾರದ ಮೇಲೆ ಇವುಗಳನ್ನು ಪ್ರಮುಖ ಅಂಶಗಳೆಂದು ಪರಿಗಣಿಸಬಹುದು.

**ಪ್ರಮುಖ ಅಂಶಗಳು**

- ಈ ಚರ್ಚೆಯಲ್ಲಿ, ಪುರುಷರು ಮತ್ತು ಮಹಿಳೆಯರ ನಡುವೆ, ಅವರ ಪ್ರತಿರೋಧದ ಮಟ್ಟಗಳಲ್ಲಿ ಸಾಕಷ್ಟು ವ್ಯತ್ಯಾಸವಿತ್ತು. ಪುರುಷರು ಈ ಚರ್ಚೆಯಲ್ಲಿ ಅಷ್ಟೊಂದು ಮುಕ್ತ ಮನಸ್ಸಿನವರಾಗಿರಲಿಲ್ಲ.

- ಸರಕಾರೇತರ ಸೇವಾಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವ ಕ್ಷೇತ್ರಗಳಲ್ಲಿಂದ ಹೆಚ್ಚಿನ ಸಂಖ್ಯೆಯ ಪ್ರತಿನಿಧಿಗಳೂ ಬಂದಿದ್ದರು ಮತ್ತು ಅವರು ಹೆಚ್ಚು ಮುಕ್ತ ಮನಸ್ಸಿನವರಾಗಿದ್ದರು. ಅದೇ ಈ ಸಂಸ್ಥೆಗಳು ಕಾರ್ಯ ನಿರ್ವಹಿಸದೇ ಇರುವ ಸ್ಥಳಗಳಿಂದ ಪ್ರತಿನಿಧಿಗಳ ಸಂಖ್ಯೆಯೂ ಕಡಿಮೆ ಇದ್ದು, ಅವರು ಅಷ್ಟಾಗಿ ಮುಕ್ತರಾಗಿಲ್ಲದಿದ್ದುದೂ ಕಂಡು ಬಂದಿತು.

- ಕುಟುಂಬದ ಒಳಗೆ ಹಿಂಸೆ ಎಲ್ಲ ಜಿಲ್ಲೆಗಳಲ್ಲಿ, ಎಲ್ಲ ಸಾಮಾಜಿಕ ಮಟ್ಟದಲ್ಲಿ ಹೆಚ್ಚು ನಡೆಯುತ್ತದೆ ಎಂದು ಎಲ್ಲ ಚರ್ಚೆಗಳಲ್ಲಿ ವ್ಯಕ್ತವಾಯಿತು.

- ಮಹಿಳೆಯರು ಹಿಂಸೆಯನ್ನು ಸಹಿಸುವುದು, ಕುಟುಂಬದ ಕ್ಷೇಮ ಅದರಲ್ಲೂ ಆರ್ಥಿಕ ಕ್ಷೇಮದ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀಳುತ್ತದೆ ಎಂಬುದರೊಂದಿಗೆ ನೇರ ಸಂಬಂಧ ಹೊಂದಿದೆ.


- ತಮ್ಮ ಮೇಲೆ ನಡೆಯುವ ಅತೀ ಕ್ರೂರ ಹಿಂಸೆಯನ್ನು ಸಹಿಸಲು ಆರಂಭಿಸಿದಾಗ, ಪುರುಷರು ಅದನ್ನು ಸಮರ್ಥಿಸಿಕೊಳ್ಳುವುದು, ಅಥವಾ ಅದು ಕ್ಷುಲ್ಲಕವಾದುದು ಒಂದು ತಳ್ಳಿ ಹಾಕುವುದು ಸಾಮಾನ್ಯವಾಗುತ್ತದೆ.

- ಚರ್ಚೆಯಲ್ಲಿ ಭಾಗವಹಿಸಿದ್ದ ಸ್ತ್ರೀ ಪುರುಷರು ಹೇಳಿದಂತೇ, ಎಲ್ಲ ಬಗೆಯ ಹಿಂಸೆಗೆ ಕಾರಣಗಳು ಪಾರಂಪರಿಕ ಪದ್ಧತಿಗಳ ಮತ್ತು ಕೌಟುಂಬಿಕ ಮೌಲ್ಯಗಳ ಅನುಸರಣೆಯಲ್ಲಿ ಅಡಕವಾಗಿವೆ.

- ವರದಕ್ಷಿಣೆ ಮತ್ತು ಬಾಲ್ಯ ವಿವಾಹಗಳಂತಹ ಕೆಲ ಹಿಂಸಾ ರೀತಿಗಳ ಬಗ್ಗೆ ಬೇರೆಬೇರೆ ಸಮುದಾಯಗಳಲ್ಲಿ, ಬೇರೆ ಬೇರೆ ಜಿಲ್ಲೆಗಳಲ್ಲಿ ಇರುವ ಸಾಂಸ್ಕೃತಿಕ ಪ್ರತಿಕ್ರಿಯೆಗಳು, ಆಯಾ ವಿಭಾಗಗಳಿಗೇ ಅನ್ವಯವಾಗುವ ರೀತಿಯಲ್ಲಿ ವಿಶಿಷ್ಟವಾದ ಕಾರ್ಯತಂತ್ರದೊಂದಿಗೆ ಕೆಲಸ ಮಾಡಬೇಕೆಂಬುದನ್ನು ಸೂಚಿಸುತ್ತವೆ.

- ಪ್ರತಿಯೊಂದು ಸಮಾಜ / ಸಮುದಾಯ ಹಿಂಸೆಯನ್ನು ಮುಂದುವರೆಸಿಕೊಂಡು ಹೋಗುವುದು ಸಾಂಪ್ರದಾಯವಿಹಿತವೆಂದು, ಅಸ್ಪಷ್ಟ ಕಾರಣಗಳು- ತಿರಸ್ಕಾರ ಇತ್ಯಾದಿಗಳನ್ನು ಒಳಗೊಂಡಂಥ ಒಂದು ವ್ಯವಸ್ಥೆಯನ್ನು ಹೊಂದಿರುತ್ತದೆ. ಹಿಂಸೆಯೊಂದು ಜನರನ್ನು ಕಷ್ಟಕ್ಕೆ ಈಡು ಮಾಡಿದ ಸಂದರ್ಭದಲ್ಲೂ, ಪ್ರಬಲವಾದ ಸಾಮಾಜಿಕ ಸಂಸ್ಥೆಗಳು, ಕೌಟುಂಬಿಕ ನಂಬಿಕೆಗಳು, ಗಾದೆ ಮಾತಿನ ಮೂಲಕ ಹರಿವ ಸಾಂಸ್ಕೃತಿಕ ಪ್ರತೀಕಗಳು ಮತ್ತು ಇನ್ನಿತರ ನಂಬಿಕೆ, ಆಚಾರ ಇತ್ಯಾದಿಗಳೆಲ್ಲ ಸ್ತ್ರೀ-ಪುರುಷರಿಬ್ಬರ ಅದೇ ಬಗೆಯ ನಡಾವಳಿಕೆಗಳನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡುತ್ತವೆ.

ಇದುವರೆಗೆ ತಿಳಿಸಿದುದೆಲ್ಲ ಸಮುದಾಯಗಳೊಂದಿನ ಗುಂಪು ಚರ್ಚೆಯಲ್ಲಿ ನಾವು ಕಂಡುಕೊಂಡ ಅನುಭವಗಳು, ವೀಕ್ಷಣೆಗಳು ಎಂದು ಹೇಳಿಕೊಳ್ಳ ಬಯಸುತ್ತೇವೆ ವಿನಃ ಇವು ಕೇವಲ ನಮ್ಮವು ಮಾತ್ರವೇ ಆದ ವೀಕ್ಷಣೆಗಳು ಎಂದು ಹಕ್ಕು ಸಾಧಿಸಲು ಇಷ್ಟಪಡುವುದಿಲ್ಲ. ನಾಲ್ಕು ವರುಷಗಳ ನಂತರ ನಾವು ಸಮುದಾಯಗಳನ್ನು ಸಂಧಿಸಿದ್ದು, ಈ ದೀರ್ಘ ಅಂತರ, ಹಿಂಸೆಯಂಥ ಸೂಕ್ಷ್ಮ ಹಾಗೂ ಖಾಸಗಿ ವಿಷಯದ ಬಗ್ಗೆ ಸಮುದಾಯಗಳು ಮುಕ್ತವಾಗಿ ಚರ್ಚಿಸಲು ಸ್ವಲ್ಪ ಹಿಂದೆ ಮುಂದೆ ನೋಡುವಂತಾದುದಕ್ಕೆ ಎಂದು ಭಾವಿಸುತ್ತೇವೆ.




ಅಂಕಣ ಸಭೆ ಕಲಾಪಗಳನ್ನು ನಡೆಸಿಕೊಡುತ್ತಿರುವ ಮುಖ್ಯನ್ಯಾಯಾಧೀಶ ಸದಾಶಿವ

ಅಲ್ಲದೇ, ಈ ಕೇಂದ್ರಿತ ಗುಂಪು ಚರ್ಚೆಗಳಲ್ಲಿ ಪ್ರತಿ ಸಮುದಾಯದಿಂದ ಕೆಲವರು ಪ್ರತಿನಿಧಿಗಳು ಮಾತ್ರ ಭಾಗವಹಿಸಿದ್ದರಾದ್ದರಿಂದ, ಅವರ ಪ್ರತಿಕ್ರಿಯೆಗಳು ಇಡೀ ಸಮುದಾಯ ಪ್ರತಿಕ್ರಿಯೆಗಳು ಎಂದು ಹೇಳಬಯಸುವುದಿಲ್ಲ. ಆದಾಗ್ಯೂ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಹಿಂಸೆಯ ವಿವಿಧ ಬಗೆಗಳು, ಜಿಲ್ಲೆಗಳಲ್ಲಿ ಕಾಣುವ ಸಾಂಸ್ಕೃತಿಕ ಭಿನ್ನತೆಗಳು, ಅದನ್ನು ಗ್ರಹಿಸುವಲ್ಲಿ ಇರುವ ಸಂಕೀರ್ಣತೆಗಳನ್ನು ಅರಿಯಲು ತುಂಬ ಉಪಯುಕ್ತ ಒಳನೋಟಗಳನ್ನು ಈ ವೀಕ್ಷಣೆಗಳು ಒದಗಿಸುತ್ತವೆ ಎಂದೇ ಹೇಳಬೇಕು.

## ಅಂಕಣ ಸಭೆ

ವಿಷಯ ಮಂಡನೆಯ ಬಳಿಕ ಅಂಕಣ ಸಭೆ ನಡೆಯಿತು. ಪ್ರಸಿದ್ಧ ನ್ಯಾಯಶಾಸ್ತ್ರಜ್ಞ, ಮಾನವ ಹಕ್ಕುಗಳ ಪ್ರಮುಖರಾದ ನ್ಯಾಯ ಮೂರ್ತಿ ಶ್ರೀ ಸದಾಶಿವ ಚರ್ಚೆಯ ಅಧ್ಯಕ್ಷತೆ ವಹಿಸಿದ್ದರು. ಅಂಕಣ ಸಭೆಯಲ್ಲಿ ವಿವಿಧ ಸಂಘಟನೆಗಳನ್ನು ಪ್ರತಿನಿಧಿಸುತ್ತಿದ್ದ ಪ್ರಮುಖ ವ್ಯಕ್ತಿಗಳು ಭಾಗವಹಿಸಿದ್ದರು. ಶ್ರೀ ವಿ.ವಿ. ಭಾಸ್ಕರ, - ಸಿ.ಓ.ಡಿ ವಿಭಾಗದ ಪೋಲಿಸ್ ಮಹಾ ನಿರ್ದೇಶಕರು; ಶ್ರೀ ಎಸ್.ಕೆ. ಚಕ್ರವರ್ತಿ - ಐ.ಎಫ್.ಎಸ್. ಅರಣ್ಯಗಳ ಯೋಜನೆಯ ಪ್ರಧಾನ ರಕ್ಷಣಾಧಿಕಾರಿ; ಶ್ರೀಮತಿ ಡೋನಾ ಫರ್ನಾಂಡೀಸ್ - ವಿಮೋಚನಾ; ಶ್ರೀಮತಿ ಗೀತಾ ಅರವ ಮುದಂ - ಪತ್ರಕರ್ತೆ; ಶ್ರೀ ಸಿ. ನರಸಿಂಹ ಸ್ವಾಮಿ - ಮಾಜಿ ಲೋಕಸಭಾ ಸದಸ್ಯ; ಶ್ರೀ ಪಾಲಾಕ್ಷಪ್ಪ ಪೂಜಾರ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧ ಇಲಾಖೆ ಮತ್ತು ಶ್ರೀ ಸತ್ಯ ನಾರಾಯಣರಾವ್ - ನಿರ್ದೇಶಕರು, ಕರ್ನಾಟಕ ಪೋಲಿಸ್ ಅಕಾಡೆಮಿ, ಮೈಸೂರು - ಈ ಮಹನೀಯರೆಲ್ಲ ಅಂಕಣದಲ್ಲಿದ್ದರು.

ಈ ಅಂಕಣ ಸಭೆಯಲ್ಲಿ ಚರ್ಚಿತವಾದ ಪ್ರಮುಖ ವಿಷಯಗಳು

- ಕೌಟುಂಬಿಕ ದೂಷಣೆ ಮತ್ತು ಮದ್ಯಪಾನ.

- ಸರಕಾರಿ ಅಧಿಕಾರಿಗಳಿಂದ ತೊಂದರೆ.
- ಪೋಲಿಸರು ಮತ್ತು ಮಹಿಳೆಯರ ಮೇಲಿನ ಹಿಂಸೆ.

**ಕೌಟುಂಬಿಕ ದೂಷಣೆ ಮತ್ತು ಮದ್ಯಪಾನ**

ಮಹಿಳಾ ಭಾಗಿದಾರರು, ತಾವು ಎದುರಿಸುತ್ತಿರುವ ಹೆಂಡತಿಯನ್ನು ಹೊಡೆಯುವುದು, ಮದ್ಯಪಾನ ಮತ್ತು ಗಂಡಸರ ಹೊಣೆಗೇಡಿತನ ಅದರಲ್ಲೂ ಆರ್ಥಿಕ ಹೊಣೆಗೇಡಿತನಗಳಂಥ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು. ಮದ್ಯಪಾನವನ್ನು ನಿಲ್ಲಿಸುವುದರ ಬಗ್ಗೆ ಅವರು ನಿರಾಶಾವಾದಿಗಳಾಗಿದ್ದರು. ಈ ವಿಷಯವನ್ನು ಕೈಗೆತ್ತಿಗೊಳ್ಳುತ್ತಾ, ಚಿತ್ರದುರ್ಗ ಜಿಲ್ಲೆಯಿಂದ ಬಂದಿದ್ದ ಗೌರಮ್ಮ "ಕೇವಲ ಒಂದೆರೆಡು ಹಳ್ಳಿಗಳಲ್ಲಿ ಸಾರಾಯಿ ನಿಷೇಧ ಹೇರುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಇಡೀ ರಾಜ್ಯದಲ್ಲಿ ಅಕ್ರಮ ಸಾರಾಯಿ ಮಾರಾಟ ನಿಲ್ಲಿಸಬೇಕು. ಗಂಡಸರನ್ನು ಸೋಮಾರಿಗಳನ್ನಾಗಿಯೂ, ತಮ್ಮ ಹೆಂಡಂದಿರ ಆದಾಯದ ಮೇಲೆ ಅವಲಂಬಿಗಳಾನ್ನಾಗಿಯೂ ಮಾಡುವ, ಅಷ್ಟೇ ಅಲ್ಲ, ಅವರ ಮಾತು ಕೇಳದಿದ್ದರೆ ಹಿಂಸೆಗೂ ಎಡೆಮಾಡಿಕೊಡುವ ಗಂಡಸರು ಜೂಜು ಆಡುವ ಪ್ರವೃತ್ತಿಯನ್ನು ಹೇಗೆ ತಡೆಯುವುದು" ಎಂದು ಪ್ರಶ್ನಿಸಿದರು.

ಈ ಪ್ರಶ್ನೆಗೆ ಅಂಕಣದಲ್ಲಿದ್ದವರು, ಮದ್ಯಪಾನ ಹೆಣ್ಣು ಮಕ್ಕಳು ಎದುರಿಸುತ್ತಿರುವ ಒಂದು ಗಂಭೀರ ಸಮಸ್ಯೆ ಎಂದು ಒಪ್ಪಿಕೊಂಡರು. ಅದೇ ವೇಳೆಗೆ ಇದರ ಪರಿಣಾಮ ಗ್ರಾಮೀಣ ಮಹಿಳೆಯರು ಮತ್ತು ನಗರ ಮಹಿಳೆಯರ ಮೇಲೆ ಬೇರೆ ಬೇರೆಯೇ ಆಗಿರುತ್ತದೆ ಎಂಬ ಅಂಶವನ್ನೂ ಗುರುತಿಸಿದರು. ನಗರದ ಮಹಿಳೆಯರಿಗೆ ಮಹಿಳಾ ಸಂಘಟನೆಗಳ ಅನುಕೂಲ ಸುಲಭವಾಗಿ ಲಭ್ಯವಿದ್ದರೆ, ಗ್ರಾಮೀಣ ಮಹಿಳೆಯರಿಗೆ ಅದು ಅಷ್ಟು ಸುಲಭದಲ್ಲಿ ಲಭ್ಯವಿಲ್ಲ. ಆದ್ದರಿಂದ, ನಗರ ಕೇಂದ್ರಿತ ಸರಕಾರೇತರ ಸೇವಾ ಸಂಸ್ಥೆಗಳಿಗಿಂತ, ತಮ್ಮೊಳಗಿನಿಂದಲೇ ಹುಟ್ಟಿಕೊಳ್ಳುವಂತ ಮೂಲಭೂತ ಬೆಂಬಲ ವ್ಯವಸ್ಥೆ ಇರಬೇಕಾದ್ದರ ಅಗತ್ಯತೆಯ ಬಗ್ಗೆ ಒತ್ತುಕೊಟ್ಟರು. ಮದ್ಯಪಾನ ಸಮಸ್ಯೆಯ ಬಗ್ಗೆ ಪ್ರತಿಕ್ರಿಯಿಸುತ್ತಾ ಶ್ರೀಮತಿ ಗೀತಾ ಅರವ ಮುದಂ, "ಗಂಡಸರ ವ್ಯಸನಗಳಿಗಾಗಿ ಹೆಣ್ಣುಮಕ್ಕಳ ದುಡಿಮೆಯ ಫಲ ಖರ್ಚಾಗುತ್ತೆ ಎಂಬುದು ನಿಜ. ಇದಕ್ಕೆ ಮುಖ್ಯ ಕಾರಣ ಎಂದರೆ ಮಹಿಳೆಯರಲ್ಲಿರುವ ಜಾಗೃತಿ ಮತ್ತು ಶೈಕ್ಷಣಿಕಯ ಕೊರತೆ. ಆದ್ದರಿಂದ, ಮಹಿಳೆಯರು ಸ್ಥಳೀಯವಾಗಿಯೇ ಸಂಘಟಿತರಾಗಿ, ಮಹಿಳೆಯರ ಮೇಲೆ ನಡೆಯುವ ಎಲ್ಲಾ ಬಗೆಯ ಹಿಂಸೆಗಳ ವಿರುದ್ಧ ಹೋರಾಡುವುದು ಅವಶ್ಯ. ಸರಕಾರದ ಮೇಲೆ ಅವಲಂಬಿಸುವುದು, ಅದರಲ್ಲೂ ಮದ್ಯಪಾನ ನಿಷೇಧಕ್ಕೆ ಸಂಬಂಧಿಸಿದಂತೆ - ಏಕೆಂದರೆ ಇದು ರಾಜಕೀಯ ಅಂಶಗಳನ್ನು ಒಳಗೊಂಡಿರುವುದರಿಂದ - ತಾವಾಗೇ ಸಂಘಟಿತರಾಗಿ ಹೋರಾಡುವುದು ಅತೀ ಮುಖ್ಯ." ಎಂದು ಹೇಳಿದರು.

ಸರಕಾರ ಅಥವಾ ಗ್ರಾಮ ಪಂಚಾಯತಿಗಳ ಪಾತ್ರದ ಗಮನ ಸೆಳೆಯುತ್ತ ಶ್ರೀ ನಾರಾಯಣ ಸ್ವಾಮಿ "ಮದ್ಯಪಾನ ನಿಷೇಧ ಕುರಿತಂತೆ ತೆಗೆದುಕೊಳ್ಳುವ ನಿರ್ಧಾರ ಸರಕಾರದ ಕೈಯಲ್ಲಿದ್ದರೆ, ಸಾರಾಯಿ ಅಂಗಡಿಯನ್ನು ತೆಗೆಯಲು ನೀಡಬೇಕಾದ ಪರವಾನಿಗೆ ಕೊಡುವ ಅಧಿಕಾರ ಗ್ರಾಮ ಪಂಚಾಯತಿಗಳ ಕೈಯಲ್ಲಿರುತ್ತದೆ. ಲೈಸನ್ಸ್ ಪಡೆಯಲು ಸ್ಥಳೀಯ ಗ್ರಾಮ ಪಂಚಾಯತಿ ನಿರಾಕ್ಷೇಪಣ ಪತ್ರ ನೀಡಬೇಕಾಗುತ್ತದೆ. ಈ ಮಾಹಿತಿಯು ಅದು ಹೇಗೋ

ಸಮಾಜಕ್ಕೂ, ಗ್ರಾಮ ಪಂಚಾಯತಿಯ ಸದಸ್ಯರಿಗೂ ತಿಳಿದಿಲ್ಲ. ಆದ್ದರಿಂದ, ಜನರು ಸ್ಥಳೀಯವಾಗಿ ಸಂಘಟಿತರಾಗಿ, ಲೈಸನ್ಸ್ ನೀಡದಿರುವಂತೆ ಗ್ರಾಮ ಪಂಚಾಯತಿಯ ಮೇಲೆ ಒತ್ತಡ ತರಬೇಕಾದ್ದು ಅವಶ್ಯ. ಇದು ದೊಡ್ಡ ಪ್ರಮಾಣದಲ್ಲಿ ನಡೆದರೆ, ಅದೇ ಒಂದು ಸಾಮಾಜಿಕ ಚಳುವಳಿ ಆಗುತ್ತದೆ. ಇದರಲ್ಲಿ ಸರಕಾರೇತರ ಸಂಸ್ಥೆಗಳು ಕ್ರಿಯಾಶೀಲ ಪಾತ್ರ ನಿರ್ವಹಿಸಲು ಸಾಧ್ಯವಾಗುತ್ತದೆ." ಎಂದು ತಿಳಿಸಿದರು.

**ಸರಕಾರಿ ಅಧಿಕಾರಿಗಳಿಂದ ಉಂಟಾಗುವ ತೊಂದರೆ**

ಅಂಕಣ ಸಭೆಯಲ್ಲಿ ಚರ್ಚಿತ ಇನ್ನೊಂದು ಪ್ರಮುಖ ವಿಷಯ ಸರಕಾರಿ ಅಧಿಕಾರಿಗಳಿಂದ ಉಂಟಾಗುವ ಪೀಡನೆ. ಇದು, ಬುಡಕಟ್ಟು ಜನಾಂಗದವರು ಅಧಿಕ ಸಂಖ್ಯೆಯಲ್ಲಿರುವ ಕೊಡಗು ಜಿಲ್ಲೆಗೆ ಹೆಚ್ಚು ಅನ್ವಯವಾದ ವಿಷಯವಾಗಿತ್ತು. ಕೊಡಗು ಜಿಲ್ಲೆಯಿಂದ ಬಂದಿದ್ದ ಪ್ರತಿನಿಧಿಗಳು, ಬುಡಕಟ್ಟು ಜನಾಂಗದವರ ಬಗ್ಗೆ ಅರಣ್ಯ ಇಲಾಖೆ ತಾಳಿರುವ ನಿರ್ಲಕ್ಷ್ಯ ಧೋರಣೆ ಪ್ರಸ್ತಾಪ ಮಾಡಿದರು. ತಮಗೆ ನೀಡಿರುವ ಸೌಲಭ್ಯಗಳ ಕೊರತೆ ಮತ್ತು ತಮಗೆ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು. ಕೊಡಗು ಜಿಲ್ಲೆಯ ಶ್ರೀ ಜೆ.ಪಿ. ರಾಜು, "ನಾಗರ ಹೊಳೆಯಲ್ಲಿ, ಬುಡಕಟ್ಟು ಜನಾಂಗದವರನ್ನು ಆ ಪ್ರದೇಶದಿಂದ ಎತ್ತಂಗಡಿ ಮಾಡಿಸಲು ಅರಣ್ಯ ಇಲಾಖೆಯವರು ವಿಶ್ವ ಬ್ಯಾಂಕಿನಿಂದ ಹಣ ಪಡೆದಿದ್ದಾರೆ. ಇತ್ತೀಚೆಗೆ ಇಲಾಖೆಯವರು, ರಾತ್ರೋರಾತ್ರಿ 50 ಕುಟುಂಬಗಳನ್ನು ಎತ್ತಂಗಡಿ ಮಾಡಿಸಿದ್ದಾರೆ. ಆ ತರಾತುರಿಯಲ್ಲಿ ಎಂಟು ಜನ ಜೀವ ಕಳೆದುಕೊಂಡಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಬುಡಕಟ್ಟು ಜನಾಂಗದವರನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಸ್ಥಳಾಂತರಿಸಲು ಬಲಪ್ರಯೋಗ ಮಾಡುತ್ತಾರೆ, ಪೀಡಿಸುತ್ತಾರೆ. ಇದೆಲ್ಲವೂ ಅರಣ್ಯದೊಳಗೇ ನಡೆಯುವಂತೆ ನೋಡಿಕೊಳ್ಳುತ್ತಾರೆ. ಯಾವುದೇ ಮುನ್ಸೂಚನೆ, ಸಾಕಷ್ಟು ಪರ್ಯಾಯಗಳನ್ನು ನೀಡದೇ ರಾತ್ರೋರಾತ್ರಿ ಬುಡಕಟ್ಟು ಜನಾಂಗದವರು ಸ್ಥಳಾಂತರಗೊಳ್ಳುವಂತೆ ಮಾಡಿದ್ದಾರೆ" ಎಂದು ವಿವರಿಸಿದರು. ಸರಕಾರಿ ಅಧಿಕಾರಿಗಳಿಂದ, ಈ ಪ್ರಸಂಗಗಳಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆದ ದೌರ್ಜನ್ಯದ ಬಗ್ಗೆ ಮಾತನಾಡುತ್ತಾ, "ಹೆಣ್ಣು ಮಕ್ಕಳು ಕಟ್ಟಿಗೆ / ಸೌದೆ ಆಯ್ದುಕೊಂಡು ಬರಲು ಕಾಡೊಳಗೆ ಹೋದಾಗ ಅಧಿಕಾರಿಗಳು ಅವರನ್ನು ಪೀಡಿಸುತ್ತಾರೆ. ಅರಣ್ಯ ಇಲಾಖೆಯ ನಿರ್ಲಕ್ಷ್ಯದಿಂದಾಗಿಯೇ, ಒಬ್ಬ ಮಹಿಳೆಯ ಮಗುವೊಂದನ್ನು ನಾಯಿಯೊಂದು ತಿಂದು ಹಾಕಿದ ಘಟನೆಯೂ ನಡೆದಿದೆ. ಹೆಂಗಸರ ಮೇಲೆ ಎಲ್ಲಾ ಕಡೆ ದೌರ್ಜನ್ಯ ನಡೆಯುತ್ತಿದೆ ಎಂಬುದು ನಿಜ. ಆದರೆ, ಬುಡಕಟ್ಟು ಜನಾಂಗದ ಹೆಣ್ಣುಮಕ್ಕಳ ಮೇಲೆ ಇದು ಅತಿ ಹೆಚ್ಚು ನಡೆಯುತ್ತಿದೆ. ನಾವೂ ಹಾಗೆಯೇ ನಿರರ್ಥಕವಾಗಿ ಹೋರಾಡುತ್ತಿದ್ದೇವೆ. ಪೋಲಿಸರು ಈ ಕಡೆ ಹೆಚ್ಚು ಗಮನ ನೀಡಬೇಕು. ಈ ಹೆಣ್ಣು ಮಕ್ಕಳಿಗೆ ನ್ಯಾಯ ಒದಗಿಸುವ ಭರವಸೆ ನೀಡಬೇಕು" ಎಂದು ಕೇಳಿದರು.

ಬುಡಕಟ್ಟು ಸ್ತ್ರೀಯರ ಮೇಲೆ ಅರಣ್ಯ ಇಲಾಖೆಯಿಂದ ನಡೆದ ದೌರ್ಜನ್ಯಗಳನ್ನು ಎತ್ತಿ ತೋರಿಸುತ್ತಾ, ಕೊಡಗು ಜಿಲ್ಲೆಯ ಗ್ರಾಮ ಪಂಚಾಯತಿಯ ಬುಡಕಟ್ಟು ಜನಾಂಗದ ಪ್ರತಿನಿಧಿಯಾಗಿರುವ ಶ್ರೀಮತಿ ಜಯಶಾಂತಿ, "ಹೆಣ್ಣು ಮಕ್ಕಳ ಮೇಲಾಗುತ್ತಿರುವ ಪೀಡನೆ, ಹಿಂಸೆಗಳ ಜೊತೆಗೇ, ನಮಗೆ ಅಲ್ಲಿ ಆರೋಗ್ಯ ಸೌಲಭ್ಯಗಳ ಕೊರತೆಯೂ ಬಹಳ ಇದೆ. ಗರ್ಭಿಣಿ ಸ್ತ್ರೀಯರಿದ್ದಾರೆ. ತೀವ್ರ ರೋಗ ಬಾಧೆಯುಳ್ಳ ಹೆಣ್ಣು ಮಕ್ಕಳಿದ್ದಾರೆ, ಆದರೂ

ಯಾವ ಡಾಕ್ಟರೂ ನಮ್ಮ ವಸತಿಗಳಿಗೆ ಬರುತ್ತಿಲ್ಲ. ಸೌದೆ ತರೋಕೆ, ಕಾಡು ಹಣ್ಣು ಆಯೋಕೆ ಹೋದಾಗ ಅರಣ್ಯ ಅಧಿಕಾರಿಗಳು ನಮ್ಮನ್ನು ಪೀಡಿಸುತ್ತಾರೆ. ಮದ್ಯಪಾನ ಇನ್ನೊಂದು ಸಮಸ್ಯೆ. ಅರಣ್ಯದಲ್ಲಿ ಸಾರಾಯಿ ಅಂಗಡಿಗಳಿವೆ. ಮದ್ಯ ಮಾರಾಟದ ವಿರುದ್ಧ ಹೋರಾಟ ನಡೆಸಿದಂಥ ಮಹಿಳೆಯರ ಮೇಲೆ, ಸಾರಾಯಿ ಮಾರಾಟ ಮಾಡುವವರ ಕಣ್ಣು ನೆಡುತ್ತದೆ. ಈ ವಿಷಯದಲ್ಲಿ ನಮ್ಮನ್ನು ಬೆಂಬಲಿಸುವ ಗಂಡಸರ ಮೇಲೂ ಹಿಂಸೆ ನಡೆಯುತ್ತದೆ. ನಮ್ಮ ಈ ಹೋರಾಟದಲ್ಲಿ ನಾವು ಏಕಾಂಗಿಯಾಗಿದ್ದೇವೆ." ಎಂದು ಹೇಳಿದರು.

**ಅಂಕಣ ಸದಸ್ಯರು:** ಈ ಸಮಸ್ಯೆಯನ್ನು ಅಂಕಣದ ಸದಸ್ಯರು "ವನ್ಯ ಜೀವಿ ಸಂರಕ್ಷಣಾ ಕಾಯ್ದೆ" ಅಡಿಯಲ್ಲಿ ಇಟ್ಟರು. ಈ ಕಾಯ್ದೆಗೆ ಅನುಗುಣವಾಗಿ ಸರಕಾರವು ಅರಣ್ಯದ ಮಿತಿಮೀರಿದ ಬಳಕೆಯನ್ನು ಮಿತಗೊಳಿಸಬೇಕಾಗುತ್ತದೆ. ಇದೇ ಕಾಯ್ದೆಯ ಪ್ರಕಾರ, ಕೆಲವು ಕಾಡುಗಳು ಅಭಯಾರಣ್ಯಗಳೆಂದು ಘೋಷಿತವಾಗಿದ್ದು, ಆ ವಲಯಗಳಲ್ಲಿ ಬರುವ ಬುಡಕಟ್ಟು ಜನಾಂಗದವರ ಹಕ್ಕುಗಳು ನಿಯಂತ್ರಿತವಾಗಿವೆ. ನಾಗರಹೊಳೆ ಇಂತಹ ಒಂದು ಅಭಯಾರಣ್ಯ. ಪ್ರಶ್ನೆಗೆ ಪ್ರತಿಕ್ರಿಯೆ ನೀಡುತ್ತಾ, ಅರಣ್ಯಗಳ ಯೋಜನೆಯ ಮುಖ್ಯ ಅಧಿಕಾರಿಗಳಾದ ಶ್ರೀ ಎಸ್. ಕೆ. ಚಕ್ರವರ್ತಿ - ಬುಡಕಟ್ಟು ಜನಾಂಗದವರ ಪುನರ್ವಸತಿ ಪ್ರಕ್ರಿಯೆಯನ್ನು ವಿವರಿಸಿದರು, " ...... ಬುಡಕಟ್ಟು ಜನಾಂಗದವರು ಅರಣ್ಯ ಇಲಾಖೆಯೊಂದಿಗೆ, ದಿಮ್ಮಿ ಕಡಿವ ಹಾಗೂ ಸಸಿ ನೆಡುವ ಕೆಲಸ ಮಾಡಿದ್ದಾರೆ. ಹೊಸದಾಗಿ ಬಂದಿರುವ ಕಾಯಿದೆ ಪ್ರಕಾರ ಕೆಲವು ಪ್ರದೇಶಗಳಲ್ಲಿ ಮರದದಿಮ್ಮಿ ಕೆಲಸ ನಿಷೇಧಿತವಾಗಿದೆ. ಆದ್ದರಿಂದ, ಅರಣ್ಯ ಇಲಾಖೆ ಬುಡಕಟ್ಟು ಜನರನ್ನು ನಿಯತವಾಗಿ ಕೆಲಸಕ್ಕೆ ಕರೆಯುವುದು ನಿಲ್ಲಿಸಿದೆ. ಇದರಿಂದ ಆ ಜನರು ಮತ್ತು ಅಧಿಕಾರ ಮಧ್ಯೆ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಆದರೆ, ಕಾಯಿದೆ ಪ್ರಕಾರ ಇನ್ನೂ ಹೇಳಬೇಕೆಂದರೆ, ರಾಷ್ಟ್ರೀಯ ಉದ್ಯಾನವನಗಳನ್ನಾಗಲೀ, ಅಭಯಾರಣ್ಯಗಳನ್ನಾಗಲೀ ಯಾರೂ ಪ್ರವೇಶಿಸುವ ಹಾಗಿಲ್ಲ. ಈ ಹೊಸ ಕಾನೂನಿನ ಜಾರಿಯಿಂದ ಬುಡಕಟ್ಟು ಜನಾಂಗದವರಿಗೆ ಅನೇಕ ತೊಂದರೆಗಳು ಆಗುತ್ತವೆ ಎಂಬುದನ್ನು ಮನಗಂಡು ಅವರಿಗೆ ಕೆಲವು ಸಹಾಯಗಳನ್ನು ಶಿಫಾರಸ್ಸು ಮಾಡಲಾಗಿದೆ. ಬುಡಕಟ್ಟುಗಳೆಲ್ಲ ಒಂದೇ ಜನಾಂಗಗಳಲ್ಲ. ಇವರೆಲ್ಲ ಹೆಚ್ಚಾಗಿ ಕಾಡೊಳಗೇ ಕೆಲಸ ಮಾಡುತ್ತಾರೆಯಾದರೂ, ಅವರಲ್ಲಿ ಅನೇಕರು ಕಾಡಿನ ಹೊರವಲಯದಲ್ಲಿನ ವಸತಿಗಳಲ್ಲಿ ವಾಸಿಸಲು ಇಷ್ಟ ಪಡುವವರು ಇದ್ದಾರೆ. ಏಕೆಂದರೆ, ಅಲ್ಲಿ ಅವರಿಗೆ ಹೆಚ್ಚಿನ ಅನುಕೂಲ ಸೌಲಭ್ಯಗಳು ಸಿಗುತ್ತವೆ. ಕಾಡಿನಿಂದ ತೆರವುಗೊಳಿಸಲು ಬಲಪ್ರಯೋಗವನ್ನೂ ಮಾಡಬಹುದಾದರೂ ನಾವು ಆ ಮಾರ್ಗ ಹಿಡಿದಿಲ್ಲ. ಏಕೆಂದರೆ, ನಿತ್ಯ ಅವರೆಲ್ಲ ನಮ್ಮೊಂದಿಗೇ ಕೆಲಸ ಮಾಡುತ್ತಾರೆ. ಅವರನ್ನು ನೋಡಿಕೊಳ್ಳಬೇಕಾದ್ದು ನಮ್ಮ ಹೊಣೆ ಎಂಬ ಅರಿವು ನಮಗಿದೆ. ಉತ್ತಮ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬ ಉದ್ದೇಶದಿಂದಲೇ ಕಾಡಿನ ತೀರ ಒಳಭಾಗಗಿಂದ ಹೊರಭಾಗಕ್ಕೆ ಅವರನ್ನು ಸ್ಥಳಾಂತರಿಸಿದ್ದು ಇದರಿಂದ, ಅವರಿಗಾದ ಅತ್ಯಂತ ದೊಡ್ಡ ಲಾಭ ಎಂದರೆ, ಬುಡಕಟ್ಟು ಜನಾಂಗದ ಇತಿಹಾಸದಲ್ಲಿಯೇ ಮೊಟ್ಟಮೊದಲ ಬಾರಿಗೆ ಅವರು ಸಾಮೂಹಿಕ ಸುಗ್ಗಿ ಮಾಡಿದ್ದು. ಐದು ಎಕರೆ ಜಮೀನಿನಲ್ಲಿ ಸಾಗುವಳಿ ಮಾಡಲಾಗಿದೆ. ಈ ಅನುಭವದ ಆಧಾರದ ಮೇಲೆ ಇಲಾಖೆ ಈ ವರ್ಷ ಇನ್ನೂ ಸುಮಾರು 100 ಕುಟುಂಬಗಳನ್ನು ಸ್ಥಳಾಂತರಿಸವ ಯೋಜನೆ ಹೊಂದಿದೆ."

ಮಗುವಿಗೆ ಸಂಬಂಧಿಸಿದ ಪ್ರಕರಣವನ್ನು ನಿರಾಕರಿಸುತ್ತಾ, ಇಂಥ ಆರೋಪಗಳು ಆಧಾರ ರಹಿತ, ಅಂಥ ಯಾವ ಪ್ರಕರಣವೂ ಇಲಾಖೆಯಲ್ಲಿ ದಾಖಲಾಗಿಲ್ಲ ಎಂದು ಶ್ರೀ ಚಕ್ರವರ್ತಿ ಹೇಳಿದರು. ಮುಂದುವರೆದು, ಕಾಡಿನಿಂದ ಆಚೆ ಸಂಭವಿಸಿದ ಪ್ರಕರಣಕ್ಕೆ ಅರಣ್ಯ ಇಲಾಖೆ ಹೊಣೆಗಾರ ಆಗಲಾರದು ಎಂದರು. ಅರಣ್ಯ ಇಲಾಖೆಯವರಿಂದ ಹೆಣ್ಣು ಮಕ್ಕಳ ಮೇಲೆ ನಡೆಯುವ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ಮಾತನಾಡಿದ ಶ್ರೀಯುತರು, ಆ ರೀತಿಯಾದ ನಿರ್ದಿಷ್ಟ ಪ್ರಕರಣಗಳನ್ನು ತಮ್ಮ ಗಮನಕ್ಕೆ ತಂದರೆ ತಾವು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಿದರು. ಅಂಕಣದ ಇನ್ನೊಬ್ಬ ಸದಸ್ಯೆಯಾಗಿದ್ದ ಶ್ರೀಮತಿ ಗೀತಾ ಅರವ ಮುದಂ ಅವರ ಸಲಹೆಯಂತೆ ಲೈಂಗಿಕ ಕಿರುಕುಳ ಸಮಿತಿಯೊಂದನ್ನು ರಚಿಸುವ ಸಾಧ್ಯತೆಗಳನ್ನು ಯೋಚಿಸಲು ಅವರು ಒಪ್ಪಿಕೊಂಡರು.

ಬುಡಕಟ್ಟು ಜನರ ಕಲ್ಯಾಣಕ್ಕಾಗಿ ಸರಕಾರವು ಕೈಗೆತ್ತಿಕೊಂಡಿರುವ ಹಲವಾರು ಕ್ರಮ-ಯೋಜನೆಗಳ ಬಗ್ಗೆ ಶ್ರೀ ಚಕ್ರವರ್ತಿಯವರು ಒತ್ತಿ ಹೇಳಿದರು. ಉದಾಹರಣೆಗೆ: ಅರಣ್ಯ ಪ್ರದೇಶದ ಹೊರಗೆ ಕೃಷಿ ಮಾಡಬಯಸುವ ಐವತ್ತು ಕುಟುಂಬಗಳಿಗೆ, ರಾಜ್ಯ ಸರಕಾರವು 2 ಹೆಕ್ಟೇರ್ ಭೂಮಿ ಮತ್ತು ಕೇಂದ್ರ ಸರಕಾರವು BOTD ಯೋಜನೆಯಡಿ ಒಂದು ಲಕ್ಷ ರೂಪಾಯಿ ಸಹಾಯಧನವನ್ನೂ ನೀಡುತ್ತದೆ. ಪುನರ್ವಸತಿ ಸ್ಥಳಗಳಲ್ಲಿ ಸ್ವಇಚ್ಛೆಯಿಂದ ವಾಸ ಮಾಡತೊಡಗಿರುವವರಿಗೆ ಈಗ ಉತ್ತಮ ಸೌಲಭ್ಯಗಳು ದೊರಕುತ್ತಿವೆ. ಶಾಲೆ-ಆಸ್ಪತ್ರೆಗಳು ಬಂದಿವೆ ಎಂದು ಅವರು ತಿಳಿಸಿದರು. ಇದು ಅರಣ್ಯ ಇಲಾಖೆಯದೇ ಪ್ರಯತ್ನ ವಿನಃ ವಿಶ್ವ ಬ್ಯಾಂಕಿನದ್ದು ಅಲ್ಲ ಎಂದೂ ಹೇಳಿದರು.

ಬುಡಕಟ್ಟು ಜನರ ಜೀವನ ಮಟ್ಟ ಸುಧಾರಿಸಬೇಕೆಂಬ ಉದ್ದೇಶದಿಂದ "ಪರಿಸರ ಅಭಿವೃದ್ಧಿ ಯೋಜನೆ"ಯು ವಿಶ್ವ ಬ್ಯಾಂಕಿನ ನೆರವಿನೊಂದಿಗೆ ಜಾರಿ ಬಂದಿದೆ. ಈ ಯೋಜನೆಯ ಮುಖ್ಯ ಗುರಿ ಮನುಷ್ಯರನ್ನು ಅರಣ್ಯದ ಹೊರಗಿಟ್ಟು, ಕಾಡಿನ ಪ್ರಾಣಿಗಳನ್ನು ರಕ್ಷಿಸುವುದು. ರಾಷ್ಟ್ರೀಯ ಉದ್ಯಾನಗಳಿಂದ ಯಾರೂ ಸೌದೆ ಸಂಗ್ರಹಿಸಬಾರದು ಎಂದಿರುವುದರಿಂದ, ಆ ಜನರಿಗೆ ಅಡಿಗೆ ಅನಿಲ ಸಿಲಿಂಡರ್‌ಗಳು ಮತ್ತು ಪ್ರೆಷರ್ ಕುಕ್ಕರ್‌ಗಳನ್ನು ಒದಗಿಸಲಾಗಿದೆ. ಈ ರಾಷ್ಟ್ರೀಯ ಉದ್ಯಾನಗಳು ಸರಕಾರದಿಂದ ರಚಿತವಾಗಿದ್ದು, ಲೋಕ ಸಭೆಯಿಂದ ಅದಕ್ಕೆ ಅನುಮತಿಯೂ ದೊರೆತಿದೆ ಎಂದು ಅವರು ಹೇಳಿದರು.

**ಪೋಲಿಸರು ಮತ್ತು ಮಹಿಳೆಯರ ಮೇಲಿನ ಹಿಂಸೆ**

ಈ ಚರ್ಚೆಯಲ್ಲಿ ಗಮನ ಸೆಳೆದ ಮೂರನೆಯ ಸಂಗತಿ ಎಂದರೆ ಮಹಿಳೆಯರ ಮೇಲಿನ ಹಿಂಸೆಗೆ ಸಂಬಂಧಿಸಿದಂತೆ ಪೋಲಿಸರ ಜವಾಬ್ದಾರಿ. ಮಹಿಳೆಯರು ಎದುರಿಸುತ್ತಿರುವ ಜೂಜಾಟ, ಹೆಂಡತಿಯನ್ನು ಹೊಡೆಯುವುದು, ಮದ್ಯಪಾನ, ನ್ಯಾಯಬೆಲೆ ಅಂಗಡಿಗಳ ಅಸಮರ್ಪಕ ಕಾರ್ಯವಿಧಾನ ಮುಂತಾದ ಸಮಸ್ಯೆಗಳ ಬಗ್ಗೆ "ಪೋಲಿಸರ ನಿಷ್ಕ್ರಿಯತೆ" ಬಗ್ಗೆ ಮಹಿಳೆಯರು ಮಾತನಾಡಿದರು. ಕೊಡಗು ಜಿಲ್ಲೆಯ ಗ್ರಾಮ ಪಂಚಾಯತಿ ಸದಸ್ಯೆಯಾದ ಶ್ರೀಮತಿ ಜಯಶಾಂತಿ ತಮ್ಮ ಹಳ್ಳಿಯಲ್ಲಿನ ಅಕ್ರಮ ಸಾರಾಯಿ ಮಾರಾಟದ ಅಂಗಡಿ ಕುರಿತು ಪೋಲಿಸರ ನಿಷ್ಕ್ರಿಯತೆ ಬಗ್ಗೆ ಪ್ರಸ್ತಾಪ ಮಾಡಿದರು. ಕೊಪ್ಪಳ ಜಿಲ್ಲಾ ಪ್ರತಿನಿಧಿ ಶ್ರೀಮತಿ ಮಂಜುಳಾ ತಿಳಿಸಿದ್ದ, ತಮ್ಮ ಜಿಲ್ಲೆಯಲ್ಲಿ ಹುಡುಗಿಯರನ್ನು ಮಾನ್ವಿ ತಾಲೂಕಿನ

ನೀರ್‌ಮಾನ್ವಿಯಲ್ಲಿನ ದೇವದಾಸಿಯರನ್ನಾಗಿ ಮಾಡುತ್ತಿರುವಾಗ, ತೀರ್ಥವೆಂದು ಸರಾಯಿಯನ್ನೇ ಕೊಡುತ್ತಾರೆ. ಈ ಎಲ್ಲ ಸಂದರ್ಭದಲ್ಲಿ ಪೋಲಿಸರು ನಿಷ್ಕ್ರಿಯರಾಗಿರುತ್ತಾರೆ ಎಂದು ಹೇಳಿ ಗಮನಸೆಳೆದರು. ಚಿತ್ರದುರ್ಗ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದ ಶ್ರೀಮತಿ ಲಕ್ಷ್ಮಿ, ಜೂಜಾಟದಿಂದ ಮನೆತನದ ಕ್ಷೇಮದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಮಾತನಾಡುವುದರ ಜೊತೆಗೇ, ನ್ಯಾಯಬೆಲೆ ಅಂಗಡಿಗಳ ಅಸಮರ್ಪಕ ಕಾರ್ಯ ನಿರ್ವಹಣೆಯ ಬಗ್ಗೆ ಮಾತನಾಡಿದರು. ಒಬ್ಬ ಪುರುಷ ಪೋಲಿಸು ಮಹಿಳಾ ಸಂಘದ ಹೆಣ್ಣು ಮಗಳೊಬ್ಬಳನ್ನು ಯಾವ ವಾರೆಂಟ್ ಇಲ್ಲದೆಯೂ ಬಂಧಿಸಿದ್ದರ ಬಗ್ಗೆ ತಿಳಿಸಿದರು. ಈ ಹೆಣ್ಣು ಮಗಳಿಗೆ ತನ್ನ ಹಕ್ಕುಗಳ ಅರಿವಿದ್ದಾಗ್ಯೂ ಹೀಗೆ ನಡೆದಿದೆ ಎಂದರು. ಆದರೆ, ಆ ಹೆಣ್ಣು ಮಗಳು ಮಾಡಿದ್ದ ಒಂದೇ ಒಂದು ತಪ್ಪು ಎಂದರೆ, ಆಕೆ, ಸಾರ್ವಜನಿಕರಿಗೆ ಹಂಚಲೆಂದು ಇರುವ ರೇಷನನ್ನು ಅದರ ಮಾಲೀಕ ದುರುಪಯೋಗ ಮಾಡಿಕೊಂಡಿದ್ದರ ಬಗ್ಗೆ ಮಾತನಾಡಿದ್ದು. ಅಧಿಕಾರವನ್ನು ಹೇರುವ, ಗಂಡು ಪೋಲಿಸರು ಹೆಣ್ಣು ಮಕ್ಕಳನ್ನು ಬಂಧಿಸುವ ದೃಶ್ಯಗಳಿರುವ ಜನಪ್ರಿಯ ಧಾರವಾಹಿಗಳನ್ನು, ಮಾಧ್ಯಮಗಳನ್ನು ಆಕೆ ತರಾಟೆಗೆ ತೆಗೆದುಕೊಂಡರು.

ಪೋಲಿಸರ ನಿಷ್ಕ್ರಿಯೆಯ ಬಗ್ಗೆ ಮಾತನಾಡುತ್ತಾ ಅನೇಕ ಭಾಗಿದಾರರು ತಮ್ಮ ವೈಯಕ್ತಿಕ ಅನುಭವಗಳನ್ನು ತಿಳಿಸಿದರು. ಮಹಿಳಾಧ್ವನಿಯ (Women's Voice) ಶ್ರೀಮತಿ ರೂತ್ ಮನೋರಮಾ, "ಮಹಿಳೆಯರ ಹಕ್ಕುಗಳು ಮಾನವ ಹಕ್ಕುಗಳು. ಸಾಮಾನ್ಯ ಸ್ತ್ರೀಯೂ ಪೋಲಿಸ್ ಠಾಣೆಗೆ ಹೋಗಿ, ಪೋಲಿಸರಿಗೆ ದೂರು ನೀಡಲು ಅನುಕೂಲಕರವಾದ ವಾತಾವರಣ ಸೃಷ್ಟಿಯಾಗಬೇಕು. ಮಹಿಳೆಯರೂ ಪೋಲಿಸ್ ಠಾಣೆಗೆ ಹೋಗಿ - ದೂರು ನೀಡುವಷ್ಟು ಆತ್ಮವಿಶ್ವಾಸ ಧೈರ್ಯ ಬೆಳೆಸಿಕೊಳ್ಳಬೇಕು" ಒಂದು ನುಡಿದರು. ವಿಮೋಚನಾದ ಶ್ರೀಮತಿ ಡೋನ ಫರ್ನಾಂಡೀಸ್, ಮಹಿಳೆಯರ ಮೇಲೆ ನಡೆಯುವ ಹಿಂಸೆಯಂಥ ಪ್ರಕರಣಗಳ ಬಗ್ಗೆ ಪೋಲಿಸರು ಕ್ರಮ ತೆಗೆದು ಕೊಳ್ಳಬೇಕಾದುದರ ಅಗತ್ಯದ ಮಹತ್ವ ಕುರಿತು ಮಾತನಾಡಿದರು, ಮಹಿಳೆಯ ಕೊಲೆಯಂಥ ಪ್ರಕರಣಗಳಲ್ಲಿ, ಅನೇಕ ಸಲ, ಪೋಲಿಸರು ಅಪರಾಧಿಯನ್ನು ಬಂಧಿಸಲು ಬಹಳ ಸಮಯ ತೆಗೆದುಕೊಳ್ಳುತ್ತಾರೆ. ಒಬ್ಬ ಉನ್ನತ ಅಧಿಕಾರಿ ದೂರನ್ನು - ಪ್ರಕರಣವನ್ನು ದಾಖಲಿಸಿದರೆ, ಅದಕ್ಕಾಗಿ ದುಬಾಯಿಯಷ್ಟು ದೂರ ಬೇಕಾದರೂ ಪ್ರಯಾಣಿಸಿ ಬಂಧಿಸಲು ನಮ್ಮ ಪೋಲಿಸರು ಸಿದ್ಧರಿದ್ದಾರೆ. ಅದುವೇ, ಮನೆಗಳಲ್ಲಿ ನಡೆಯುವ ಹಿಂಸೆಯ ಬಗ್ಗೆ ಕ್ರಮ ಕೈಗೊಳ್ಳೋಕೆ ಅವರು ಇಷ್ಟೊಂದು ಸಮಯ ತೆಗೆದುಕೊಳ್ಳುತ್ತಾರೆ " ಎಂದು ನೇರವಾಗಿ ನುಡಿದರು. ನೆಲಮಂಗಲ ಮತ್ತು ಸುಬ್ರಮಣ್ಯಪುರದಲ್ಲಿ ನಡೆದ ಎರಡು ವರದಕ್ಷಿಣೆ ಪ್ರಕರಣಗಳನ್ನು ಪ್ರಸ್ತಾಪಿಸಿ, ಅವೆರಡೂ ಕೊಲೆಗಳೇ ಎಂದರು. ಆರೆಂಟು ತಿಂಗಳು ಆಗಿದ್ದರೂ ಇಂದಿನವರೆಗೂ ಏನೂ ಕ್ರಮಕೈಗೊಂಡಿಲ್ಲ. ಬಲಾತ್ಕಾರ, ಹೆಂಡತಿಗೆ ಹೊಡೆಯುವುದು, ವರದಕ್ಷಿಣೆ ಸಾವು ಅಥವಾ ಅಸಹಜ ಸಾವು ಯಾವುದಾದರೂ ಆಗಿರಲಿ - ಒಟ್ಟು ಹೆಣ್ಣು ಮಕ್ಕಳ ಮೇಲೆ ನಡೆಯುವ ಇಂಥ ಅಪರಾಧಗಳ ಬಗ್ಗೆ ಕ್ರಮಕೈಗೊಳ್ಳಲು ಏಕೆ ತಡವಾಗಬೇಕು ಎಂದು ಪ್ರಶ್ನಿಸಿದರು. ಅಪರಾಧಿಗಳಿಗೆ ಪೋಲಿಸರು ಏಕೆ ಜಾಮೀನು ನೀಡಬೇಕು ಎಂದು ಕೇಳಿದರು. ಮುಂದುವರೆದು, "ಯಾರಾದರೂ ಒಬ್ಬ ಹೆಣ್ಣು ಮಗಳು ಪೋಲಿಸರಿಗೆ ದೂರು ನೀಡಿದರೆ, ಒಂದು ಬಗೆಯ ಉತ್ತರಗಳು - ಪ್ರತಿಕ್ರಿಯೆಗಳು ಅವರಿಂದ ಬರುತ್ತವೆ. ಅಷ್ಟೇ ಅಲ್ಲ, ಅವಳನ್ನೇ ತಪ್ಪಿತಸ್ಥಳನ್ನಾಗಿ ಮಾಡಲಾಗುತ್ತದೆ. ಮಹಿಳೆ ಮಾನೋವೈಜ್ಞಾನಿಕ ವಿಶ್ಲೇಷಣೆಗಾಗಿ

ಪೋಲಿಸ್ ಠಾಣೆ ಹೋಗುವುದಿಲ್ಲ. ಅಲ್ಲಿ ಆಕೆ ನ್ಯಾಯ ಮತ್ತು ರಕ್ಷಣೆಗಾಗಿ ಹೋಗುತ್ತಾಳೆ. ಹೆಂಡತಿಯನ್ನು ನೋಡಲು ಹೋಗಬಾರದು ಎಂದು ಕೋರ್ಟು ಆಜ್ಞೆ ಇದ್ದಾಗಲೂ ಕುಡಿದು ಆಕೆಯ ಮನೆಗೆ ಹೋಗಿ ಬೈದಾಡುವುದೂ ಉಂಟು. ಇಂಥ ಸನ್ನಿವೇಶಗಳಲ್ಲಿ ಮಹಿಳೆಗೆ ಪೋಲಿಸರ ಸಹಾಯ ಸಿಗುವುದಿಲ್ಲ. ಮಹಿಳೆಯರಿಗೆ ರಕ್ಷಣೆ ನೀಡುವುದು ನಿಮ್ಮ ಜವಾಬ್ದಾರಿ, ನೀವದನ್ನು ಕೊಡಿ ಎಂದು ನಾವು ಪೋಲಿಸರನ್ನು ಒತ್ತಾಯಿಸುತ್ತೇವೆ. ವರದಕ್ಷಿಣೆ ಹಿಂಸೆಗೆ ಬಲಿಯಾಗಿ ಸಾಯುತ್ತಿರುವ ಹೆಣ್ಣು ಮಕ್ಕಳ ಘೋಷಣಾ ಪ್ರಕರಣಗಳಲ್ಲಿ, ಸಂಬಂಧಿಸಿದವರನ್ನು ಬಂಧಿಸುವಾಗ, ಹೆಣ್ಣುಮಕ್ಕಳನ್ನು ಸೆರೆಯಲ್ಲಿಟ್ಟಿರುವಾಗ ಇದೇ ಬಗೆಯ ಸಮಸ್ಯೆಗಳು ಇವೆ ಎಂದು ಹೇಳುತ್ತಾ, ಜನತೆಯು ಆತ್ಮವಿಶ್ವಾಸ ಪಡೆಯಲು ಹೆಣ್ಣು ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳಿಗೆ ಸರಿಯಾಗಿ ಸ್ಪಂದಿಸಲು ಪೋಲಿಸರಲ್ಲಿ ವಿನಂತಿಸಿಕೊಂಡರು.

ಕರ್ನಾಟಕ ಪೋಲಿಸ್ ಅಕಾಡೆಮಿಯ ನಿರ್ದೇಶಕರಾದ ಶ್ರೀ ಸತ್ಯ ನಾರಾಯಣರಾವ್ ಚರ್ಚಿತ ಅಂಶಗಳ ಬಗ್ಗೆ ಪ್ರತಿಕ್ರಿಯೆ ತೋರುತ್ತಾ ಮದ್ಯಪಾನದ ಮೇಲಿನ ನಿಷೇಧವು ಬಡಜನರ ಜೀವನ ಮಟ್ಟ ಸುಧಾರಿಸುವಲ್ಲಿ ಸಹಾಯಕವಾಗಿರುತ್ತದೆ ಎಂದು ಸಂಪೂರ್ಣವಾಗಿ ಒಪ್ಪಿಕೊಂಡರು. ಆಂಧ್ರಪ್ರದೇಶದ ಉದಾಹರಣೆಯನ್ನು ನೀಡುತ್ತಾ, "ಒಂದು ಸಾಮಾಜಿಕ ಸಂಸ್ಥೆ, ಅಕ್ರಮ ಸಾರಾಯಿಯನ್ನು ರಾಜ್ಯದಲ್ಲಿ ನಿಷೇಧಿಸಿದ್ದರಿಂದಾಗಿರುವ ಪರಿಣಾಮಗಳ ಕುರಿತು - ಅಧ್ಯಯನ ನಡೆಸಿದೆ. ಅದರ ಪ್ರಕಾರ ಗ್ರಾಮೀಣ ಕುಟುಂಬಗಳ ತಿಂಗಳ ಆದಾಯ ಈ ನಿಷೇಧದಿಂದ ಸುಮಾರು 500/- ರೂಪಾಯಿಯಷ್ಟು ಹೆಚ್ಚಿದೆ ಎಂದು ತಿಳಿದು ಬಂದಿದೆ"ಎಂದು ವಿವರಿಸಿದರು. ಪೋಲಿಸರು ಜೂಜಾಟದ ವಿರುದ್ಧವೂ ಕ್ರಮಕೈಗೊಳ್ಳುತ್ತಿದ್ದಾರೆ ಎಂದರು. ಚಿತ್ರದುರ್ಗ ಜಿಲ್ಲೆಯೊಂದರಲ್ಲಿಯೇ ಕಳೆದ ಮೂರು ವರ್ಷಗಳಲ್ಲಿ 205 ಇಂಥ ಪ್ರಕರಣಗಳನ್ನು ದಾಖಲಿಸಿಕೊಂಡು 608 ಜನರನ್ನು ಬಂಧಿಸಿ, 3.98 ಲಕ್ಷ ರೂಪಾಯಿಗಳ ದಂಡ ವಸೂಲಿ ಮಾಡಲಾಗಿದೆ ಎಂದು ಅವರು ವಿವರಣೆ ನೀಡದರು. ಮಾನ್ವಿ ತಾಲ್ಲೂಕಿನಲ್ಲಿ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿ ಮಾಡುತ್ತಿರುವ ಸಂಗತಿಗೆ ಪ್ರತಿಕ್ರಿಯೆ ನೀಡಿ, ತಾವು ಅಲ್ಲಿನ ಸಂಬಂಧಿಸಿದ ಅಧಿಕಾರಿಗಳು ಈ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಬರೆಯುವುದಾಗಿ ಭರವಸೆ ನೀಡಿದರು.

ಮಾಧ್ಯಮಗಳಲ್ಲಿ ಪೋಲಿಸರನ್ನು ತಪ್ಪಾಗಿ ಬಿಂಬಿಸಲಾಗುತ್ತಿದೆ. ಪ್ರಸಾರ ಮಾಡುವ ಮೊದಲು ಸಂಬಂಧಿಸಿದ ಪೋಲಿಸರನ್ನು ಸಂಪರ್ಕಿಸಿ ನಂತರ ಸರಿಯಾದ ಮಾಹಿತಿ ಜನತೆ ಒದಗಿಸಿ ಎಂದು ಮಾಧ್ಯಮದವರಿಗೆ ತಿಳಿಸಲಾಗಿದೆ ಎಂದರು. ಸರಿಯಾದ ವೇಳೆಗೆ ಕ್ರಮ ಜರುಗಿಸದೇ ಇರುವ ಪೋಲಿಸ್ ಅಧಿಕಾರಿಗಳ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವುದಾಗಿ ಅವರ ಪುನರುಚ್ಚಿಸಿದರು. ವರದಕ್ಷಿಣೆ, ಹೆಂಡತಿಯನ್ನು ಬೈಯುವ, ಹೊಡೆಯುವ ಪ್ರಕರಣಗಳಲ್ಲಿ ರಾಜಿ ಮಾಡಿಕೊಳ್ಳುವುದರ ಬಗ್ಗೆ ಮಾತನಾಡುತ್ತಾ, ಶ್ರೀ ಸತ್ಯ ನಾರಾಯಣ್ ರಾವ್, "FIR ಫೈಲ್ ಮಾಡಬೇಕು ಎಂದು ಪೋಲಿಸರಿಗೆ ಸೂಚನೆ ಇದೆ. ನಂತರ ರಾಜಿ ಮಾತುಕತೆ ಕುಟುಂಬ ಸಲಹಾ ಕೇಂದ್ರಗಳಲ್ಲಿ ನಡೆಯುತ್ತದೆ. ಪ್ರಕರಣ ದಾಖಲುಗೊಳಿಸುವಾಗ, ವಿಚಾರಣೆ ಮತ್ತು ಮರಣೋತ್ತರ ಪರೀಕ್ಷೆ ನಡೆಸುವಾಗ ಅನುಸರಿಸಬೇಕಾದ ನಿಯಮಾವಳಿಗಳ ಬಗ್ಗೆ ಸಂಯುಕ್ತ ಕಾನೂನು ಸಮಿತಿ ನೀಡಿರುವ ಶಿಫಾರಸ್ಸುಗಳ ಬಗ್ಗೆ ವಿವರಗಳು ಎಲ್ಲ ಅಧಿಕಾರಿಗಳಿಗೆ ಲಭ್ಯವಿರುತ್ತವೆ. ಸಂವಿಧಾನದಲ್ಲಿ ಮಹಿಳಾ ಹಕ್ಕುಗಳು

ಇವೆಯಾದರೂ ಅವುಗಳ ಜಾರಿಯಾಗಿರುವುದು ವಿರಳ. ಹೀಗಾಗುತ್ತಿರಲು ಕಾರಣ ಬಹುಶಃ, ಪೋಲಿಸ್ ವ್ಯವಸ್ಥೆಯ ಕೆಳ ಹಂತದಲ್ಲಿ, ಪೋಲಿಸರ ಅಜಾಗರೂಕತೆಯಿಂದಾಗಿ ಆಗುತ್ತಿರಬಹುದು. ಆ ಮಟ್ಟದಲ್ಲಿ ಅವರು ಸಮಾಜದೊಂದಿಗೆ ಅತಿಯಾಗಿ ಹೊಂದಿಕೊಂಡಿರುತ್ತಾರೆ. ಹೆಣ್ಣಿನ ಬಗ್ಗೆ ಸಮಾಜಕ್ಕೆ ಇರುವ ದೃಷ್ಟಿಯ ಪ್ರಭಾವ ಇವರ ಮೇಲೂ ಬಹಳ ಆಗಿರುವ ಸಂಭವ ಇರುತ್ತದೆ. ಇದರಿಂದ - ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳಿಗೆ ಈ ಹಂತದಲ್ಲಿ ಮಹತ್ವ ನೀಡದೇ ಹೋಗುವ ಸನ್ನಿವೇಶ ಇರುತ್ತದೆ. ಆದ್ದರಿಂದಲೇ ತರಬೇತಿ ಮತ್ತು ಪುನರ್ ತರಬೇತಿ ಸಂದರ್ಭದಲ್ಲಿ ಪೋಲಿಸರಿಗೆ ಈ ವಿಷಯದ ಬಗ್ಗೆ ತಿಳಿವಳಿಕೆ ನೀಡಲು ಪ್ರಯತ್ನಗಳು ನಡೆದಿವೆ" ಎಂದರು. ಪೋಲಿಸು ಇಲಾಖೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು, ಸಮುದಾಯಗಳು, ಸರ್ಕಾರೇತರ ಸಂಸ್ಥೆಗಳು ನಡೆಸುವ ಸಂಶೋಧನೆಗಳ ಬೆಂಬಲವನ್ನು ಪಡೆಯಲು ಈ ಅವಕಾಶವನ್ನು ಶ್ರೀ ಸತ್ಯ ನಾರಾಯಣರಾವ್ ಬಳಸಿಕೊಂಡರು :

- ತಮ್ಮ ಕ್ಷೇತ್ರಗಳಲ್ಲಿ ನಡೆಯುವ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಪೋಲಿಸರಿಗೆ ತಿಳಿಸಬೇಕು.
- ಪೋಲಿಸರಿಂದ ನಡೆಯುವ ಯಾವುದೇ ದೌರ್ಜನ್ಯದ ಬಗ್ಗೆ ಹಿರಿಯ ಪೋಲಿಸ್ ಅಧಿಕಾರಿಗಳ ಗಮನಕ್ಕೆ ತರಬೇಕು.
- ಹೆಣ್ಣು ಮಕ್ಕಳು ದೂರನ್ನು ನೀಡಲು ಸಹಾಯಕಾರಿ ಆಗುವಂಥ ರೀತಿಯಲ್ಲಿ ಬೆಂಬಲ ನೀಡಬೇಕು.
- ಸಾಯುವ ಮುನ್ನ ನೀಡುವ ಹೇಳಿಕೆಗಳು ಪೋಲಿಸ್ ಅಧಿಕಾರಿ ಮತ್ತು ವೈದ್ಯರೆದುರು ದಾಖಲಾಗಬೇಕು ಎಂಬುದನ್ನು ಸಮುದಾಯಗಳಿಗೆ ತಿಳಿಸಬೇಕು.
- ವರದಕ್ಷಿಣೆ ಕಿರುಕುಳ ಪ್ರಕರಣದ ಸಂದರ್ಭದಲ್ಲಿ ಮಾಡುವ ಘೋಷಣೆ ವೈದ್ಯರಿಂದ ರುಜುವಾತು ಪಡೆದಿರಬೇಕಾದ್ದು ಅಗತ್ಯ.
- ಪಾಟೀ ಸವಾಲುಗಳ ಬಗ್ಗೆ ತಿಳವಳಿಕೆ ನೀಡಿ, ಸಾಕ್ಷಿದಾರರು ಸಮರ್ಥವಾಗಿ ಸಾಕ್ಷೀ ಹೇಳುವಂತೆ ಮಾಡಬೇಕು.
- ಪೋಲಿಸು ತರಬೇತಿ ಕಾರ್ಯಕ್ರಮಗಳಲ್ಲಿ ಸಹ ಭಾಗಿಯಾಗುವುದರೊಂದಿಗೆ ಪೋಲಿಸರನ್ನು ಜಾಗೃತಗೊಳಿಸಬೇಕು.
- ಸಂಶೋಧನ ಅಧ್ಯಯನದ ಫಲಗಳನ್ನು ಪೋಲಿಸರಿಗೆ ತಿಳಿಸಿ - ಅವರ ಸೇವೆ ಇನ್ನೂ ಬಲಗೊಳಿಸಲು ಯತ್ನಿಸಬೇಕು.
- ವರದಕ್ಷಿಣೆಗೆ ಸಂಬಂಧಿಸಿದ ಕಾನೂನುಗಳನ್ನು ದುರುಪಯೋಗ ಪಡೆಸಿಕೊಂಡಿದ್ದರ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡಬೇಕು.
- ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ತಡೆಯಲು - ಅದಕ್ಕೆ ಸಂಬಂಧಿಸಿದ ನಿರ್ಣಯಗಳನ್ನು ಕೈಗೊಳ್ಳಲು ಸಂದರ್ಭದಲ್ಲಿ ಗಣನೀಯ ಪಾತ್ರ ನಿರ್ವಹಿಸಲು ಮಹಿಳೆಯರು ಹೆಚ್ಚು ಹೆಚ್ಚಾಗಿ ಪೋಲಿಸ್ ದಳ ಸೇರಲು ಪ್ರೋತ್ಸಾಹಿಸಬೇಕು.

ಕೊನೆಯಲ್ಲಿ "ಮಹಿಳೆಯ ಮೇಲಿನ ಹಿಂಸೆ" ಯಂಥ ಪ್ರಮುಖ ಮತ್ತು ಅಷ್ಟೇ ಸೂಕ್ಷ್ಮ ವಿಷಯದ ಬಗ್ಗೆ ಚರ್ಚಿಸಲು ವಿವಿಧ ಕಾರ್ಯಕ್ಷೇತ್ರಗಳ ತಜ್ಞರನ್ನು ಒಂದೆಡೆ ಸೇರಿಸಿ ಅವರೆಲ್ಲ ಚರ್ಚಿಸುವಂತೆ ಮಾಡಿದ್ದಕ್ಕಾಗಿ "ನಿಯಾಸ" ಅನ್ನು ನ್ಯಾಯ ಮೂರ್ತಿ ಸದಾಶಿವ ಅವರು

ಪ್ರಶಂಶಿಸಿದರು. ಇದೊಂದು ಸಂಕೀರ್ಣ ವಿಷಯ, ಭಾರತದಂಥ ಬಹು ವೈವಿಧ್ಯವುಳ್ಳ ದೇಶದಲ್ಲಿ ಇದನ್ನು ಅತ್ಯಂತ ಸೂಕ್ಷ್ಮ ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕಾದ ಅಗತ್ಯವಿದೆ ಎಂದರು. ಹಿಂಸೆಯ ಬಗ್ಗೆ, ಅದರಲ್ಲೂ ಹೆಣ್ಣು ಮಕ್ಕಳ ಮೇಲೆ ನಡೆಯುವ ಹಿಂಸೆಯ ಬಗ್ಗೆ ಜನಗಳಿಗೆ ತೀರ ಕಡಿಮೆ ತಿಳಿದಿದೆ ಎಂದು ಹೇಳುತ್ತಾ," ನಮ್ಮ ದೇಶದಲ್ಲಿ ಕೋಟ್ಯಾನುಕೋಟಿ ಜನರಿಗೆ, ಅದರಲ್ಲೂ ಹೆಣ್ಣು ಮಕ್ಕಳಿಗೆ ಯಾವುದು ಹಕ್ಕು - ಯಾವುದು ಹಕ್ಕುಗಳ ಉಲ್ಲಂಘನೆ ಎನ್ನುವುದರ ತಿಳಿವಳಿಕೆ ಇಲ್ಲ. ಇದಕ್ಕೆ ಕಾರಣ ನಮ್ಮ ಶಿಕ್ಷಣದಲ್ಲಿ, ಸಾಮಾಜಿಕ ಜವಾಬ್ದಾರಿ, ಸಾರ್ವಜನಿಕ ಕಾಳಜಿ, ಮಾನವೀಯ ಮೌಲ್ಯಗಳಂಥ ಮೌಲ್ಯಯುತ ಅಂಶಗಳನ್ನು ಮಕ್ಕಳಿಗೆ ಕಲಿಸದೇ ಇರುವುದು. ಇಂಥ ಸಂದರ್ಭದಲ್ಲಿ, ಹೆಣ್ಣುಮಕ್ಕಳು ತಾವಾಗೇ ಮಾನಸಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಒಂದಾಗುವುದು - ಸಂಗತಿಗಳನ್ನು ಅರಿಯಲು, ಅನುಭವ ಪಡೆದುಕೊಳ್ಳಲು ಯತ್ನಿಸುವುದು, ಮತ್ತು ತಮ್ಮ ಹಕ್ಕುಗಳಿಗಾಗಿ ಹೋರಾಡುವುದು ಬಹಳ ಮುಖ್ಯ" ಎಂದರು.

## ಗುಂಪು ಚರ್ಚೆಗಳು

ಪ್ರಮುಖ ಚರ್ಚೆಯಾದ ನಂತರ, ತಮ್ಮ ತಮ್ಮ ಜಿಲ್ಲೆಗಳ ವಿಷಯಗಳ ಮೇಲೆ ಆಳವಾಗಿ ಚರ್ಚಿಸಿ, ಕಾರ್ಯಯೋಜನೆಯನ್ನು ರೂಪಿಸಲೆಂದು ಆರು ಜಿಲ್ಲೆಗಳು ಪ್ರತ್ಯೇಕವಾಗಿ ಸಭೆ ಸೇರಿದವು. ಪ್ರತಿಯೊಂದು ಗುಂಪಿನಲ್ಲಿ ಸಮುದಾಯ ಪ್ರತಿನಿಧಿಗಳು, ಸಹ ಸರಕಾರೇತರ ಸಂಸ್ಥೆಗಳು, ಆಯಾ ಜಿಲ್ಲೆಗಳ ಪೋಲಿಸ್ ಅಧಿಕಾರಿಗಳು, ಮಹಿಳಾ ಕಾರ್ಯಕರ್ತೆಯರು ಮತ್ತು ನಿಯಾಸ್ ಪ್ರತಿನಿಧಿಗಳು ಇದ್ದರು. ಪ್ರತಿಯೊಂದು ಗುಂಪು, ಮಹಿಳೆಯರು ತಮ್ಮ ತಮ್ಮ ಜನಾಂಗಗಳಲ್ಲಿ ಎದುರಿಸುತ್ತಿರುವ ಹಿಂಸೆಯ ರೂಪಗಳನ್ನು ಆಯಾ ಜಿಲ್ಲಾವಾರು ಗುರುತಿಸಲು ಮತ್ತು ಅಲ್ಲಲ್ಲ ಪ್ರಚಾರಾಂದೋಲನ ಆರಂಭಿಸುವ ರೀತಿಯ ಬಗ್ಗೆಯೂ ಚರ್ಚಿಸಲು ಕೇಳಲಾಗಿತ್ತು. ಅಲ್ಲದೇ, ಮುಂಬರುವ ವರ್ಷಕ್ಕಾಗಿ ಕಾರ್ಯಯೋಜನೆಯನ್ನು ರೂಪಿಸಲು ಈ ಎಲ್ಲ ಗುಂಪುಗಳಿಗೆ ತಿಳಿಸಲಾಗಿತ್ತು. ಚಿಕ್ಕ ಚಿಕ್ಕ ಗುಂಪುಗಳಲ್ಲಿ ನಡೆದ ಈ ಚರ್ಚೆಯಲ್ಲಿ ಎಲ್ಲರೂ ತಪ್ಪದೇ ಭಾಗವಹಿಸಿದ್ದರು. ಚರ್ಚೆ ತುಂಬಾ ಅರ್ಥಪೂರ್ಣವಾಗಿತ್ತು. ವಿವಿಧ ಜಿಲ್ಲಾ ಗುಂಪುಗಳು ಮಂಡಿಸಿದ ವಿಷಯಗಳೆಲ್ಲ ಸಮುದಾಯ ಪ್ರತಿನಿಧಿಗಳು, ಸರಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಪೋಲಿಸ್ ಅಧಿಕಾರಿಗಳ ಗಮನ ಸೆಳೆದವು ಎಂಬುದು ತುಂಬಾ ಸಂತೋಷದಾಯಕ ಅಂಶ. ಆದ್ಯತಾ ವಿಷಯ ಪಟ್ಟಿ ಮತ್ತು ಜಿಲ್ಲಾವಾರು ಕಾರ್ಯಯೋಜನೆಗಳು ಈ ಮುಂದಿನಂತಿವೆ.

### ವಿಜಾಪುರ ಜಿಲ್ಲೆ :


ವಿಜಾಪುರ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಗುಂಪು, ತಮ್ಮ ಜಿಲ್ಲೆಯಲ್ಲಿ ಬಾಲ್ಯವಿವಾಹ, ಹೆಣ್ಣು ಮಗುವಿಗೆ ತೋರುವ ತಾರತಮ್ಯ, ಹುಡುಗಿಯರನ್ನು ದೇವದಾಸಿಯರನ್ನಾಗಿ ಮಾಡುವುದು - ಇವೆಲ್ಲ ಆದ್ಯತಾ ವಿಷಯಗಳೆಂದು ಗುರುತಿಸಿತು. ಆದಾಗ್ಯೂ, ಇತ್ತೀಚಿನ ವರ್ಷಗಳಲ್ಲಿ ಯುವತಿಯರನ್ನು ದೇವದಾಸಿಯರನ್ನಾಗಿ ಮಾಡುವ ಪ್ರಕರಣಗಳು ಕಡಿಮೆಯಾಗುವಂತೆ ಮಾಡುವಲ್ಲಿ ಸಮುದಾಯಗಳು ಪ್ರಮುಖ ಪಾತ್ರ ವಹಿಸಿವೆ ಎಂದು ಹೇಳಿದರು. ಮುಂಬರುವ ವರ್ಷಕ್ಕಾಗಿ ಅವರು ಸಿದ್ಧಪಡಿಸಿದ ಕಾರ್ಯಯೋಜನೆ ಇಂತಿದೆ:

## ಗುಂಪು ಚರ್ಚೆ



ವಿಜಾಪುರ ಜಿಲ್ಲೆ

## ಜಿಲ್ಲಾ ಕಾರ್ಯ ಯೋಜನಾ ಮಂಡನೆ



ಶ್ರೀಮತಿ ಸರಸ್ವತಿ, ಮಹಿಳಾ ಸಾಮಖ್ಯ, ಬಿಜಾಪುರ ಜಿಲ್ಲೆ

- ಬಾಲ್ಯ ವಿವಾಹಕ್ಕೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸುವುದನ್ನು ಹೆಚ್ಚಿಸಬೇಕು.
- ಪೋಲಿಸ್ ಇಲಾಖೆಯ ಸಹಾಯದಿಂದ, ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯದ ಬಗ್ಗೆ ಕೆಲಸ ಮಾಡಲು ಮಹಿಳಾ ಸಂಘಗಳನ್ನು ಪ್ರೋತ್ಸಾಹಿಸಬೇಕು.
- ಪೋಲಿಸರ ಸಹಾಯ ಪಡೆಯಬೇಕು ಎಂದು ಚರ್ಚಿಸುವಾಗ, ಸಮುದಾಯದ ಸದಸ್ಯರು ಪೋಲಿಸರು ಜನಾನುರಾಗಿಗಳು ಆಗಿರಬೇಕಾದ್ದು ಅವಶ್ಯ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು. ಸದ್ಯಕ್ಕಂತೂ, ಪೋಲಿಸರ ನೆರವು ಪಡೆಯುವುದು ಕೊನೆಯ ಅಂಶವಾಗಿರಲಿ ಎಂಬ ಅಭಿಪ್ರಾಯ ಮೂಡಿಬಂತು.
- ಮಹಿಳೆಯರ ಮೇಲೆ ನಡೆಯುವ ಹಿಂಸೆಯ ಬಗ್ಗೆ ಪಾಲಕರಲ್ಲಿ ಅರಿವು ಮೂಡಿಸಲು ಸಮುದಾಯ ಕ್ರಿಯಾಶೀಲವಾಗಿ ಭಾಗವಹಿಸಬೇಕು.

**ಚಿತ್ರದುರ್ಗ ಜಿಲ್ಲೆ**

ಮನೆತನದ ನಿರ್ವಹಣೆಗೆ ಅತಿ ಕಡಿಮೆ ಕಾಣಿಕೆ ನೀಡುವ, ಮದ್ಯಪಾನ ವ್ಯಸನಕ್ಕೊಳಗಾದ ಗಂಡಸರ ಕುಡಿಯುವ ಚಟವನ್ನು ಈ ಜಿಲ್ಲೆಯ ಗುಂಪು ಆದ್ಯತಾ ವಿಷಯವಾಗಿ ಗುರುತಿಸಿತು. ಈ ವಿಷಯವನ್ನು ಆದ್ಯತಾ ವಿಷಯವನ್ನಾಗಿ ಗುರುತಿಸುವಾಗ, ಜಿಲ್ಲೆಯ ಗುಂಪು, ತರಬೇತಿ, ನಿರ್ವಹಣೆ, ಅನುಸರಣ ಕೆಲಸ ಮುಂತಾದವುಗಳಲ್ಲಿ ಜಿಎಸ್‌ಯು, ನಿಯಾಸ್‌ಗಳಿಂದ ಸಹಾಯ ಅಗತ್ಯ ಎಂದು ಅಭಿಪ್ರಾಯಪಟ್ಟಿತು.

ಮಹಿಳೆಯರ ಮೇಲಿನ ಹಿಂಸೆ, ಅವರ ಹಕ್ಕುಗಳು ಮತ್ತು ಫಲಾನುಭವಿಗಳ ವಿವಿಧ ಕಾರ್ಯಗಳಲ್ಲಿ ಸಮುದಾಯದ ಭಾಗಿತ್ವವನ್ನು ಉಳಿಸಿಕೊಳ್ಳುವಂಥ ಸಂದರ್ಭದಲ್ಲಿ, ಸಮುದಾಯ ಮಟ್ಟದ ಸ್ವಯಂ ಸೇವಕರಿಗೆ ಗೌರವಧನ ನೀಡಬೇಕಾದ ಅವಶ್ಯಕತೆಯ ಬಗ್ಗೆ ಪ್ರಸ್ತಾಪವಾಯಿತು. ಅಲ್ಲದೆ ಕಾರ್ಯಯೋಜನೆಯ ಭಾಗವಾಗಿ ಈ ಮುಂದೆ ಕಾಣಿಸಿದ ಚಟುವಟಿಕೆಗಳ ಪಟ್ಟಿ ಮಾಡಲಾಯಿತು.

- ಮಹಿಳೆಯರ ಮೇಲಿನ ಹಿಂಸೆಯ ಬಗ್ಗೆ ಮಾಹಿತಿ ಸಿದ್ಧಗೊಳಿಸಿ, ಅದರ ಪ್ರಚಾರ ಮಾಡಬೇಕು.

- ಗ್ರಾಮಸಭೆಯನ್ನು ಒಂದು ವೇದಿಕೆಯನ್ನಾಗಿ ಬಳಸಿಕೊಂಡು, ಪೋಲಿಸರು ಮತ್ತು ವಕೀಲರಿಂದ, ಸಮುದಾಯ ಸದಸ್ಯರಿಗಾಗಿ ತಿಳಿವಳಿಕೆ ಶಿಬಿರಗಳನ್ನು ಸಂಘಟಿಸಬೇಕು.

- ಸಮಸ್ಯೆಗೆ ತುತ್ತಾದ ಮಹಿಳೆಯರಿಗೆ, ಸಂಬಂಧಿತ ವಿವಿಧ ಇಲಾಖೆಗಳಿಂದ ಸಹಾಯ ಪಡೆದುಕೊಳ್ಳಲು ಸ್ಥಳೀಯ ಸರಕಾರೇತರ ಸಂಸ್ಥೆಗಳು ಕ್ರಿಯಾಶೀಲ ಪಾತ್ರವಹಿಸಬೇಕು.

- ಮಹಿಳೆಯ ಮೇಲೆ ನಡೆಯುವ ಹಿಂಸೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸುವಾಗ ಗ್ರಾಮ ಪಂಚಾಯತಿ ಸದಸ್ಯರು ಗ್ರಾಮದ ಮುಖಂಡರು ಭಾಗವಹಿಸಬೇಕು. ತನ್ಮೂಲಕ ಇಂಥ ವಿಷಯಗಳಲ್ಲಿ ಸಮುದಾಯವು ಕ್ರಿಯಾತ್ಮಕ ಪಾತ್ರ ವಹಿಸಲು ಸಾಧ್ಯವಾಗುತ್ತದೆ.

## ಗುಂಪು ಚರ್ಚೆ



ಚಿತ್ರದುರ್ಗ ಜಿಲ್ಲೆ



ಕೊಪ್ಪಳ ಜಿಲ್ಲೆ

- ಹೆಣ್ಣು ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಬೇಕು. ಇದರಿಂದ, ಸ್ತ್ರೀಯರ ಮೇಲೆ ನಡೆಯುವ ಹಿಂಸೆಯ ಬಗ್ಗೆ ಲಭ್ಯವಿರುವ ಸಾಹಿತ್ಯವನ್ನು ಅವರೇ ಪಡೆದು ಓದುವಂತಾಗುತ್ತದೆ.

**ಕೊಡಗು ಜಿಲ್ಲೆ**

ಸಣ್ಣ ಗುಂಪು ಚರ್ಚೆಯ ಸಂದರ್ಭದಲ್ಲಿ, ಈ ಜಿಲ್ಲೆಯು, ಅರಣ್ಯ ಇಲಾಖೆಯಿಂದ ಬುಡಕಟ್ಟು ಗಿರಿಜನರ ಮೇಲೆ ನಡೆಯುತ್ತಿರುವ ಸರಕಾರಿ ಶೋಷಣೆ ಪ್ರಮುಖ ವಿಷಯ ಎಂದು ಗುರುತಿಸಿತು. ಜೊತೆಗೇ ಮೇಲು ಜಾತಿಯವರಿಂದ ನಡೆಯುವ ಶೋಷಣೆ ಮತ್ತು ಮದ್ಯಪಾನ ವ್ಯಸನ ಇತರ ಪ್ರಮುಖ ಅಂಶಗಳನ್ನು ಗುರುತಿಸಲಾಯಿತು. ಮುಂಬರುವ ವರ್ಷಕ್ಕಾಗಿ ಇವರ ಕಾರ್ಯ ಯೋಜನೆ :

- ಕೊಡಗು ಜಿಲ್ಲೆಯಲ್ಲಿ ಮಹಿಳಾ ಸಹಾಯ ಮಾರ್ಗ (Women Help Line) ಪುನಶ್ಚೇತನಗೊಳಿಸಲು ಪೋಲಿಸ್ ಇಲಾಖೆ ಯತ್ನಿಸಬೇಕು.
- ಪರಿಶಿಷ್ಟ ಜಾತಿ ಮತ್ತು / ಬುಡಕಟ್ಟು ಜನಾಂಗದವರ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳನ್ನು FIR ಹಾಕಲು ನಿರಾಕರಿಸುವ ಪೋಲಿಸ್ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನುಕ್ರಮ ತೆಗೆದುಕೊಳ್ಳಬೇಕು. ಒಂದು ವೇಳೆ ಸ್ಥಳೀಯ ಪೋಲಿಸರು ಇಂಥ ವಿಷಯಗಳಲ್ಲಿ ನಿಷ್ಕ್ರಿಯರಾಗಿದ್ದರೆ, ಪ್ರಕರಣಗಳನ್ನು ಕೂಡಲೇ ಜಿಲ್ಲಾ ಮುಖ್ಯ ಅಧಿಕಾರಿಗಳ ಗಮನಕ್ಕೆ ತರಬೇಕು.
- ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಹಿಂಸೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಪಂಚಾಯಿತಿ ಸದಸ್ಯರನ್ನು ಒತ್ತಾಯಿಸಬೇಕು.
- ಗ್ರಾಮಸಭೆಗಳ ಮೂಲಕ ಮಹಿಳೆಯರ ಮೇಲಿನ ಹಿಂಸೆಯ (VAW) ಬಗ್ಗೆ ತಿಳಿವಳಿಕೆ ಮೂಡಿಸಲು ಸಮುದಾಯಗಳನ್ನು ತರಬೇತುಗೊಳಿಸಬೇಕು.

**ಕೋಲಾರ ಜಿಲ್ಲೆ**

ಕೋಲಾರ ಜಿಲ್ಲೆಯ ಪ್ರತಿನಿಧಿಗಳು ತಮ್ಮ ಭಾಗದಲ್ಲಿ ಮದ್ಯಪಾನ ಚಟವೇ ಪ್ರಮುಖ ವಿಷಯವೆಂದು ಖಡಾಖಂಡಿತವಾಗಿ ಗುರುತಿಸಿದರು. ಇವರು ತಯಾರಿಸಿದ ಕ್ರಿಯಾ ಯೋಜನೆ ಹೀಗಿದೆ:

- ಹಳ್ಳಿಗಳಿಗೆ ಸಾರಾಯಿ ಸರಬರಾಜು ಮಾಡುವುದನ್ನು ನಿಲ್ಲಿಸಲು ಪೋಲಿಸರ ಸಹಾಯ ತೆಗೆದುಕೊಳ್ಳಬೇಕು.
- ಸಮುದಾಯಗಳಲ್ಲಿ ಮಹಿಳೆಯರ ಮೇಲಿನ ಹಿಂಸೆಯನ್ನು ತಡೆಗಟ್ಟಲು ಪೋಲಿಸ್ ಇಲಾಖೆ ಹಾಗೂ ಮಹಿಳಾ ಸಂಘಗಳು ಸೇರಿಕೊಂಡು ಜಂಟಿ ಕಾರ್ಯಯೋಜನೆ ರೂಪಿಸಲು ಒಂದು ಜಾಲ ರೂಪಿಸಬೇಕು.
- FIR ದಾಖಲು ಮಾಡಿದ ವ್ಯಕ್ತಿಗಳಿಗೆ ಅದರ ಒಂದು ಪ್ರತಿಯನ್ನು ಕೊಡುವ ಭರವಸೆ ನೀಡಬೇಕು.

ಗುಂಪು ಚರ್ಚೆ



ಕೊಡಗು ಜಿಲ್ಲೆ

ಜಿಲ್ಲಾ ಕಾರ್ಯ ಯೋಜನಾ ಮಂಡನೆ



ಶ್ರೀಮತಿ ಜಯಶಾಂತಿ, ಗ್ರಾ.ಪಂ. ಸದಸ್ಯೆ, ಕೊಡಗು ಜಿಲ್ಲೆ

- ಪೋಲಿಸ್ ಇಲಾಖೆಯಿಂದ ದೊರೆಯುವ ಸಹಾಯದ ಬಗ್ಗೆ ಜನರಲ್ಲಿ, ಸಮುದಾಯದಲ್ಲಿ ಎಲ್ಲಾ ಮಾಹಿತಿಯನ್ನು ಪ್ರಸಾರಗೊಳಿಸಬೇಕು. ಈ ಮಾಹಿತಿಯಲ್ಲಿ ವಿಧಿ-ವಿಧಾನಗಳು, ಹೆಸರು, ವಿಳಾಸಗಳು, ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು ಇತ್ಯಾದಿಗಳೆಲ್ಲವೂ ಇರಬೇಕು.

**ಕೊಪ್ಪಳ ಜಿಲ್ಲೆ**

ಕೊಪ್ಪಳ ಜಿಲ್ಲೆಯಲ್ಲಿ ಬಾಲ್ಯ ವಿವಾಹ, ದ್ವಿಪತ್ನಿತ್ವ ಹಾಗೂ ಮದ್ಯಪಾನಗಳು ಪ್ರಮುಖ ವಿಷಯಗಳೆಂದು ಹೇಳಲಾಯಿತು. ಮುಂಬರುವ ವರ್ಷಕ್ಕಾಗಿ ಸಿದ್ಧಗೊಳಿಸಿದ ಕಾರ್ಯಯೋಜನೆ ಇಂತಿದೆ :

- ಮಹಿಳೆಯರ ಮೇಲೆ ನಡೆಯುವ ಹಿಂಸೆಯನ್ನು ಸಮುದಾಯವು ಎದುರಿಸುವಂತೆ ಮಾಡಬೇಕು.
- ಮಹಿಳೆಯರ ಮೇಲಿನ ಹಿಂಸೆಗೆ ಸಂಬಂಧಿಸಿದ, ಇದುವರೆಗೆ ಪರಿಹಾರ ಕಾಣದ ಪ್ರಕರಣಗಳನ್ನು ದಾಖಲಿಸಲು, ಎದುರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾಡಲು ಪೋಲಿಸರನ್ನು ಒತ್ತಾಯಿಸಬೇಕು.
- ಸಮುದಾಯಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ, ಪೋಲಿಸರು ಮತ್ತು ಸಮುದಾಯಗಳೊಂದಿಗೆ ಸಂಪರ್ಕ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಯೋಜಿಸಬೇಕು.

**ಉಡುಪಿ ಜಿಲ್ಲೆ**

ಉಳಿದವಕ್ಕೆ ಹೋಲಿಸಿದರೆ ಸ್ವಲ್ಪ ಪ್ರಗತಿಪರ ಜಿಲ್ಲೆ ಎನಿಸಿರುವ ಉಡುಪಿ ಭಾಗದಲ್ಲಿ ವರದಕ್ಷಿಣೆಯೇ ಮುಖ್ಯ ವಿಷಯ ಎಂದು ಗುರುತಿಸಲಾಯಿತು. ಈ ಜಿಲ್ಲಾ ಪ್ರತಿನಿಧಿಗಳು ಸಿದ್ಧಪಡಿಸಿದ ಕಾರ್ಯಯೋಜನೆ ಕೆಳಗಿನ ಅಂಶಗಳನ್ನು ಒಳಗೊಂಡಿದೆ.


- ಮಹಿಳೆಯ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ದಾಖಲಿಸಲು, ಪೋಲಿಸರನ್ನು ಸಂಪರ್ಕಿಸಿ, ವಿಷಯ ಅವರ ಗಮನಕ್ಕೆ ತರಲು ಸೂಕ್ತವಾದ ವಾತಾವರಣ ನಿರ್ಮಿಸಬೇಕು.
- ಪ್ರತಿತಾಲ್ಲೂಕಿನಲ್ಲಿ ಮಹಿಳಾ ಪೋಲಿಸ್ ಠಾಣೆಗಳಿಗಾಗಿ ಒತ್ತಾಯಿಸಬೇಕು.
- ಮಹಿಳೆಯರ ಮೇಲಿನ ಹಿಂಸೆಗೆ ಸಂಬಂಧಿಸಿದ ಪ್ರಕರಣಗಳಿಗೆ ಅಗತ್ಯವಿರುವ ಸಾಕ್ಷ್ಯಾಧಾರಗಳನ್ನು ನೀಡುವಂತೆ ಮಾಡಲು ಸ್ಥಳೀಯ ಸರಕಾರೇತರ ಸಂಸ್ಥೆಗಳು ಭಾಗಿಯಾಗಬೇಕು.
- ಸಮುದಾಯದ ಸದಸ್ಯರಲ್ಲಿ ಮಹಿಳೆಯ ಹಕ್ಕುಗಳು ಮತ್ತು ತತ್ಸಂಬಂಧಿ ಕಾನೂನುಗಳ ಕುರಿತು ಅರಿವು ಮೂಡಿಸಬೇಕು. ಮುದ್ರಿತ ವಿಷಯಗಳು, ಬೀದಿ ನಾಟಕಗಳು, ಸಾರ್ವಜನಿಕ ಚರ್ಚೆಗಳು, ವರದಿ ಕಾರ್ಡುಗಳು ಮುಂತಾದ ಎಲ್ಲ ಮಾಧ್ಯಮಗಳನ್ನು ಈ ಕಾರ್ಯದಲ್ಲಿ ಬಳಸಿಕೊಳ್ಳಬೇಕು.
- ಸರಕಾರದಿಂದ ಕೊಡಮಾಡಲ್ಪಟ್ಟ, ಮಹಿಳೆಯರಿಗೆ ಸಂಬಂಧಿತ ನಿರ್ದಿಷ್ಟ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಬೇಕು.

ಗುಂಪು ಚರ್ಚೆ



ಕೋಲಾರ ಜಿಲ್ಲೆ

ಜಿಲ್ಲಾ ಕಾರ್ಯ ಯೋಜನಾ ಮಂಡನೆ




ಶ್ರೀಮತಿ ಪಾಪಮ್ಮ, ಗ್ರಾಮ ವಿಕಾಸ, ಕೋಲಾರ ಜಿಲ್ಲೆ

ಗುಂಪು ಚರ್ಚೆ



ಉಡುಪಿ ಜಿಲ್ಲೆ

ಜಿಲ್ಲಾ ಕಾರ್ಯ ಯೋಜನಾ ಮಂಡನೆ



ಶ್ರೀ ಜಗದೀಶ್, ಉಡುಪಿ ಜಿಲ್ಲೆ, ಸರ್ಕಲ್ ಇನ್ಸ್‌ಪೆಕ್ಟರ್

- ಈ ವಿಷಯಕ್ಕೆ ಸಂಬಂಧಿಸಿದ ಸರಕಾರಿ ಅಧಿಕಾರಿಗಳ ಹೆಸರು-ವಿಳಾಸ ಮತ್ತು ಯೋಜನೆಗಳ ಬಗೆಗಿನ ಮಾಹಿತಿ ಪ್ರಸಾರ ಮಾಡಬೇಕು. ಇದರಿಂದ, ಮಾಹಿತಿಯು ಎಲ್ಲರಿಗೂ, ವಿಶೇಷವಾಗಿ ಹೆಣ್ಣು ಮಕ್ಕಳಿಗೆ ತಲುಪುವಂತಾಗುತ್ತದೆ.

## ಸಮಾಲೋಚನೆಯ ಮುಕ್ತಾಯ

ರಾಷ್ಟ್ರೀಯ ಮಹಿಳಾ ಒಕ್ಕೂಟದ (NAWO) ಅಧ್ಯಕ್ಷೆಯಾದ ಶ್ರೀಮತಿ ರೂಥ್ ಮನೋರಮ ಅವರು ಸಮಾಲೋಚನೆಯನ್ನು ಮುಕ್ತಾಯಗೊಳಿಸುತ್ತಾ, "ಈ ಚರ್ಚೆಯು ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯನ್ನು ಅದರೆಲ್ಲ ಸಂಕೀರ್ಣತೆ ಮತ್ತು ಸಾಂಸ್ಕೃತಿಕ ಭಿನ್ನತೆಗಳೊಂದಿಗೆ ಅರ್ಥಮಾಡಿಕೊಳ್ಳಲು ಒಂದು ಅವಕಾಶ ನೀಡಿತು. 'ಗುಂಪು ಚರ್ಚೆಗಳು' ಮುಖ್ಯವಾಗಿ ಪೋಲಿಸರು, ಗ್ರಾಮಪಂಚಾಯತಿಗಳು, ಸರಕಾರೇತರ ಸಂಸ್ಥೆಗಳು ಮತ್ತು ಪ್ರೇರಕ ಸಂಸ್ಥೆಗಳಾದ GSU, ನಿಯಾಸ್‌ಗಳ ಪಾತ್ರಗಳ ಮೇಲೆ ಕೇಂದ್ರೀಕೃತವಾಗಿದ್ದವು. ಈ ಸಂಸ್ಥೆಗಳು ತಮ್ಮ ಪಾತ್ರಗಳನ್ನು ನಿರ್ವಹಿಸುವಾಗ, ಜಾಗತೀಕರಣ ಹಾಗೂ ಇತರ ಅಭಿವೃದ್ಧಿ ಪ್ರಕ್ರಿಯೆಗಳ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳಬೇಕು, ಏಕೆಂದರೆ, ಈ ಪ್ರಕ್ರಿಯೆಗಳೆಲ್ಲ ಮಹಿಳೆಯರು ಎದುರಿಸುತ್ತಿರುವ ನಾನಾ ಬಗೆಯ ಹಿಂಸೆಗಳ ಸ್ವರೂಪದ ಮೇಲೆ ನೇರ ಪರಿಣಾಮ ಬೀರುತ್ತಿರುತ್ತವೆ. ಆದ್ದರಿಂದ, ಎಲ್ಲ ಭಾಗಿದಾರರು ಕಷ್ಟಕರವಾದ ಸವಾಲನ್ನು ಎದುರಿಸಬೇಕಿದೆ" ಎಂದರು.

ಸಂಸ್ಥೆಯ ನಿಯಂತ್ರಕರಾದ ಮೆ॥ ಜ॥ ಪೌಲ್ ಅವರು ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀ ಮೋಟಮ್ಮನವರ ಕಾಳಜಿಯ ಬಗ್ಗೆ ಪ್ರಸ್ತಾಪ ಮಾಡಿ, ನಿಯಾಸ್‌ದ ಲಿಂಗಭೇದ ಅಧ್ಯಯನ ವಿಭಾಗವು, ಹಿಂಸಾರಹಿತ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿರುವ ಸರಕಾರದ ಪ್ರಯತ್ನದಲ್ಲಿ ಸಕ್ರಿಯವಾಗಿ ಕೈಜೋಡಿಸಬೇಕು ಎಂದು ಅಭಿಪ್ರಾಯಪಟ್ಟರು.

## ಸಮಾಲೋಚನೆಯ ಕಾರ್ಯಯೋಜನೆ

ಸಮಾಲೋಚನೆಯ ಉದ್ದೇಶಗಳ ಸಾಧನೆಗೆ, ಯೋಜನೆಯು ಅಳವಡಿಸಿಕೊಳ್ಳಬೇಕಾದ ಕಾರ್ಯತಂತ್ರಗಳನ್ನು ರೂಪಿಸಿದವು. ಅವು ಯಾವುವೆಂದರೆ:

**ಸಾಂಸ್ಕೃತಿಕ ವಿಶಿಷ್ಟತೆ** : ಮಹಿಳೆಯ ಮೇಲೆ ನಡೆಯುತ್ತಿರುವ ಬಹಳಷ್ಟು ರೀತಿಯ ಹಿಂಸೆ ಸಾಂಸ್ಕೃತಿಕವಾಗಿ ಸೂಕ್ಷ್ಮವಾಗಿರುವಂಥದ್ದು. ಅದರ ಅಭಿವ್ಯಕ್ತಿ, ಸ್ವೀಕಾರ, ಅದಕ್ಕೆ ಬರುವ ಪ್ರತಿಕ್ರಿಯೆಗಳೆಲ್ಲ ಆಯಾ ಸಾಂಸ್ಕೃತಿಗಳಲ್ಲಿ ಭಿನ್ನಭಿನ್ನವಾಗಿರುತ್ತದೆ. ಆದ್ದರಿಂದ ಸಮಾಲೋಚನೆಯು, ಹಿಂಸೆಯನ್ನು ಅದರ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾದ್ದು ಅಗತ್ಯ ಎಂದು ಭಾವಿಸಿತು. ಮತ್ತು ಸಮುದಾಯಗಳನ್ನು ಈ ವಿಷಯದಲ್ಲಿ ಜಾಗೃತಿಗೊಳಿಸಲು, ಆಯಾ ಸಂಸ್ಕೃತಿಯ ಅರಿವಿನೊಂದಿಗೇ ಆಗಬೇಕೆಂದು ಒಪ್ಪಿಕೊಂಡಿತು.



ಸಮಾಲೋಚನೆಯ ಸಮಾರೋಪ - ಶ್ರೀಮತಿ ರೂತ್ ಮನೋರಮ, ನ್ಯಾವೋ

**ಸಮುದಾಯಗಳ ಜಾಗೃತಿ :** ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯ ಬಗ್ಗೆ, ಅದರಲ್ಲೂ ಆಪ್ತ ಸಂಬಂಧಗಳಲ್ಲಿ ನಡೆಯುವ ಹಿಂಸೆಯ ಬಗ್ಗೆ-ಸಾಂಸ್ಕೃತಿಕವಾಗಿ ಒಪ್ಪಿತ ಬಲಪ್ರಯೋಗಗಳ ಬಗ್ಗೆ ಮಾತನಾಡಲು ಸಮುದಾಯಗಳು ಹಿಂಜರಿಯುತ್ತವೆ ಎಂದು ಕ್ಷೇತ್ರಕಾರ್ಯಗಳಿಂದ ಒದಗಿದ ಅನುಭವದ ಒಳನೋಟಗಳು ಮತ್ತು ಸಮಾಲೋಚನೆಯ ಚರ್ಚೆಗಳಿಂದ ತಿಳಿದು ಬಂದಿದೆ. ಇದರೊಂದಿಗೇ, ಹೆಣ್ಣು ಮಕ್ಕಳಿಗೆ ಬೆಂಬಲ ನೀಡಬೇಕಾದ ವ್ಯವಸ್ಥೆಯ ನಿರ್ಲಕ್ಷದಿಂದಾಗಿ ನಡೆಯುತ್ತಿರುವ ಹಿಂಸೆಗಳ ಬಗ್ಗೆ ತಾತ್ಸಾರ ಮನೋಭಾವ ತಳೆದಿವೆ. ಆದ್ದರಿಂದ ಸಮಾಲೋಚನೆಯು, ಸಮುದಾಯಗಳಲ್ಲಿ ಈ ಕುರಿತು ಜಾಗೃತಿ ಮೂಡಿಸುವಾಗ ಸಾಂಸ್ಕೃತಿಕವಾಗಿ ಒಪ್ಪಿತವಾದ ಸಂಕೇತ ಮತ್ತು ಭಾಷೆಯನ್ನು ಪರಿಣಾಮಕಾರಿಯಾಗಿ ಉಪಯೋಗಿಸುವ ಹೊಸ ವಿಧಾನಗಳನ್ನು ಅವಿಷ್ಕಾರ ಮಾಡಬೇಕೆಂದು ತೀರ್ಮಾನಿಸಿತು.

**ಮೂಲ ಮಾಹಿತಿಯನ್ನು ಒದಗಿಸುವುದು**

ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಯ ಬಗ್ಗೆ ಅರಿವು ಮೂಡಿಸಲು ಇರುವ ಪರಿಣಾಮಕಾರಿ ಮಾರ್ಗಗಳಲ್ಲಿ ಹೆಚ್ಚು ಸೂಕ್ತವಾದುದು ಎಂದರೆ, ಜನರಿಗೆ ಈ ಕುರಿತ ಮಾಹಿತಿ ಒದಗಿಸುವುದು. ಮಹಿಳೆಯರು ಎದುರಿಸುತ್ತಿರುವ ಹಿಂಸೆಯ ಬಗೆಗಿನ ಸಾಹಿತ್ಯ. ಹಿಂಸೆಗೆ ಬಲಿಯಾದವರ ಪ್ರಕರಣ ಅಧ್ಯಯನ ಮಾಹಿತಿ, ಮಹಿಳೆಯರ ಕಾನೂನು ಬದ್ಧ ಹಕ್ಕುಗಳು ಹಿಂಸೆಯ ವಿರುದ್ಧ ಇರುವ ಕಾನೂನುಗಳು, ಸರಕಾರಿ ಇಲಾಖೆಗಳ ಬೆಂಬಲ, ಈ ಕುರಿತು ಕೆಲಸ ಮಾಡುತ್ತಿರುವ ಸರಕಾರೇತರ ಸಂಸ್ಥೆಗಳು, ಅನುಷ್ಠಾನ ಸಂಸ್ಥೆಗಳು ಇವೆಲ್ಲವೂ ಆ ಮೂಲ ಮಾಹಿತಿ ಸಾಹಿತ್ಯದಲ್ಲಿ ಅಡಕವಾಗಿರಬೇಕು. ಅಲ್ಲದೇ, ಬೀದಿನಾಟಕ, ಸಾರ್ವಜನಿಕ ಚರ್ಚೆ, ಸಾಂಸ್ಕೃತಿಕ ಚಟುವಟಿಕೆಗಳನ್ನು ಸಹ ಈ ಉದ್ದೇಶ ಸಾಧನೆಗೆ ಪೂರಕವಾಗಿ ಬಳಸಿಕೊಳ್ಳಬಹುದು.

**ಸಂಬಂಧಿಸಿದವರನೆಲ್ಲ ತೊಡಗಿಸಿಕೊಳ್ಳುವುದು**

ಮಹಿಳೆಯರ ಮೇಲಿನ ದೌರ್ಜನ್ಯ ಜೀವನದ ಎಲ್ಲಾ ರಂಗಗಳಲ್ಲೂ ಹರಡಿಕೊಂಡಿದೆ. ಆದ್ದರಿಂದ, ವಿಷಯವನ್ನು ಎದುರಿಸುವ ಸಮುದಾಯದ ಯಾವುದೇ ಪ್ರಯತ್ನದಲ್ಲಿ ಪೋಲಿಸರು, ಸರಕಾರಿ ಅಧಿಕಾರಗಳು, ಪಂಚಾಯತ್ ರಾಜ್ ವ್ಯವಸ್ಥೆಯ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳೆಲ್ಲ ಭಾಗಿಗಳಾಗಿರಬೇಕು. ಈ ಎಲ್ಲ ಶಕ್ತಿಗಳನ್ನು ಹಳ್ಳಿ, ತಾಲ್ಲೂಕು, ಜಿಲ್ಲಾ ಮಟ್ಟಗಳಲ್ಲೆಲ್ಲ ತೊಡಗಿಸಿಕೊಳ್ಳಬೇಕು. ಏಕೆಂದರೆ, ಆಯಾ ಮಟ್ಟಗಳಲ್ಲಿ ಈ ಶಕ್ತಿಗಳು ಸಮುದಾಯಗಳೊಂದಿಗೆ ಹೆಚ್ಚಾಗಿ ಸಂಪರ್ಕದಲ್ಲಿರುತ್ತದೆ. ಆದ್ದರಿಂದ ಪ್ರಜ್ಞಾ ಪೂರ್ವಕವಾಗಿ ಈ ಶಕ್ತಿಗಳನ್ನು ತೊಡಗಿಸಿಕೊಳ್ಳಬೇಕೆಂದು ಸಮಾಲೋಚನೆ ಒಪ್ಪಿಕೊಂಡಿತು.

**ಕಾನೂನು ತರಬೇತಿ :** ಇದು, ಸಮಸ್ಯೆಯ ಪರಿಹಾರಾತ್ಮಕ ಕಾನೂನು ಪ್ರಕ್ರಿಯೆಯ ಬಗ್ಗೆ ಸಮುದಾಯದ ಅರಿವನ್ನು ಹೆಚ್ಚಿಸುತ್ತದೆ. ಮಹಿಳೆಯರಿಗೆ ಕಾನೂನು ತರಬೇತಿ - ತಿಳಿವಳಿಕೆ ಕೊಡುವುದಲ್ಲದೇ, ಪುರುಷರು ಮತ್ತು ಯುವಕರು ಸಹ ಈ ತರಬೇತಿಯಲ್ಲಿ ಭಾಗವಹಿಸುವಂತಾಗಬೇಕು. ಇದರಿಂದ, ಸಮುದಾಯದೊಳಗೆ ಧನಾತ್ಮಕ ಪರಿವರ್ತನೆ ತರಲು ಅವರು ಶಕ್ತಿಯುತ ಸಾಧನಗಳಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ.

**ಸರಕಾರದ ಹೊಣೆಗಾರಿಕೆಯನ್ನು ಎಚ್ಚರಿಸುವುದು :** ಸಮಾಲೋಚನೆಯಲ್ಲಿ ಭಾಗವಹಿಸಿದ್ದವರೆಲ್ಲ ಸರಕಾರದ ಹೊಣೆಗಾರಿಕೆಯು ಅತೀ ಮುಖ್ಯ ಅಂಶ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಪೋಲಿಸು ಇಲಾಖೆಯಿಂದ ಪ್ರಕರಣಗಳ ಪೂರ್ಣ ತನಿಖೆ ಆಗಲೀ ಅಥವಾ ಕುಟುಂಬ ನ್ಯಾಯಾಲಯಗಳಲ್ಲಿ ಕಾದಿರುವ ಪ್ರಕರಣಗಳೇ ಆಗಲೀ, ಒಟ್ಟು ಸರಕಾರಿ ಯಂತ್ರವು ಈ ವಿಷಯದಲ್ಲಿ ಧನಾತ್ಮಕವಾಗಿ ಪ್ರತಿಕ್ರಿಯಿಸಬೇಕು. ಈ ವಿಷಯಕ್ಕೆ ಸಂಬಂಧಿಸಿದ ವಿವಿಧ ಸಂಘಟನೆಗಳಲ್ಲಿ ಚರ್ಚೆಯನ್ನು - ವಿಚಾರ ವಿನಿಮಯಗಳನ್ನು ಏರ್ಪಡಿಸುವ ಮತ್ತು ಸಂಬಂಧಿಸಿದ ಎಲ್ಲರ ಹೊಣೆಗಾರಿಕೆಯನ್ನು ಎಚ್ಚರಿಸುವ ಪ್ರಮುಖ ಪಾತ್ರವನ್ನು ನಿಯಾಸ್ ವಹಿಸಬೇಕು ಎಂದು ಸಮಾಲೋಚನೆ ಅಭಿಪ್ರಾಯಪಟ್ಟಿತು.

## ಮುಕ್ತಾಯ

ಮಹಿಳೆಯರ ಮೇಲೆ ನಡೆಯುತ್ತಿರುವ ಹಿಂಸೆಗೆ ಸಂಬಂಧಿಸಿದಂತೆ ಕಾರ್ಯಪ್ರವೃತ್ತರಾಗಿರುವವರೆಲ್ಲ ಒಂದು ವೇದಿಕೆಯ ಮೇಲೆ ಬಂದು, ಸಮಸ್ಯೆಯ ಪರಿಹಾರಕ್ಕೆ ತಮ್ಮ ತಮ್ಮ ಬದ್ಧತೆಗಳನ್ನು- ಕಾಳಜಿಗಳನ್ನು ವ್ಯಕ್ತಪಡಿಸಲು, ಸಮಾಲೋಚನೆ ಒಂದು ಅವಕಾಶ ಮಾಡಿಕೊಟ್ಟಿತು. ವಿಷಯದ ಸಂಕೀರ್ಣತೆಯನ್ನು ಮತ್ತು ಸಾಂಪ್ರದಾಯಿಕ, ಅಜ್ಞಾನಪೂರಿತ, ತಿರಸ್ಕಾರ ಭಾವನೆಗಳು ಹೇಗೆ ಈ ಹಿಂಸೆ ಮುಂದುವರೆಯುವಂತೆ ಮಾಡುತ್ತವೆ ಎಂದು ವಿವಿಧ ಸಮುದಾಯಗಳು ತಮ್ಮವೇ ಆದ ವಿಭಿನ್ನ ಪ್ರತಿಕ್ರಿಯೆಗಳನ್ನು ನೀಡಲು ಅವಕಾಶ ನೀಡಿತು. ಇನ್ನೂ ಮುಖ್ಯ ಅಂಶವೆಂದರೆ, ಭಾಗೀದಾರರ ನಡುವಿನ ಅಂತರವನ್ನು ಕಡಿಮೆಗೊಳಿಸಿದ್ದು, ಇದೊಂದು ಸರಿಯಾದ ದಿಸೆಯಲ್ಲಿ ಇಟ್ಟ ಪ್ರಥಮ ಸರಿ ಹೆಜ್ಜೆ. ಹಿಂಸೆರಹಿತ ಸಮಾಜ ನಿರ್ಮಾಣದಲ್ಲಿ ಸಮುದಾಯ ಭಾಗಿಯಾಗುವುದು, ಅದರಲ್ಲೂ ಪುರುಷರು ಭಾಗಿಗಳಾಗಬೇಕಾದ್ದು ಅತ್ಯಂತ ಅವಶ್ಯ ಎಂದು ಸಮಾಲೋಚನೆ ಪುನರುಚ್ಚರಿಸಿತು.



ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ ಬೆಂಗಳೂರಿನಲ್ಲಿ ಶುಕ್ರವಾರ ಏರ್ಪಡಿಸಿದ್ದ 'ಮಹಿಳೆಯರ ಮೇಲಿನ ದೌರ್ಜನ್ಯ' ಕುರಿತ ಒಂದು ದಿನದ ಸಲಹಾ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಮೋಟಮ್ಮ (ಬಲದಿಂದ ಎರಡನೆಯವರು) ಅವರ ಜೊತೆ ವಿವಿಧ ಸಂಘಟನೆಗಳ ಸದಸ್ಯರು ಚರ್ಚಿಸುತ್ತಿದ್ದಾರೆ. ಚಿತ್ರದಲ್ಲಿ ಸಂಸ್ಥೆಯ ನಿರ್ದೇಶಕ ಪ್ರೊ. ರೊದ್ದಂ ನರಸಿಂಹ ಅವರನ್ನು ಕಾಣಬಹುದು.

# ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಕಲ್ಯಾಣ ಕೇಂದ್ರ

ಬೆಂಗಳೂರು, ಜೂನ್ 30– ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆಶ್ರಯ ನೀಡುವ ಸಲುವಾಗಿ ರಾಜ್ಯ ಸರ್ಕಾರ ನಾಲ್ಕು ವಿಭಾಗೀಯ ಕೇಂದ್ರಗಳಲ್ಲಿ 'ಮಹಿಳಾ ಕಲ್ಯಾಣ ಕೇಂದ್ರ'ಗಳನ್ನು ಆರಂಭಿಸಲಿದೆ.

ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ (ನಿಯಾಸ್) ಇಂದು ಏರ್ಪಡಿಸಿದ್ದ 'ಮಹಿಳೆಯರ ವಿರುದ್ಧ ದೌರ್ಜನ್ಯ' ಕುರಿತ ಒಂದು ದಿನದ ಸಲಹಾ ಸಭೆಯನ್ನು ಉದ್ಘಾಟಿಸಿದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಮೋಟಮ್ಮ ಅವರು, ಈ ಕೇಂದ್ರಗಳನ್ನು ಆರಂಭದಲ್ಲಿ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲ್ಬುರ್ಗಿಯಲ್ಲಿ ಆರಂಭಿಸಲಾಗುತ್ತದೆ. ಕಾಲ ಕ್ರಮೇಣ ಈ ರೀತಿಯ ಕೇಂದ್ರಗಳನ್ನು ಎಲ್ಲಾ [illegible] ವಿಸ್ತರಿಸಲಾಗುತ್ತದೆ ಎಂದರು.

ಸಮಾಜದಲ್ಲಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆಶ್ರಯ ನೀಡುವ ನಿಟ್ಟಿನಲ್ಲಿ ಹಗಲು ರಾತ್ರಿ ಕೆಲಸ ಮಾಡಲಿರುವ ಈ ಕೇಂದ್ರಗಳು ಮಾನಸಿಕ

## ಸಚಿವೆ ಮೋಟಮ್ಮ

ಸಲಹೆ ಮತ್ತು ಪುನರ್ವಸತಿ ಕಲ್ಪಿಸಲಾಗುತ್ತದೆ ಎಂದು ವಿವರಿಸಿದರು.

ಮಹಿಳಾ ಕಲ್ಯಾಣಕ್ಕೆ ರಾಜ್ಯ ಸರ್ಕಾರ ಹಮ್ಮಿಕೊಳ್ಳುತ್ತಿರುವ ವಿವಿಧ ಸುಧಾರಣಾ ಕಾರ್ಯಕ್ರಮಗಳಲ್ಲಿ ಮಹಿಳಾ ಕಲ್ಯಾಣ ಕೇಂದ್ರ ಸ್ಥಾಪನೆ ಸಹ ಸೇರಿದೆ. ಈಗಾಗಲೇ ಘೋಷಿಸಿರುವಂತೆ [illegible]

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ವಿಚಾರದಲ್ಲಿ ಪೊಲೀಸ್ ಮತ್ತು ನ್ಯಾಯಾಲಯಗಳು ಸ್ಪಂದಿಸಿ ಕರುಣೆಯಿಂದ ವರ್ತಿಸಬೇಕು ಎಂದು ಕೇಳಿಕೊಂಡ ಸಚಿವರು, ಪ್ರತ್ಯಕ್ಷ ಸಾಕ್ಷಿಯು ಅಗತ್ಯವನ್ನು ಒತ್ತಿಹೇಳಿದರೆ ಅನ್ಯಾಯವಾದ ವ್ಯಕ್ತಿಗೆ ನ್ಯಾಯ ದೊರಕುವುದಿಲ್ಲ. ಇದರ ಜೊತೆಯಲ್ಲಿ ಶಿಕ್ಷಾರ್ಹರು ಕಾನೂನಿನ ಚೌಕಟ್ಟಿನಿಂದ ತಪ್ಪಿಸಿಕೊಳ್ಳುತ್ತಾರೆ ಎಂದು ಹೇಳಿದರು.

ರಾಜ್ಯ ಸರ್ಕಾರಗಳು ವಿವಿಧ ಕಾನೂನನ್ನು ಜಾರಿಗೆ ತರುವ ಮೂಲಕ ಮಹಿಳೆಯರ ಅಭಿವೃದ್ಧಿಗೆ ನಿರಂತರವಾಗಿ ಯತ್ನಿಸುತ್ತಿದ್ದರೂ, ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ. ಇದಕ್ಕೆ ಕಾರಣ ಕಂಡುಹಿಡಿಯಬೇಕು ಎಂದು ಅವರು ಸಮಾಜ ವಿಜ್ಞಾನಿಗಳಲ್ಲಿ ಕೋರಿದರು.

ನಿಯಾಸ್ ನಿರ್ದೇಶಕ ರೊದ್ದಂ ನರಸಿಂಹ, ಮಾಜಿ ಸಂಸದ ಶಿವನಾರಾಯಣ ಸ್ವಾಮಿ, ನಿಯಾಸ್‌ನ ಲಿಂಗ ಅಧ್ಯಯನ ಕೇಂದ್ರದ ಡಾ.ಎನ್.ಶಾಂತ ಮೋಹನ್, ಮಹಿಳೆ, ಮಕ್ಕಳ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಪಾಲಾಕ್ಷಪ್ಪ ಪೂಜಾರ್, ಸಿಐಡಿ ಪೊಲೀಸ್ ಮಹಾ ನಿರ್ದೇಶಕ ಪಿ.ಪಿ.ಭಾಸ್ಕರ್ ಉಪಸ್ಥಿತರಿದ್ದರು.

# Government moots welfare centres for women

Staff Reporter


BANGALORE: Karnataka government plans to set up women's welfare centres in the divisional headquarters of Mysore, Gulbarga, Belgaum and Bangalore to provide shelter to victims of sexual harassment, exploitation and vio[illegible].

Minister for Women [illegible] Child Development Motam[illegible] [illegible]nounced this on Friday durin[illegible] consultation on 'Violence against women', conducted by the Gender Studies Unit (GSU) of the National Institute of Advanced Studies here. Motamma stressed on making helplines effective.

Despite public awareness, there were reports of unnatural deaths. With police and judiciary insisting on the availability of a witness or evidence to book cases against the culprit, adequate punitive action was not being taken, she observed.

Though a few programmes like Balika Samriddhi Yojane, where parents get Rs 500 on the birth of a girl child; attendance scholarship which supports the education of a girl till PU following regularity in attendance; a Rs 50,000-loan for income generation for women living below the poverty line along with 25 per cent subsidy, had been implemented, a lot more was desired to prevent atrocities against women. "We require a change in attitude among men. Women alone can't fight for their rights and privileges," Motamma noted.

Fouzia Hamza




**Karnataka Minister for Women and Child Welfare Motamma speaks at the inauguration of a consultation on Violence Against Women in Bangalore on Friday**

Enumerating the problems in different districts, fellow of GSU N. Shantha Mohan said a field study of 10 villages had shown that the issue of priority was state violence. Coorg, Bijapur and Koppal reeled under the scourge of child marriage and the devadasi system, and Udupi suffered the curse of exorbitant dowry and the ensuing ills.

The interactive session, with panelists including Justice Sadashiva, chief executive chairman of the Legal Services Authority; DGP-CoD V.V. Bhaskar; former MP C. Narayana Swamy; Paalakshappa Poojar, deputy director, department of women and child development, discussed how women should also form groups and fight atrocities.

Increasing alcoholism and the accompanying domestic violence was brought up by a participant from Chitradurga. Replying to her, former MP Narayanaswamy said the government should find other means of revenue. "Of what use can this ill-gotten wealth be," he questioned. Narayanaswamy suggested that government grant licence only after obtaining a no-objection certificate from local bodies.

The consultation was organised to chalk out a strategy to be followed in the 10 villages which will become model ones after the project's second phase in four years.

July 1, 2000, Times of India.

## State to set up women welfare centres soon

DH News Service

BANGALORE, June 30
Minister for Women and Child Development Motamma today said that the state government would soon set up "women welfare centres" to provide shelter for women who had subjected to harassment and atrocities, at the four divisional headquarters in the state.

Speaking after inaugurating a consultation on "violence against women" organised by the National Institute of Advanced Studies(NIAS), she said the centres would be initially set up in Bangalore, Mysore, Belgaum and Gulbarga and would be extended to all the other districts in a phased manner.

The centres will work round the clock and will provide shelter for women subjected to harassment and atrocities in the society. Counselling and rehabilitation facilities will also be provide at the centre.

She said the new scheme of providing shelter centres for women was a part of the series of projects launched by the government for the upliftment of women. The attendance scholarships for the girl child, loan facilities for women below the poverty line, announced by the government will be taken up in full swing shortly, she said. The minister stressed the importance of participation of men in eradicating social evils like dowry. "Men should shun their escapist attitude towards family problems and take up the responsibility of eradicating the evil," she said.

NIAS Director Roddam Narasimha, Dr N Shantha Mohan, fellow, Gender Studies Unit, NIAS, former MP C Narayana Swamy, Mr Paalakshappa Poojar, deputy director, department of women and child development, Mr V V Bhaskar, Director General of Police COD, were among those present.



Minister for Women and Child Welfare Motamma (second from right) listening to the grievances of delegates of various welfare women's organisations at a seminar on "Violence against women" in Bangalore on Friday. Prof R Narasimha, director, NIAS is also seen. DH Photo

July 1, 2000, Deccan Herald

**National Institute of Advanced Studies:** Women and Child Welfare Minister Motamma inaugurates consultation on "Violence against women", Prof Roddam Narasimha, director, NIAS, Dr N Shantha Mohan, fellow, Gender studies Unit, NIAS and Dr B K Anitha participate, NIAS Auditorium, IISC Campus, 10:30 am.

## Welfare centres for women

**By Our Staff Reporter**

BANGALORE, JUNE 30. The Minister for Women and Child Development, Ms. Motamma, said today that plans were afoot to start women welfare centres in the headquarters of four districts where women who were harassed and exploited could seek refuge.

Such centres would be opened in Bangalore, Belgaum, Mysore, and Gulbarga, initially. Later, centres would be opened in all other districts, she said.

Addressing a "consultation" on "Violence against Women" here, she said attendance scholarship and "Balika Samvrudhi Yojana" were among the programmes evolved by the Government to ensure that girl children were not neglected by their parents.

The consultation was organised by the Gender Studies Unit of the National Institute of Advanced Studies (NIAS). Eminent persons from the Judiciary, officials from the Police Department and the Department of Women and Child Development, and members of Non-Government Organisations (NGOs) participated.

Explaining the schemes, the minister said a girl student would be granted scholarship if she was found to have adequate attendance in school. This would be an incentive for the parents to allow her to pursue higher studies. Under "Balika Samvrudhi Yojana", a grant would be provided to the mother of a girl child, to motivate her.

Mr. Rodham Narasimha, Director, NIAS, expressed hope that the consultation would lead to a broad agreement on strategies for development.

THE HINDU. JULY 1st 2000

1. ಶ್ರೀಮತಿ. ಮೋಟಮ್ಮ
ಮಾನ್ಯ ಮಂತ್ರಿಗಳು
ಮಹಿಳೆ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು

2. ಪ್ರೊ. ರೋದ್ದಂ ನರಸಿಂಹ
ನಿರ್ದೇಶಕರು
ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
ಭಾರತಿಯ ವಿಜ್ಞಾನ ಸಂಸ್ಥೆಯ ಆವರಣ
ಬೆಂಗಳೂರು 12

3. ಡಾ॥ ಎನ್. ಶಾಂತಮೋಹನ್
ಫೆಲೋ
ಲಿಂಗ ಭೇದ ಅಧ್ಯಯನ ವಿಭಾಗ
ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ
ಭಾರತೀಯ ವಿಜ್ಞಾನ ಸಂಸ್ಥೆಯ ಆವರಣ
ಬೆಂಗಳೂರು 12

4. ನ್ಯಾಯ ಮೂರ್ತಿ ಸದಾಶಿವ
ನಿವೃತ್ತ ನ್ಯಾಯಮೂರ್ತಿ
ದೂ. 2863571(O) 6761453(R)

5. ಶ್ರೀ. ಹೆಚ. ಎನ್. ಸತ್ಯನಾರಾಯಣ ರಾವ್ (IPS)
ನಿರ್ದೇಶಕರು
ಕರ್ನಾಟಕ ಪೋಲಿಸ್ ಅಕಾಡಮಿ

6. ಶ್ರೀ. ವಿ. ವಿ. ಭಾಸ್ಕರ (IPS)
ಡೈರೆಕ್ಟರ್ ಜನರಲ್ ಆಫ್ ಪೋಲಿಸ್ - COD
ವಿಶೇಷ ತರಬೇತಿ ವಿಭಾಗ
ಕಾರ್ಲ್‌ಟನ್ ಹೌಸ್
ಬೆಂಗಳೂರು 1
ದೂ. 2254789

7. ಶ್ರೀಮತಿ. ಡೋನಾ ಫರ್ನಾಂಡೀಸ್
ವಿಮೋಚನ
2124, 16ನೇ ಬಿ ಮುಖ್ಯ ರಸ್ತೆ
ಹೆಚ್.ಎ. ಎಲ್. 2ನೇ ಹಂತ, 1 ಎ ಅಡ್ಡರಸ್ತೆ
ಬೆಂಗಳೂರು 38
ದೂ. 5269307

8. ಶ್ರೀ. ಎಸ್. ಕೆ. ಚಕ್ರವರ್ತಿ (IFS)
ಚೀಫ್ ಪ್ಲಾನ್ನಿಂಗ್ ಕರ್ನ್ಸವೇಟರ್ ಆಫ್ ಫಾರೆಸ್ಟ್
(ವನ್ಯ ಪ್ರಾಣಿ) ಮತ್ತು ಚೀಫ್ ವೈಲ್ಡ್ ವಾರ್ಡನ್
ಅರಣ್ಯ ಭವನ, 2 ನೇ ಮಹಡಿ
ಮಲ್ಲೇಶ್ವರಂ, 18 ನೇ ಅಡ್ಡ ರಸ್ತೆ,
ಬೆಂಗಳೂರು 80

9. ಗೀತಾ ಅರವಮುದಂ
ಪತ್ರಕರ್ತರು, "ಸಾಗರ್"
ಕೆ5/ 3, 10ನೇ ಅಡ್ಡರಸ್ತೆ
ರಾಜಮಹಲ್ ವಿಲಾಸ್ ಬಡಾವಣೆ
ಬೆಂಗಳೂರು - 80

10. ಶ್ರೀ. ಸಿ. ನಾರಾಯಣ
ಮಾಜಿ ಸಂಸದರು
ಎನ್.ಎನ್. ಫಾರ್ಮಾ, ಗೆದ್ದಲಹಳ್ಳಿ
ಬೆಂಗಳೂರು 94
ದೂ. 3412252

11. ಶ್ರೀ ಪಾಲಕ್ಷಪ್ಪ ಪೂಜಾರ
ಉಪ ನಿರ್ದೇಶಕರು
ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬಹು ಮಹಡಿ ಕಟ್ಟಡ
ವಿಧಾನ ಸೌಧ ವೀಧಿ, ಬೆಂಗಳೂರು

12. ಶ್ರೀಮತಿ ರೂತ್ ಮನೋರಮ
ಮಹಿಳಾ ಧ್ವನಿ
47, ಸೆಂಟ ಮಾರ್ಕ್ಸ್ ರೋಡ್
ಬೆಂಗಳೂರು - 560001

13. ಡಾ॥ ಅನಿತಾ ಬಿ.ಕೆ.
ರಿಸರ್ಚ್ ಫೆಲೋ
ಲಿಂಗಭೇದ ಅಧ್ಯಯನ ವಿಭಾಗ
ಭಾರತೀಯ ವಿಜ್ಞಾನ ಸಂಸ್ಥೆ ಅವರಣ
ಬೆಂಗಳೂರು 12

14. ಶ್ರೀ ಪ್ರಕಾಶ್ ಮುರಗೋಡ್
ಸರ್ಕಲ್ ಪೋಲಿಸ್ ಇನ್ಸಪೆಕ್ಟರ್
ಯಲಬುರ್ಗ ತಾಲೂಕ್
ಕೊಪ್ಪಳ ಜಿಲ್ಲೆ

15. ಶ್ರೀ ಸಣ್ಣ ತಿಮ್ಮಪ್ಪ
ಪೋಲಿಸ್ ಇನ್ಸ್‌ಪೆಕ್ಟರ್
ಗುಡಿ ಬಂಡೆ
ಕೋಲಾರ ಜಿಲ್ಲೆ

16. ಶ್ರೀ ಜಗದೀಶ
ಸರ್ಕಲ್ ಇನ್ಸ್‌ಪೆಕ್ಟರ್
ಉಡುಪಿ ಜಿಲ್ಲೆ

17. ಶ್ರೀ ಹೆಚ್. ಕೆ. ರೇವಣ್ಣ
ಸಿಪಿಡಿ, ಹೊಸದುರ್ಗ
ಚಿತ್ರದುರ್ಗ
ದೂ.20217(O) 20214(R)

18. ಕೆ.ಎನ್. ಮಾದಯ್ಯ
ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರ್
ಮಡಿಕೇರಿ ನಗರ

19. ಶ್ರೀ ಸುಜಿತ ಕುಮಾರ್ ಬ್ಯಾನರ್ಜಿ (ಐಪಿಎಸ್)
ಹೆಚ್ಚುವರಿ ಡೈರೆಕ್ಟರ್
ಜನರಲ್ ಆಫ್ ಪೋಲಿಸ್ - ಸಿಒಡಿ

20. ಶ್ರೀ. ಪಿ. ರವೀಂದ್ರನಾಥ್ (ಐಪಿಎಸ್)
ಎಸ್. ಪಿ. - ಸಿಒಡಿ

21. ಶ್ರೀ. ಪಿ. ಆರ್. ನಾಥ್ (ಐಪಿಎಸ್)
ಎಸ್. ಪಿ. - ಸಿಒಡಿ

22. ಶ್ರೀಮತಿ. ಡಿ. ಜಯಮ್ಮ
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
ಸಚಿವರ ವಿಶೇಷ ಅಧಿಕಾರಿ
ಕರ್ನಾಟಕ ಸರಕಾರ
ಬೆಂಗಳೂರು

23. ಶ್ರೀಮತಿ. ಮರ್ಸಿ ಕಪೇನ್
ವಿಸ್ತಾರ್, ದೊಡ್ಡ ಗುಬ್ಬಿ
ಬೆಂಗಳೂರು - 562 149
ಫೋನ್ : 8465294/295

24. ಶ್ರೀಮತಿ. ಮಂಜುಳ ಎ. ಹೂಗಾರ್
ಹಿರಿಯ ಸಂಪನ್ಮೂಲ ವ್ಯಕ್ತಿ
ಮಹಿಳಾ ಸಮಖ್ಯ, ಕರ್ನಾಟಕ
ಕಿನ್ನಾಳ ರಸ್ತೆ, ಕೊಪ್ಪಳ ಜಿಲ್ಲೆ

25. ಶ್ರೀಮತಿ. ಗುಂಡಮ್ಮ
ಭಾಗ್ಯಲಕ್ಷ್ಮೀ ಮಹಿಳಾ ಸಂಘ
ಬುಕನಟ್ಟಿ, ಯಲಬುರ್ಗ ತಾಲ್ಲೂಕ್
ವಿಜಾಪುರ ಜಿಲ್ಲೆ

26. ಶ್ರೀಮತಿ. ದುರ್ಗವ್ವ
ಭಾಗ್ಯಜ್ಯೋತಿ ಮಹಿಳಾ ಸಂಘ
ತಲಕೆರೆ, ಯಲಬರ್ಗ ತಾಲ್ಲೂಕ್,
ಕೊಪ್ಪಳ ಜಿಲ್ಲೆ

27. ಶ್ರೀಮತಿ. ಸರಸ್ವತಿ ಜೆ.ಆರ್.ಪಿ.
ಮಹಿಳಾ ಸಮಖ್ಯ ಕರ್ನಾಟಕ
ವಿಜಾಪುರ

28. ಶ್ರೀಮತಿ. ದಾನಮ್ಮ
ಮಲ್ಲಪುರ, ಮುಧೋಳ್ ತಾಲ್ಲೂಕ್
ವಿಜಾಪುರ ಜಿಲ್ಲೆ

29. ಶ್ರೀಮತಿ. ಸಲ್ಲೇಮ್ಮ
ಮಲ್ಲಪುರ, ಮುಧೋಳ್ ತಾಲ್ಲೂಕ್
ವಿಜಾಪುರ ಜಿಲ್ಲೆ

30. ಶ್ರೀ. ಸಿದ್ದಪ್ಪ ಮಠಪೂರ್
ಮಲ್ಲಪುರ,.
ಮುಧೋಳ್ ತಾಲ್ಲೂಕ್
ವಿಜಾಪುರ ಜಿಲ್ಲೆ

31. ಡಾ|| ಕೆ. ವಿಜಯಕುಮಾರ್
ಕನ್ಸಲ್ಟೆಂಟ್, ವಿಸ್ತಾರ
ಬೆಂಗಳೂರು

32. ಶ್ರೀಮತಿ. ಗಿರಿಜಾ ಎಂ. ಎಸ್.
ಗ್ರಾಮ ವಿಕಾಸ
ಮುಳಬಾಗಿಲು
ಕೋಲಾರ ಜಿಲ್ಲೆ

33. ಶ್ರೀ. ಸೀನಪ್ಪ ನಾಗಮಂಗಲ
ಗ್ರಾಮ ವಿಕಾಸ
ಮುಳಬಾಗಿಲು
ಕೋಲಾರ ಜಿಲ್ಲೆ

34. ಶ್ರೀಮತಿ. ನಾರಾಯಣಮ್ಮ
ಗ್ರಾಮ ವಿಕಾಸ
ಮುಳಬಾಗಿಲು
ಕೋಲಾರ ಜಿಲ್ಲೆ

35. ಶ್ರೀಮತಿ. ಪಾರ್ವತಮ್ಮ
ಗ್ರಾಮ ವಿಕಾಸ
ಮುಳಬಾಗಿಲು
ಕೋಲಾರ ಜಿಲ್ಲೆ

36. ಶ್ರೀಮತಿ. ಮುನಿವೆಂಕಟಮ್ಮ
ಗ್ರಾಮ ವಿಕಾಸ
ಮುಳಬಾಗಿಲು
ಕೋಲಾರ ಜಿಲ್ಲೆ

37. ಶ್ರೀ. ವೆಂಕಟಸ್ವಾಮಿ
ಗ್ರಾಮ ವಿಕಾಸ
ಮುಳಬಾಗಿಲು
ಕೋಲಾರ ಜಿಲ್ಲೆ

38. ಶ್ರೀ. ವೆಂಕಟರಾಮಪ್ಪ
ಗ್ರಾಮ ವಿಕಾಸ
ಮುಳಬಾಗಿಲು
ಕೋಲಾರ ಜಿಲ್ಲೆ

39. ಶ್ರೀ. ರಂಗಪ್ಪ
ಗ್ರಾಮ
ಚಳ್ಳಕೇರೆ
ಚಿತ್ರದುರ್ಗ ಜಿಲ್ಲೆ

40. ಶ್ರೀಮತಿ. ಗೌರಮ್ಮ
ಗ್ರಾಮ, ಚಳ್ಳಕೇರೆ
ಚಿತ್ರದುರ್ಗ ಜಿಲ್ಲೆ

41. ಶ್ರೀ. ಆರ್. ಲುಕೇಡ್

42. ಶ್ರೀ. ಎಸ್. ಜಿ. ಕೋಚ್ಚರ್
ನಂ.70, ಬಾರ್ಟನ್ ಸೆಂಟರ್
ಎಂ. ಜಿ. ರೋಡ್, ಬೆಂಗಳೂರು

43. ಡಾ|| ಎಂ. ಕೆ. ಸಾಹು
ಸೀನಿಯರ್ ಎಕ್ಸಿಕ್ಯೂಟೀವ್
ಸ್ಟೆಮ್
ಬೆಂಗಳೂರು

44. ಶ್ರೀಮತಿ ಅನುರಾಧ
ಮಹಿಳಾ ಸಮಖ್ಯ
ಕರ್ನಾಟಕ

45. ಶ್ರೀಮತಿ . ಡಿ. ಲಕ್ಷ್ಮೀ ರಾಣಿ
ಲಿಂಗಭೇದ ಸಂಯೋಜಕರು
ಗಾಂಧಿ ಪೀಸ್ ಸೆಂಟರ್
ಬೆಂಗಳೂರು

46. ಶ್ರೀ. ಸತೀಶ್. ಬಿ.
ಛಾಯಾಗ್ರಹಕ
ದಿ ಏಷ್ಯಯನ್ ಏಜ್

47. ಶ್ರೀ ವಿಜೇಶ್ ಕಾಮತ್
ಸಿಬ್ಬಂದಿ ವರದಿಗಾರ
ಡೆಕ್ಕನ್ ಹೆರಾಲ್ಡ

48. ಫೌಜಿಯ ಹಾರ್ಗ್ಗಿ
ದಿ ಟೈಮ್ಸ್ ಆಫ್ ಇಂಡಿಯಾ

49. ಆನಂದ ಕೆ.
ಫೋಟೋಗ್ರಾಪರ್
ರಾಜಾಸ್ತಾನ್ ಪತ್ರಿಕಾ

50. ಶ್ರೀಮತಿ. ಪದ್ಮನಿ ಸೀತಾರಾಮು
ದಿ ಹಿಂದು

51. ಶ್ರೀಮತಿ ಸುಮನ್ ಕೊಲಾರ್
NIPCCD
ಬೆಂಗಳೂರು

52. ಶ್ರೀಮತಿ ಉಷ ಅಬ್ರೋಲ್
NIPCCD
ಬೆಂಗಳೂರು

53. ಶ್ರೀಮತಿ ಸೀಮಾ ಸಿಂಗ್
ದಿ ಟೈಮ್ಸ್ ಆಫ್ ಇಂಡಿಯಾ

54. ಶ್ರೀ ಕೆ. ವೆಂಕಟೇಶ್
ಈ ನಾಡು

55. ರಮೇಶ್
ಸಿಟಿ ಚಾನಲ್

56. ಶ್ರೀ. ಹನುಮೇಶ್
ಉದಯ ಟಿ.ವಿ.

57. ಕುಮಾರಿ ಮಾರಿಯಮ್ ಡೈನಿಲ್
ಪೋಸ್ಟ್ ಬಾಕ್ಸ್ 8419
ಸೇಂಟ್ ಥಾಮಸ್ ನಗರ (ಪೋಸ್ಟ್)
ಬೆಂಗಳೂರು

58. ಕುಮಾರಿ. ಟಿ. ಎಸ್. ಕುಸುಮಾಕ್ಷಿ
ಗ್ರಾಮ ಚಳ್ಳಕೆರೆ
ಚಿತ್ರದುರ್ಗ ಜಿಲ್ಲೆ
ಫೋನ್ 50857

59. ಕುಮಾರಿ. ಅರುಣ ಬಾಲಕೃಷ್ಣ
ನಂ.73, ಮಿಲ್ಲರ್ಸ್ ರೋಡ್
ಬೆನ್ಸನ್ ನಗರ
ಬೆಂಗಳೂರು 560 046
ಫೋನ : 3330335

60. ಕುಮಾರಿ. ಕೃಷ್ಣ ಕುಮಾರಿ ಎಲ್. ರಾವ್
ಕೂಡು ಮಹಿಳಾ ಕಾರ್ಯಕ್ರಮ
ನಂ.73, ಮಿಲ್ಲರ್ಸ್ ರೋಡ್
ಬೆನ್ಸನ್ ನಗರ
ಬೆಂಗಳೂರು 560 046

61. ಶ್ರೀ . ಜಿ. ಗುಹಗಣೇಷನ್
ದೂರದರ್ಶನ
ಬೆಂಗಳೂರು

62. ಶ್ರೀ. ರಾಜೇಂದ್ರನ್
ದೂರದರ್ಶನ
ಬೆಂಗಳೂರು

63. ಶ್ರೀ. ಶಾಂತ ಕುಮಾರ್
ಛಾಯಾಗ್ರಹಕ
ಡೆಕ್ಕನ್ ಹೆರಾಡ್ಲ್ ಮತ್ತು ಪ್ರಜಾವಾಣಿ

64. ಶ್ರೀ ರಾಯ್ ಡೇವಿಡ್
ಕಾರ್ಡ್
ಕುಶಾಲ್‌ನಗರ

65. ಕುಮಾರಿ ಶಮೀಮ್
ಕಾರ್ಡ್
ಕುಶಾಲ್‌ನಗರ

66. ಕುಮಾರಿ ಶಾಂತಿ
ಕಾರ್ಡ್
ಕುಶಾಲ್‌ನಗರ

67. ಶ್ರೀ ರಾಜು
ಕಾರ್ಡ್
ಕುಶಾಲ್‌ನಗರ

68. ಶ್ರೀ ಯುನಸ್ ಸಲೀಮ್
ಫಾರ್‌ಮಾರ್ಸ್ ಡೆವಲಪ್‌ಮೆಂಟ್ ಎಜನ್ಸಿ
ನಂ. 240, 1ಕ್ರಾಸ್ ನಗರ್ತ್‌ಪೇಟ್
ಚಿಕ್ಕ ಬಳ್ಳಾಪುರ 562101
ಫೋನ್ 08156 - 73108
ಫ್ಯಾಕ್ಸ್ 08156 - 72586

69. ಕುಮಾರಿ . ರಾಜಲಕ್ಷ್ಮಿ
ಕೋಲಾರ ಜಿಲ್ಲೆ
70. ಕುಮಾರಿ. ದೀಪಾ ವಸಂತ್ ಕುಮಾರ್
ಐಎಸ್‌ಎಸ್‌ಟಿ, ಬೆಂಗಳೂರು
71. ಕುಮಾರಿ. ಸಂಗೀತ ಪುರುಷೋತ್ತಮ್
ಬಿ.ಪಿ.ಎಫ್., ಬೆಂಗಳೂರು
72. ಕುಮಾರಿ. ಸೈಮೋನ್ ಪುರೋಹಿತ್
ಬಿ.ಪಿ.ಎಫ್., ಬೆಂಗಳೂರು
73. ಡಾ|| ಉಷಾ ರಾಮ್ ಕುಮಾರ್
ಐಸೆಕ್, ನಾಗರಭಾವಿ
ಬೆಂಗಳೂರು 72
74. ಶ್ರೀಮತಿ. ಅನಿತ ಗುರುಮೂರ್ತಿ
ಐ ಐ ಎಂ, ಬೆಂಗಳೂರು
75. ಶ್ರೀ. ಮುರುಗೇಶ್ (ಐ.ಪಿ.ಎಸ್.)
76. ಕುಮಾರಿ. ಮೀರಾ
ಐ.ಎಸ್.ಎಸ್.ಟಿ , ನಂ.601
6ನೇ, ಫ್ಲೋರ್ ಮನಿಪಾಲ್‌ಸೆಂಟರ್
ನಂ. 47, ಡಿಕ್ಕೆನ್ಸ್ ರೋಡ್
ಬೆಂಗಳೂರು 42
ಫೋನ್ 5583701
77. ಶ್ರೀಮತಿ. ಆಶಾ ರಮೇಶ್
ರಿಸರ್ಚ್ ಅಸೋಸಿಯೇಟ್
ಲಿಂಗಭೇದ ಅಧ್ಯಯನ ವಿಭಾಗ
ನಿಯಾಸ್ ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12
79. ಶ್ರೀ. ಶ್ರೀನಾಥ್
ರಿಸರ್ಚ್ ಅಸೋಸಿಯೇಟ್
ಲಿಂಗಭೇದ ಐ.ಐ.ಎಸ್.ಸಿ.ಆವರಣ
ಬೆಂಗಳೂರು - 12
80. ಶ್ರೀಮತಿ. ಸುಧಾಮಣಿ
ಸಂಶೋಧನಾ ಸಂಯೋಜಕ
ಲಿಂಗಭೇದ ಅಧ್ಯಯನ ವಿಭಾಗ
ನಿಯಾಸ್ ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12
81. ಡಾ|| ಪರಮೇಶ್ವರಪ್ಪ
ಸಂಶೋಧನಾ ಸಂಯೋಜಕ
ಲಿಂಗಭೇದ ಅಧ್ಯಯನ ವಿಭಾಗ
ನಿಯಾಸ್ ಐ.ಐ.ಎಸ್.ಸಿ ಆವರಣ
ಬೆಂಗಳೂರು - 12
82. ಡಾ|| ಪುಗಳೇಂದಿ
ಸಂಶೋಧನಾ ಸಂಯೋಜಕ
ಲಿಂಗಭೇಧ ಅಧ್ಯಯನ ವಿಭಾಗ
ನಿಯಾಸ್ ಐ.ಐ.ಎಸ್.ಸಿ ಆವರಣ
ಬೆಂಗಳೂರು 12
83. ಶ್ರೀ. ಹೆಚ್. ಆರ್. ರಾಜೇಂದ್ರ
ಸಂಶೋಧನಾ ಸಂಯೋಜಕ
ಲಿಂಗಭೇಧ ಅಧ್ಯಯನ ವಿಭಾಗ
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12
84. ಶ್ರೀ. ವೇಣುಗೋಪಾಲ್
ಕಿರಿಯ ಸಂಶೋಧಕ
ಲಿಂಗಬೇಧ ಅಧ್ಯಯನ ವಿಭಾಗ
ನಿಯಾಸ್ ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12
85. ಶ್ರೀ. ಮಹೇಶ್‌ಕುಮಾರ್
ಕಿರಿಯ ಸಂಶೋಧಕ
ಲಿಂಗಬೇಧ ಅಧ್ಯಯನ ವಿಭಾಗ
ನಿಯಾಸ್ ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12
86. ಪ್ರೊ|| ಬಿ. ವಿ. ಶ್ರೀಕಂಠನ್
ಫಿಲಾಸಫಿ ಆಫ್ ಸೈನ್ಸ್
ಲಿಂಗಭೇಧ ಅಧ್ಯಯನ ವಿಭಾಗ
ಬೆಂಗಳೂರು - 12
87. ಪ್ರೊ|| ಪ್ರಭಾಕರ್ ಜೆ. ವೈದ್ಯ
ಸರ್ ಅಶುತೋಷ್ ಮುಖರ್ಜಿ
ಸಂದರ್ಶಕ ಪ್ರಾಧ್ಯಾಪಕ
ಲಿಂಗಭೇಧ ಅಧ್ಯಯನ ವಿಭಾಗ
ಬೆಂಗಳೂರು - 12
88. ಪ್ರೊ|| ದಿಲೀಪ್ ಅಹುಜಾ
ಐ.ಎಸ್.ಆರ್. ಓ.
ಪ್ರೊ|| ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ
ಪಾಲಿಸಿ ಸ್ಟಡೀಸ್
ನಿಯಾಸ್ ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12
89. ಪ್ರೊ|| ಸಿ. ವಿ. ಸುಂದರಂ
ಗೌರವ ಸಂದರ್ಶನ ಪ್ರಾಧ್ಯಾಪಕ
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

90. ಪ್ರೊ|| ಕೆ. ರಾಮಚಂದ್ರ
ಗೌರವ ಸಂದರ್ಶಕ ಪ್ರಾಧ್ಯಾಪಕ
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

91. ಡಾ|| ಹೆಚ್. ಕೆ. ಅನುಸೂಯ ದೇವಿ
ಫೆಲೋ ಎಪಿಗ್ರಫಿ ವಿಭಾಗ
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

92. ಡಾ|| ಎ. ಆರ್. ವಾಸವಿ
ಫೆಲೋ ಸಮಾಜಶಾಸ್ತ್ರ ಮತ್ತು
ಸಾಮಾಜಿಕ ಮಾನವಶಾಸ್ತ್ರ ವಿಭಾಗ
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

93. ಡಾ|| ಎಂ. ಜಿ. ನರಸಿಂಹನ್
ರಿಸರ್ಚ್ ಫೆಲೋ
ಫಿಲಾಸಫಿ ಆಫ್ ಸೈನ್ಸ್
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

94. ಡಾ|| ಪಿ. ಕೆ. ಶೆಟ್ಟಿ
ರಿಸರ್ಚ್ ಫೆಲೋ
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

95. ಡಾ|| ಅನಿಂಧ್ಯ ಸಿನ್ಹಾ
ರಿಸರ್ಚ್ ಫೆಲೋ
ಫಿಲಾಸಫಿ ಆಫ್ ಸೈನ್ಸ್
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

96. ಶ್ರೀ. ಅರವಿಂದ ಕುಮಾರ್
ರಿಸರ್ಚ್ ಅಸೋಸಿಯೇಟ್
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

97. ಡಾ|| ಸಂಗೀತ ಮೆನನ್
ರಿಸರ್ಚ್ ಫೆಲೋ
ಫಿಲಾಸಫಿ ಆಫ್ ಸೈನ್ಸ್
ನಿಯಾಸ್, ಐ.ಐ.ಎಸ್.ಸಿ. ಆವರಣ
ಬೆಂಗಳೂರು - 12

## ಇತ್ತೀಚಿನ ಪ್ರಕಟಣೆಗಳು

**ವರದಿ**

R5-00 ಸಂಕಲ್ಪಗಳ ಸಮರಸ (ಲಿಂಗಭೇದ ಮತ್ತು ಅಧಿಕಾರ)
ಎನ್. ಶಾಂತಾ ಮೋಹನ್, ಆಶಾ ರಮೇಶ್ ಮತ್ತು ಪಿಯೂಶ್ ಆಂಥೋನಿ
ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ (NIAS)
ರೂ. 100/-
ISBN 81-87663-12-X

ISBN 81-87663-13-8